ಆಹಾರ-ಅಹಿಂಸೆ-ಧರ್ಮ

ಡಾ| ಎಮ್.ಜೆ. ಇನಾಮದಾರ

ಪರಮದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಆಹಾರ ಸೇವನೆಯು ಮಾನವನ ಮೂಲಭೂತ ಆವಶ್ಯಕತೆಯಾಗಿದೆ. ಆಹಾರವಿಲ್ಲದೆ ಆತ ಬದುಕಲಾರ. ಆಹಾರಕ್ಕಾಗಿ ಮಾನವನು ಅನಾದಿ ಕಾಲದಿಂದಲೇ ಬೇಟೆಯಾಡುವುದನ್ನು ರೂಢಿಸಿಕೊಂಡಿದ್ದನು. ಧಾರ್ಮಿಕ ಕಾರ್ಯಗಳಿಗಾಗಿಯೂ ಬಲಿ ನೀಡುವ ಉದ್ದೇಶದಿಂದ ಪ್ರಾಣಿ ಬಲಿ ನೀಡುವುದೂ ಪ್ರಾಚೀನ ಕಾಲದಿಂದಲೇ ನಡೆದು ಬಂದ ಸಂಪ್ರದಾಯ. ಜೊತೆಗೆ ತರಕಾರಿ, ಹಣ್ಣು ಹಂಪಲು ಇತ್ಯಾದಿಗಳೂ ಅವನ ಆಹಾರದಲ್ಲಿ ಸೇರಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಂಸಭಕ್ಷಣೆ, ಅದಕ್ಕಾಗಿ ಪ್ರಾಣಿವಧೆ ಮಾಡುವುದನ್ನು ತೀವ್ರವಾಗಿ ವಿರೋಧಿಸುವ ಒಂದು ಗುಂಪು ಈ ದೇಶದಲ್ಲಿ ಕಾರ್ಯವೆಸಗುತ್ತಿದೆ. ಪ್ರಾಣಿ ವಧೆಯನ್ನು ಕೇವಲ ಮುಸ್ಲಿಮರೇ ಮಾಡುತ್ತಿರುವರೇನೋ ಎಂಬಂತೆ ಬಿಂಬಿಸಲಾಗುತ್ತದೆ. ಅದಕ್ಕಾಗಿ ಈ ಶಕ್ತಿಗಳು ಗೋವಿಗೆ ಪೂಜನೀಯ ಸ್ಥಾನ ಕಲ್ಪಿಸಿ ಅದರ ಹೆಸರಲ್ಲಿ ಮನುಷ್ಯ-ಮನುಷ್ಯರ ಮಧ್ಯೆ ದ್ವೇಷ ಹುಟ್ಟಿಸಿ ತಮ್ಮ ಕಾರ್ಯಸಾಧಿಸ ಹೊರಟಿದ್ದಾರೆ.

ವಸ್ತುತಃ ಮುಸ್ಲಿಮರು ಮಾತ್ರ ಪ್ರಾಣಿವಧೆ ಅಥವಾ ಮಾಂಸ ಭಕ್ಷಣೆ ಮಾಡುವವರಲ್ಲ. ಲೋಕದ ಎಲ್ಲ ಜನಾಂಗಗಳಲ್ಲೂ ಮಾಂಸಾಹಾರಿಗಳಿದ್ದಾರೆ. ಸ್ವತಃ ಹಿಂದೂಗಳ ಸನಾತನ ಧರ್ಮಗಳಲ್ಲೇ ಪ್ರಾಣಿ ಬಲಿ, ಮಾಂಸಭಕ್ಷಣೆಯ ಉಲ್ಲೇಖಗಳಿವೆ. ಉದಾ: ಮನುಸ್ಮೃತಿಯಲ್ಲಿ ಮಾಂಸ ಭಕ್ಷಿಸುವುದನ್ನು ವಿರೋಧಿಸಿದ ಶ್ಲೋಕಗಳಿರುವುದರ ಜೊತೆಗೆ ಮಾಂಸಭಕ್ಷಣೆಯ ಪರವಾಗಿರುವ ಅನೇಕ ಶ್ಲೋಕಗಳೂ ಇವೆ. ಆದುದರಿಂದ ಮಾಂಸಾಹಾರದ ಕುರಿತು ನಡೆಸುವಂತಹ ಅಪಪ್ರಚಾರಗಳ ಪೊಳ್ಳುತನ ಹಾಗೂ ಅದರಿಂದಾಗಿ ಜನ-ಮನದಲ್ಲಿ ಮೂಡುವ ಸಂದೇಹ, ತಪ್ಪುಕಲ್ಪನೆಗಳನ್ನು ನೀಗಿಸುವ ಉದ್ದೇಶದಿಂದ ಬಿಜಾಪುರದ ಪ್ರಖ್ಯಾತ ನೇತ್ರತಜ್ಞ ಡಾ| ಎಂ.ಜೆ. ಇನಾಮದಾರ ಅವರು "ಆಹಾರ-ಅಹಿಂಸೆ-ಧರ್ಮ" ಎಂಬ ಈ ಕೃತಿಯನ್ನು ರಚಿಸಿದ್ದಾರೆ. ಇದು ಅವರ ಚೊಚ್ಚಲ ಕೃತಿಯಾಗಿದೆ. ಮುಂದೆಯೂ ಅವರಿಂದ ಇಂತಹ ವಿಚಾರಪ್ರದ ಬರಹಗಳು ಬೆಳಕು ಕಾಣಲೆಂದು ಹಾರೈಸುತ್ತಾ ಇದರ 4ನೇ ಆವೃತ್ತಿಯನ್ನು ವಾಚಕರ ಮುಂದಿಡುತ್ತಿದ್ದೇವೆ. ಇದರ ಅಧ್ಯಯನದಿಂದ ದೇಶ ಬಾಂಧವರ ಸಂದೇಹ-ತಪ್ಪುಕಲ್ಪನೆಗಳು ದೂರವಾಗ ಬಹುದೆಂದು ನಿರೀಕ್ಷಿಸುತ್ತೇವೆ. ಅದೇ ರೀತಿ ಅಪ ಪ್ರಚಾರಗಳಿಂದ ಪ್ರಭಾವಿತರಾಗಿ ಮಾಂಸಾಹಾರವನ್ನೇ ತೊರೆಯಬೇಕೆಂದು ಸಲಹೆ ನೀಡುವ ಮುಸ್ಲಿಮ್ ಬುದ್ಧಿಜೀವಿಗಳೂ ಇದರ ಸದುಪಯೋಗ ಪಡೆಯಬಹುದು.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಆಹಾರ

ಮನುಷ್ಯನಿಗೆ ಬದುಕಲು ಗಾಳಿ, ನೀರು, ಆಹಾರ ಅತ್ಯಾವಶ್ಯಕ. ಈ ಮೂಲಭೂತ ಆವಶ್ಯಕತೆಗಳ ಈಡೇರಿಕೆಗಾಗಿ ಮನುಷ್ಯನು ಸಮೀಪದ ಪರಿಸರದಲ್ಲಿ ಶುದ್ಧ ಗಾಳಿ, ಸಾಕಷ್ಟು ನೀರು ಮತ್ತು ಆಹಾರ ಸಿಗುವ ಸುರಕ್ಷಿತ ಸ್ಥಳಗಳನ್ನು ಆಯ್ದು ಜೀವನ ಸಾಗಿಸುತ್ತ ಬಂದಿದ್ದಾನೆ. ಆದಿ ಮಾನವನು ಪರಿಸರದಲ್ಲಿ ಲಭ್ಯವಿರುವ ಹಣ್ಣು-ಹಂಪಲು, ತರಕಾರಿ, ಬೇಟೆಯಾಡಿದ ಮಾಂಸ, ಮೀನು ಇತ್ಯಾದಿಗಳನ್ನು ಆಹಾರವಾಗಿ ಸೇವಿಸುತ್ತಿದ್ದನು.

ಮನುಷ್ಯನ ಜೀವವಿಕಾಸದಲ್ಲಿ ಸರ್ವತೋಮುಖ ಪ್ರಗತಿಯಾಗುತ್ತ ಬಂದಿದೆ. ಆರೋಗ್ಯ, ಕೃಷಿ, ಹೈನುಗಾರಿಕೆ, ಪ್ರಾಣಿಸಾಕಣಿಕೆ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನದಲ್ಲಿ ಆದ ಪ್ರಗತಿ, ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳಂತಹ ಪ್ರಕ್ರಿಯೆಗಳಿಂದ ದೇಶ-ವಿದೇಶಗಳ ಆಹಾರ ಶೈಲಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆಹಾರ ಪದಾರ್ಥಗಳ ಉತ್ಪನ್ನ, ತಯಾರಿಕೆ, ಶೇಖರಣೆ, ದಾಸ್ತಾನು, ಆಮದು-ರಫ್ತು, ಉಪಯೋಗಿಸುವ ರೀತಿ-ನೀತಿಗಳ ಮೇಲೆ ಗಾಢ ಪ್ರಭಾವ ಬೀರಿದೆ.

ನಮ್ಮ ಶರೀರದ ರಚನೆ ಕೋಟ್ಯಂತರ ಸೂಕ್ಷ್ಮ ಜೀವಕೋಶಗಳಿಂದಾಗಿದೆ. ಪ್ರತಿಯೊಂದು ಜೀವಕೋಶದಲ್ಲಿ ನಿರಂತರ ಆಂತರಿಕ ದಹನ ಕ್ರಿಯೆ(Metabolism) ನಡೆಯುತ್ತಿದ್ದು ಇದರಿಂದ ದೇಹಕ್ಕೆ ಬೇಕಾದ ಶಕ್ತಿ(Energy) ಲಭಿಸುತ್ತಿರುತ್ತದೆ. ಶರೀರದ ಜೀವಕೋಶಗಳ ಅಸ್ತಿತ್ವ, ಬೆಳವಣಿಗೆ, ರಕ್ಷಣೆ ಹಾಗೂ ಚಟುವಟಿಕೆಗೆ ಈ ಕ್ರಿಯೆ ಅತ್ಯಾವಶ್ಯಕ. ಈ ಆಂತರಿಕ ದಹನ ಕ್ರಿಯೆಗೆ ಆಹಾರ ಆವಶ್ಯಕ. ಈ ಕ್ರಿಯೆಯಲ್ಲಿ ಆಹಾರದ ವಿವಿಧ ಘಟಕಗಳು ವಿವಿಧ ರೀತಿಯಲ್ಲಿ ಪಾಲ್ಗೊಳ್ಳುತ್ತವೆ. ಈ ಆಹಾರ ಘಟಕಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಯಾವ ಘಟಕ ಯಾವ ಪ್ರಮಾಣದಲ್ಲಿ ನಮ್ಮ ಸಂತುಲಿತ ಆಹಾರದಲ್ಲಿರಬೇಕೆನ್ನುವುದನ್ನು ಕಂಡು ಹಿಡಿಯಲಾಗಿದೆ. ಜೀವನದ ವಿವಿಧ ಹಂತ ಹಾಗೂ ಸ್ಥಿತಿಗಳಾದ ಬಾಲ್ಯ, ಯೌವನ, ಮಧ್ಯ ವಯಸ್ಸು, ಮುಪ್ಪು, ಸ್ತ್ರೀಯರ ಗರ್ಭಾವಸ್ಥೆ, ಮಗುವಿಗೆ ಹಾಲುಣಿಸುವ ಕಾಲ, ಆರೋಗ್ಯ-ಅನಾರೋಗ್ಯಾವಸ್ಥೆ ಹಾಗೂ ಕಠಿಣ ಶ್ರಮ ಜೀವನಕ್ಕೆ ಯಾವ ಆಹಾರವನ್ನು ಯಾವ ಪ್ರಮಾಣದಲ್ಲಿ ಸೇವಿಸಬೇಕೆನ್ನುವುದನ್ನು ಸಮರ್ಪಕವಾಗಿ ಪತ್ತೆಹಚ್ಚಲಾಗಿದೆ. ವಿವಿಧ ಆಹಾರ ಪದಾರ್ಥಗಳಲ್ಲಿ ಯಾವ ಘಟಕ ಎಷ್ಟು ಪ್ರಮಾಣದಲ್ಲಿದೆ, ಯಾವುದು ಯಾರಿಗೆ

ಆರೋಗ್ಯದ ದೃಷ್ಟಿಯಿಂದ ಹಿತಕಾರಿ ಹಾಗೂ ಯಾವುದು ಯಾರಿಗೆ ಅಹಿತಕಾರಿ ಎನ್ನುವುದನ್ನು ಗುರುತಿಸ ಲಾಗಿದೆ. ಸಸ್ಯ ಮತ್ತು ಪ್ರಾಣಿ ಮೂಲಗಳಿಂದ ಲಭ್ಯವಾಗುವ ಎಲ್ಲಾ ತರದ ಆಹಾರ ಘಟಕ ಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಆರೋಗ್ಯದ ದೃಷ್ಟಿಯಿಂದ ಹಿತ-ಅಹಿತಗಳನ್ನು ಸವಿವರವಾಗಿ ತಿಳಿಯಲಾಗಿದೆ.

ಆಹಾರ ಸೇವನೆಯು ವ್ಯಕ್ತಿಯ ವೈಯಕ್ತಿಕ ವಿಷಯವಾಗಿದ್ದರೂ, ಧಾರ್ಮಿಕ, ನೈತಿಕ, ಮಾನಸಿಕ, ಮಾನವೀಯ, ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ಹಾಗೂ ಭೌಗೋಳಿಕ ಕಾರಣಗಳು ತನ್ನದೇ ಆದ ಪ್ರಭಾವವನ್ನು ಬೀರುತ್ತ ಬಂದಿವೆ.

ಆಹಾರದ ವಿಷಯದಲ್ಲಿ ಅಂಧಶ್ರದ್ಧೆ, ಅಂಧಾನುಕರಣೆ, ಅಜ್ಞಾನಜನ್ಯ ರೀತಿ-ನೀತಿಗಳನ್ನು ತೊರೆಯಬೇಕೆನ್ನುವುದು ಸಾಮಾನ್ಯವಾಗಿ ಎಲ್ಲರ ವಿಚಾರ. ಆದರೆ ವಾಸ್ತವಿಕತೆ ಮತ್ತು ನಮ್ಮ ವ್ಯವಹಾರ ಹಾಗಿಲ್ಲದಿರುವುದನ್ನು ನಾವು ನಮ್ಮ ಸಮಾಜದಲ್ಲಿ ಕಾಣುತ್ತೇವೆ. ಅನಾದಿ ಕಾಲದಿಂದ ಸಸ್ಯ ಮತ್ತು ಪ್ರಾಣಿ ಮೂಲದ ಆಹಾರ ಮನುಷ್ಯನ ಆಹಾರದ ಅವಿಭಾಜ್ಯ ಅಂಗವಾಗಿರುವುದು ಒಂದು ಐತಿಹಾಸಿಕ ಸತ್ಯವಾಗಿದೆ. ಎರಡೂ ತರದ ಆಹಾರದಲ್ಲಿ ಕೆಲವು ಹಿತ ಹಾಗೂ ಅಹಿತಕಾರಿ ಘಟಕಗಳಿರುವುದು ವೈಜ್ಞಾನಿಕವಾಗಿ ಮಾನ್ಯತೆ ಪಡೆದ ವಾಸ್ತವಿಕತೆಯಾಗಿದೆ. ಸಾಧ್ಯವಿದ್ದ ಮಟ್ಟಿಗೆ ಹಿತಕಾರಿಯಾದದ್ದನ್ನು ಸ್ವೀಕರಿಸಿ ಅಹಿತಕಾರಿಯಾದ ಆಹಾರ ಘಟಕಗಳನ್ನು ತೊರೆಯಬೇಕೆಂಬುದು ಬುದ್ಧಿಯ ಸಹಜ ಬೇಡಿಕೆಯಾಗಿದೆ. ಕೆಲವು ತರದ ಮಾಂಸಮೂಲ ಆಹಾರದ ಕೊಬ್ಬು ಹಾಗೂ ಇತರ ಘಟಕಗಳು ಹೃದಯ, ರಕ್ತನಾಳ, ಮಿದುಳು ಇತ್ಯಾದಿ ಅಂಗಾಂಗಗಳ ರೋಗಗಳಿಗೆ ಕಾರಣವಾದರೆ, ಸಸ್ಯ ಮೂಲದ ತಂಬಾಕು, ಮದ್ಯ, ಧತುರಾ, ಪೊಪಿಹಣ್ಣು(ಕಶ್‌ಕಸಿ ಕಾಳಿನ ಹೂವು) ಇತ್ಯಾದಿಗಳು ಹಾಗೂ ಇವುಗಳಿಂದ ತಯಾರಿಸಿದ ವಿವಿಧ ದ್ರವ್ಯ-ಮಾದಕ ಪದಾರ್ಥಗಳಿಂದ ಜಗತ್ತಿನಾದ್ಯಂತ ಆಗುತ್ತಿರುವ ಭಯಂಕರ ರೋಗ, ಅಪಘಾತ, ಕೌಟುಂಬಿಕ ಕಲಹ, ಆರ್ಥಿಕ ದಿವಾಳಿಗಳ ನಿರಂತರ ಹೆಚ್ಚಳ ಎಲ್ಲರಿಗೂ ತಿಳಿದ ವಿಷಯವಾಗಿದೆ. ವಾಸ್ತವಿಕತೆ ಹೀಗಿರುವಾಗ ಒಂದು ಮೂಲದ ಆಹಾರ ಶ್ರೇಷ್ಠ ಹಾಗೂ ಇನ್ನೊಂದು ಮೂಲದ ಆಹಾರ ಕನಿಷ್ಠವೆಂದು ವಾದಿಸುವುದು ಮತ್ತು ವೈಜ್ಞಾನಿಕವಾಗಿ ಮಾನ್ಯತೆ ಪಡೆದ ಗ್ರಂಥಗಳ ಚೌಕಟ್ಟಿನಲ್ಲಿ ತನ್ನ ವಾದವು ಸರಿಹೊಂದದಿರುವಾಗ ತನ್ನದೇ ಸಂಶೋಧನೆಯ ವರದಿಗಳನ್ನು ತಯಾರಿಸಿ, ಪ್ರಸ್ತುತ ಪಡಿಸಿ, ತನ್ನದೇ ವಿಚಾರ ಸರಿ ಎನ್ನುವುದು ಸಮಂಜಸವಲ್ಲ. ಆದುದರಿಂದ ಆಧುನಿಕ ಯುಗದ ಬುದ್ಧಿ ಜೀವಿಗಳು ಗಹನವಾಗಿ ವಿಶ್ಲೇಷಿಸಿ ವಿವೇಕ ಪೂರ್ಣ ಸ್ವತಂತ್ರ ನಿರ್ಧಾರ ಕೈಗೊಳ್ಳಬೇಕಾಗಿದೆ.

ಆಹಾರದ ಘಟಕಗಳು

1. ಪಿಷ್ಟ-ಸಕ್ಕರೆ(Carbohydrates).
2. ಸಸಾರಜನಕ(Proteins).
3. ಎಣ್ಣೆ ಮತ್ತು ಕೊಬ್ಬು(Fats).

4. ಆಹಾರ ತಂತು(Fibres, ನಾರಿನ ಅಂಶ).
5. ಲವಣ ಮತ್ತು ಧಾತುಗಳು(Salts and Minerals).
6. ಜೀವಸತ್ವಗಳು(Vitamins).
7. ನೀರು.

ಆಹಾರದ ಘಟಕಗಳ ಪಾತ್ರ, ಲಭ್ಯವಾಗುವ ಮೂಲಗಳು (Sources) ಹಾಗೂ ಸಂತುಲಿತ ಆಹಾರ

ಕಾರ್ಬೋಹೈಡ್ರೇಟ್

ಕಾರ್ಬೋಹೈಡ್ರೇಟ್ ದೇಹಕ್ಕೆ ಅವಶ್ಯವಿರುವ ಶಕ್ತಿಯನ್ನು ಒದಗಿಸುತ್ತವೆ. ಧಾನ್ಯ (ಅಕ್ಕಿ, ಜೋಳ, ರಾಗಿ, ಗೋಧಿ), ಬೇಳೆಕಾಳು, ಬಟಾಟೆ, ಗೆಣಸು, ಸಕ್ಕರೆ ಇತ್ಯಾದಿ ಪದಾರ್ಥಗಳಲ್ಲಿ ಇದರ ಪ್ರಮಾಣ ಅಧಿಕವಾಗಿರುತ್ತದೆ.

ಪ್ರೊಟೀನ್

ಶರೀರದ ಬೆಳವಣಿಗೆ, ಜೀವಕೋಶ, ಅಂಗಾಂಶ, ಅಂಗಾಂಗ ರಚನೆ, ಅವುಗಳ ಕ್ರಿಯೆ, ಅಂಗಾಂಗ ರಕ್ಷಣೆ, ಸವಕಳಿ ಪೂರೈಕೆ ಹಾಗೂ ಕಿಣ್ವಗಳ ತಯಾರಿಕೆಗೆ ಪ್ರೊಟೀನು ಅತ್ಯಾವಶ್ಯಕ. ಪ್ರೊಟೀನಿನಲ್ಲಿ ನಮ್ಮ ಶರೀರಕ್ಕೆ ಬೇಕಾದ 22 ತರದ ಅಮೈನೋ ಆಸಿಡ್‌ಗಳಿವೆ. ಕೆಲವು ಅಮೈನೋ ಆಸಿಡ್‌ಗಳು ನಮ್ಮ ಶರೀರದಲ್ಲಿ ತಯಾರಾಗುತ್ತವೆ. ಎಂಟು ತರದ ಅಮೈನೋ ಆಸಿಡ್‌ಗಳು ನಮ್ಮ ಶರೀರದಲ್ಲಿ ತಯಾರಾಗುವುದಿಲ್ಲ. ಅವು ನಾವು ಸೇವಿಸುವ ಆಹಾರದಿಂದ ಉತ್ಪತ್ತಿಯಾಗುತ್ತವೆ. ಅವುಗಳನ್ನು ಆವಶ್ಯಕ(Essential) ಅಮೈನೋ ಆಸಿಡ್‌ಗಳೆನ್ನುತ್ತಾರೆ. ಮಾಂಸಾಹಾರದಿಂದ ಲಭ್ಯವಾಗುವ ಪ್ರೊಟೀನ್‌ಗಳಿಗೆ ಪ್ರಥಮ ದರ್ಜೆಯ ಪ್ರೊಟೀನ್‌ಗಳೆಂದು ಹೆಸರಿಸಲಾಗಿದೆ. ಈ ಪ್ರೊಟೀನ್‌ಗಳು ದೇಹದ ಪ್ರೊಟೀನ್‌ಗಳೊಂದಿಗೆ ಸಾಮ್ಯ ಹೊಂದಿದ್ದು ಶರೀರದ ಬೆಳವಣಿಗೆಗೆ ಪೂರಕವಾಗಿವೆ. ಕೆಲವೊಂದು ಬೇಳೆ ಕಾಳುಗಳಲ್ಲಿ ಪ್ರೊಟೀನ್‌ನ ಪ್ರಮಾಣ ಹೆಚ್ಚಿಗಿದ್ದರೂ ಅವುಗಳನ್ನು ದ್ವಿತೀಯ ದರ್ಜೆಯ ಪ್ರೊಟೀನ್‌ಗಳೆನ್ನಲಾಗಿದೆ. ಈ ವಿಂಗಡನೆಯಲ್ಲಿ ಎಲ್ಲರಿಗೂ ಸಹಮತವಿಲ್ಲದಿದ್ದರೂ ಸಸ್ಯಮೂಲ ಹಾಗೂ ಮಾಂಸಮೂಲದ ಪ್ರೊಟೀನ್‌ಗಳೆರಡೂ ಆಹಾರದಲ್ಲಿ ನಿಗದಿತ ಪ್ರಮಾಣದಲ್ಲಿದ್ದರೆ ಆರೋಗ್ಯಕ್ಕೆ ಹೆಚ್ಚು ಹಿತಕರ.

ಫ್ಯಾಟ್

ಕೊಬ್ಬು ಮತ್ತು ಎಣ್ಣೆ(ಹೈಡ್ರೋಕಾರ್ಬನ್), ಜೀವಕೋಶ, ಜೀವಕೋಶ ಪೊರೆ, ಜೀವನಾಳಗಳ ಪೊರೆಗಳ ರಚನೆ ಹಾಗೂ ಶರೀರಕ್ಕೆ ಶಕ್ತಿ ಒದಗಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಕೆಲವು ಹಾರ್ಮೋನ್‌ಗಳ ರಚನೆ ಹಾಗೂ ಕರುಳಿನಲ್ಲಿ ಕೆಲವು ಜೀವಸತ್ವಗಳ ಹೀರಿಕೆಗೂ ಇವು ಆವಶ್ಯಕ. ಎಣ್ಣೆಕಾಳು, ಮೀನು, ಮಾಂಸ, ಹಾಲು ಮತ್ತು ಮೊಟ್ಟೆಯಲ್ಲಿ ಇವು ಅಧಿಕ ಪ್ರಮಾಣದಲ್ಲಿರುತ್ತವೆ. ಕೊಬ್ಬಿನಲ್ಲಿ ಸಂತೃಪ್ತ(Saturated), ಅಸಂತೃಪ್ತ(unsaturated) ಮತ್ತು ಬಹು ಅಸಂತೃಪ್ತವೆಂಬ ವಿವಿಧ ಫ್ಯಾಟ್ ಆಸಿಡ್‌ಗಳಿರುತ್ತವೆ.

ಇವುಗಳಲ್ಲಿ ಸಂತೃಪ್ತ ಫ್ಯಾಟ್ ಆಸಿಡ್‌ಗಳು ಶರೀರಕ್ಕೆ ಆರೋಗ್ಯದಾಯಕವಲ್ಲ. ಬಹು ಅಸಂತೃಪ್ತ ಫ್ಯಾಟ್ ಆಸಿಡ್ ಆರೋಗ್ಯಕರವಾಗಿವೆ. ಅನಾರೋಗ್ಯಕರ ಫ್ಯಾಟ್ ಆಸಿಡ್ ಹಂದಿ ಮತ್ತು ದನದ ಮಾಂಸ, ಕೊಬ್ಬರಿ, ತಾಳೆ ಎಣ್ಣೆ ಹಾಗೂ ಬೆಣ್ಣೆಯಲ್ಲಿ ಅಧಿಕ ಪ್ರಮಾಣದಲ್ಲಿವೆ. ಮೀನು, ಕುಸುಬೆ, ಸೋಯಾ ಹಾಗೂ ಸೂರ್ಯಕಾಂತಿ ಎಣ್ಣೆಗಳಲ್ಲಿ ಕಡಿಮೆ ಪ್ರಮಾಣದಲ್ಲಿವೆ. ಆರೋಗ್ಯಕರ ಫ್ಯಾಟ್ ಆಸಿಡ್‌ಗಳು ಇವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿವೆ.

ಸಂತುಲಿತ ಆಹಾರ

ಆರೋಗ್ಯಕರ ಸಂತುಲಿತ ಆಹಾರದಲ್ಲಿ ಎಣ್ಣೆ ಮತ್ತು ಕೊಬ್ಬಿನ ಅಂಶ ಹಿತ-ಮಿತವಾಗಿರಬೇಕಾದರೆ ಬೇಳೆಕಾಳು, ಮೀನು, ಮಾಂಸ, ಸೊಪ್ಪು - ತರಕಾರಿ, ಹಣ್ಣುಹಂಪಲು ಸರಿಯಾದ ಪ್ರಮಾಣದಲ್ಲಿರಬೇಕು. ಯಾವುದೇ ಪ್ರದೇಶದಲ್ಲಿ ಕೇವಲ ಮಾಂಸಾಹಾರದಿಂದ ಅಥವಾ ಸಸ್ಯಾಹಾರದಿಂದ ಸಂತುಲಿತ ಆಹಾರ ಪಡೆಯುವುದು ಆರ್ಥಿಕ ಹಾಗೂ ವ್ಯಾವಹಾರಿಕವಾಗಿ ಬಹಳ ದುಸ್ತರ.

ನಾರಿನ ಅಂಶ(ಆಹಾರ ತಂತು) ಸಸ್ಯಾಹಾರದಲ್ಲಿ ಹೆಚ್ಚಿಗಿದ್ದರೆ, ಜೀವಸತ್ವ ಹಾಗೂ ಲವಣಗಳು ಹಾಲು, ಮೊಟ್ಟೆ, ಹಣ್ಣು-ಹಂಪಲು, ತರಕಾರಿ ಮತ್ತು ಮಾಂಸದಲ್ಲಿ ಹೆಚ್ಚಿಗೆ ಇರುತ್ತವೆ.

ಕೊರತೆಯಿಂದ ಆಗುವ ರೋಗಗಳು

ಆಹಾರ ಸೇವನೆಯಲ್ಲಿ ಪೌಷ್ಟಿಕಾಂಶದ ಕೊರತೆಯಿಂದ ಅನೇಕ ರೋಗಗಳು ಬರುತ್ತವೆ. 'ಏ' ಜೀವಸತ್ವದ ಕೊರತೆ ಬಡರಾಷ್ಟ್ರಗಳಲ್ಲಿ ಅಂಧತ್ವಕ್ಕೆ ಪ್ರಮುಖ ಕಾರಣ. ಬೆರಿಬೆರಿ, ಪೆಲ್ಲಾಗ್ರಾ- 'ಬಿ' ಜೀವಸತ್ವದ ಕೊರತೆಯಿಂದ ಬರುವ ರೋಗಗಳಾಗಿವೆ. ಕಬ್ಬಿಣದ ಅಂಶದ ಕೊರತೆಯಿಂದ ರಕ್ತಹೀನತೆ, ಕ್ಯಾಲ್ಸಿಯಂ ಕೊರತೆಯಿಂದ ಎಲುಬಿನ ರೋಗ, 'ಸಿ' ಜೀವಸತ್ವದ ಕೊರತೆಯಿಂದ ರಕ್ತಸ್ರಾವ, ಪ್ರೊಟೀನ್‌ನ ಕೊರತೆಯಿಂದ ಇನ್ನಿತರ ರೋಗಗಳು ಬರುತ್ತವೆ.

ಅತಿಯಾದ ಮತ್ತು ಅವೈಜ್ಞಾನಿಕ ಆಹಾರ ಸೇವನೆಯು ಅನೇಕ ರೋಗಗಳಿಗೆ ಕಾರಣವಾಗಬಹುದು. ಬೊಜ್ಜು, ಸಿಹಿಮೂತ್ರ ಕಾಯಿಲೆ, ಹೃದ್ರೋಗ, ರಕ್ತನಾಳಗಳ ರೋಗ, ಪಾರ್ಶ್ವವಾಯು, ಮೂತ್ರಪಿಂಡ, ಪಿತ್ತಕೋಶ ಹಾಗೂ ಕರುಳಿನ ರೋಗ ಬರಬಹುದು.

ಆವಶ್ಯಕ B_{12}- ಜೀವ ಸತ್ವ, ಹಾಗೂ ಕೊಲೆಸ್ಟ್ರಾಲ್ ಸಸ್ಯಾಹಾರದಿಂದ ಲಭ್ಯವಾಗುವುದಿಲ್ಲ. ಅವುಗಳನ್ನು ಮಾಂಸಾಹಾರದಿಂದ ಪಡೆಯಬೇಕಾಗುತ್ತದೆ. ತಂತು(Fibres) ಅಥವಾ ನಾರಿನ ಅಂಶ ಸಸ್ಯಾಹಾರದಿಂದಲೇ ಲಭ್ಯ. ನಾರಿನಂಶ ಶರೀರಕ್ಕೆ ಶಕ್ತಿ ಕೊಡುವುದಿಲ್ಲ. ಕರುಳು ಇದನ್ನು ಹೀರುವುದಿಲ್ಲ. ಆದರೆ ಆಹಾರದಲ್ಲಿ ಇದು ಅತ್ಯಾವಶ್ಯಕ.

ಸಂತುಲಿತ ಆಹಾರಕ್ಕಾಗಿ ಸಸ್ಯ ಮತ್ತು ಪ್ರಾಣಿ ಮೂಲದ ಆಹಾರ ಘಟಕಗಳು ಸರಿಯಾದ ಪ್ರಮಾಣದಲ್ಲಿರಬೇಕಾದದ್ದು ಸಮಂಜಸ, ವೈಜ್ಞಾನಿಕ ಹಾಗೂ ವ್ಯಾವಹಾರಿಕ.

❖❖❖

ಆಹಾರ ಸೇವನೆಯ ಪಯಣ

ಮನುಷ್ಯನ ಸಾಮಾಜಿಕ ಜೀವನದಲ್ಲಿ ನಿರಂತರ ಪ್ರಗತಿ ಹಾಗೂ ಬದಲಾವಣೆ ಆಗುತ್ತಿದ್ದು ಮೊದಲು ಗಿಡ-ಪೊದರುಗಳಲ್ಲಿ, ಗುಹೆಗಳಲ್ಲಿ ವಾಸಿಸುತ್ತಿದ್ದ ಜನರು ಗುಡಿಸಲು ಹಾಗೂ ಮನೆ ಕಟ್ಟಿ ವಾಸಿಸಲಾರಂಭಿಸಿದರು. ಬೇಟೆಗಾಗಿ ಕಲ್ಲು, ಮರದ ಆಯುಧಗಳನ್ನು ಬಳಸುವವರು ಸುಧಾರಿತ ಲೋಹಗಳ ಆಯುಧ, ಬಿಲ್ಲು ಬಾಣಗಳನ್ನು ಉಪಯೋಗಿಸ ತೊಡಗಿದರು. ಅರಣ್ಯದ ಗೆಡ್ಡೆ-ಗೆಣಸು, ಹಣ್ಣು-ಹಂಪಲು, ತೊಪ್ಪಲ ಇತ್ಯಾದಿ ಆಹಾರಗಳನ್ನು ಬಳಸುವವರು ಕ್ರಮೇಣ ಕೃಷಿಯ ಮೂಲಕ ಕಾಳು-ಕಡ್ಡಿ, ಹಣ್ಣು-ತರಕಾರಿಗಳನ್ನು ಬೆಳೆಸಿ ಉಪಯೋಗಿಸತೊಡಗಿದರು. ಹಸಿ ಮಾಂಸ ಹಾಗೂ ತೊಪ್ಪಲನ್ನು ತಿನ್ನುವವರು ಅದನ್ನು ಸುಟ್ಟು, ಬೇಯಿಸಿ, ತರತರದ ಮಸಾಲೆ ಹಾಗೂ ಎಣ್ಣೆಗಳನ್ನು ಬಳಸಿ ರುಚಿಕರ ಅಡಿಗೆ ತಯಾರಿಸ ತೊಡಗಿದರು. ಮೂಲ ರೂಪದಲ್ಲಿ ನಮ್ಮ ಪೂರ್ವಜರ ಆಹಾರದಲ್ಲಿ ಎರಡೂ ವಿಧದ (ಪ್ರಾಣಿ ಮತ್ತು ಸಸ್ಯಮೂಲ) ಆಹಾರ ಸೇರಿದ್ದು ಕಂಡು ಬರುತ್ತದೆ. ಆಹಾರ ಸಂಪಾದಿಸುವ ಸಾಧನ, ವಿಧಾನ, ತಯಾರಿಸುವ ರೀತಿ ಮತ್ತು ಸೇವಿಸುವ ವಿಧಾನಗಳಲ್ಲಿ ನಿರಂತರ ಬದಲಾವಣೆಗಳು ಇತಿಹಾಸದುದ್ದಕ್ಕೂ ಕಂಡು ಬರುತ್ತವೆ.

ಆಹಾರದ ವಿಷಯದಲ್ಲಿ ಭೌಗೋಳಿಕ ಕಾರಣ ಕೂಡಾ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಹಿಮಾಚ್ಛಾದಿತ ಪ್ರದೇಶ ಹಾಗೂ ಮರುಭೂಮಿಗಳಲ್ಲಿ ವಾಸಿಸುವ ಜನರಿಗೆ ಕೃಷಿ ಅಸಾಧ್ಯವಾದುದರಿಂದ ಅಲ್ಲಿ ಲಭ್ಯವಿರುವ ಮೀನು ಹಾಗೂ ಪ್ರಾಣಿಮಾಂಸ ಸೇವಿಸಲು ಅವರು ನಿರ್ಬಂಧಿತರಾದರು. ಕೃಷಿಯೋಗ್ಯ ಪ್ರದೇಶದ ಜನರು ಸಸ್ಯಮೂಲದ ಆಹಾರವನ್ನು ಅವಲಂಬಿಸಿದರು. ಎರಡೂ ತರದ ಆಹಾರ ಲಭ್ಯವಿರುವಲ್ಲಿ ಜನರು ತಮ್ಮ ವಿಶ್ವಾಸ, ಸಂಪ್ರದಾಯ, ಅಭಿರುಚಿಯಂತೆ ಆಹಾರ ಸೇವಿಸುತ್ತಿದ್ದರು.

ಮಾನವ ಜೀವನದ ವಿಕಾಸವು ಆಹಾರದ ಉತ್ಪನ್ನ, ತಯಾರಿಕೆ, ಶೇಖರಣೆ, ವಿತರಣೆ, ಆಮದು-ರಫ್ತು ಹಾಗೂ ಉಪಯೋಗಿಸುವ ವಿಧಾನಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಹಸಿಮಾಂಸ-ಗಿಡಮೂಲಿಕೆಗಳ ಸೇವನೆಯಿಂದ ಪ್ರಾರಂಭವಾದ ಅವನ ಪಯಣ ಮುಂದುವರಿದು, ಇಂದು ಅವನು ವೈಜ್ಞಾನಿಕವಾಗಿ ತಯಾರಿಸಿದ ವಿವಿಧ ಮನಮೋಹಕ ಆಹಾರವನ್ನು ಡಬ್ಬಿ, ಬಾಟಲಿ ಹಾಗೂ ಪ್ಯಾಕೆಟ್‌ಗಳಲ್ಲಿ ರಕ್ಷಿಸಿಟ್ಟು ಸೇವಿಸುತ್ತಿದ್ದಾನೆ.

ವಿದೇಶಗಳಿಗೆ ರಫ್ತು ಮಾಡುತ್ತಿದ್ದಾನೆ. ಫಾಸ್ಟ್‌ಫುಡ್‌ಗಳ ವ್ಯವಹಾರ ಎಲ್ಲೆಡೆ ಸಾಮಾನ್ಯವಾಗುತ್ತಿದೆ. ದಕ್ಷಿಣ ಭಾರತೀಯ, ಉತ್ತರ ಭಾರತೀಯ, ಗುಜರಾತಿ, ಪಂಜಾಬಿ, ತಿಂಡಿ-ತಿನಸು, ಅನ್ನ-ಪಾನೀಯಗಳು ಒಂದೇ ಸ್ಥಳದಲ್ಲಿ ಸಿಗುವ ಬೃಹತ್ ಹೋಟೆಲ್ ಉದ್ದಿಮೆಗಳು ಪ್ರಾರಂಭವಾಗಿವೆ. ವೆಜಿಟೇರಿಯನ್ - ನಾನ್ ವೆಜಿಟೇರಿಯನ್, ದೇಶೀಯ ಮತ್ತು ವಿದೇಶೀಯ ತಿಂಡಿ ಹಾಗೂ ಊಟದ ಹೋಟೆಲ್‌ಗಳು, ನಗರ-ಪಟ್ಟಣಗಳಲ್ಲಿ ಸಾಮಾನ್ಯವಾಗುತ್ತಿವೆ. ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ನೀತಿಯ ಪ್ರಬಲ ಪ್ರಭಾವ ಆಹಾರ ಸೇವನೆಯ ಪಯಣದಲ್ಲಿಯೂ ಕಂಡು ಬರುತ್ತದೆ.

ಆಹಾರ ಸೇವನೆಯ ಭಾರತೀಯ ಇತಿಹಾಸ

ಹರಪ್ಪಾ- ಮೆಹೆಂಜೊದಾರೋಗಳ ಸಿಂಧೂ ಸಂಸ್ಕೃತಿಯ ಕಾಲದಲ್ಲಿ (ಕ್ರಿ.ಪೂ. 2550-1700) ಜನರು ಹಣ್ಣು-ಹಂಪಲು, ದವಸಧಾನ್ಯ, ಪಕ್ಷಿ, ಕುರಿ, ಕೋಳಿ, ಆಕಳು, ಹಂದಿ ಮತ್ತು ಮೀನುಗಳನ್ನು ಸೇವಿಸುತ್ತಿದ್ದರು. ಆರ್ಯರು ಸಿಂಧೂ ನದಿಯನ್ನು ದಾಟಿ ಭಾರತದ ಮೂಲನಿವಾಸಿ ದ್ರಾವಿಡರನ್ನು ದಕ್ಷಿಣಕ್ಕೆ ಅಟ್ಟಿದರು. ಆರ್ಯರು ಬೇಟೆಗಾರರಾಗಿದ್ದು ಮೀನು- ಮಾಂಸ ತಿನ್ನುತ್ತಿದ್ದರು. ರಾಮಾಯಣ ಹಾಗೂ ಮಹಾಭಾರತದಲ್ಲಿ ಉಚ್ಚವರ್ಗದವರ ಮಾಂಸಭಕ್ಷಣೆಯ ಅನೇಕ ಉದಾಹರಣೆಗಳು (ಬ್ರಾಹ್ಮಣರಾದ ಅಗಸ್ತ್ಯ ಮುನಿ ಮತ್ತು ಶುಕ್ರಾಚಾರ್ಯ) ಸಿಗುತ್ತವೆ. ಯಜ್ಞಗಳಲ್ಲಿ ವಿವಿಧ ಪ್ರಾಣಿಗಳ ಬಲಿ ಹಾಗೂ ಅದರ ಮಾಂಸ ಸೇವನೆ ಸಾಮಾನ್ಯವಾಗಿತ್ತು.

ಕ್ರಿ.ಪೂ. ಆರನೆಯ ಶತಮಾನದಲ್ಲಿ ಜೈನ ಹಾಗೂ ಬೌದ್ಧ ಧರ್ಮಗಳ ಅಹಿಂಸೆಯ ಪ್ರಭಾವದಿಂದ ಹಿಂದೂ ಧರ್ಮದಲ್ಲಿ ಶಾಖಾಹಾರದತ್ತ ಒಲವು ಬೆಳೆಯಿತೆಂದು ತಿಳಿದುಬರುತ್ತದೆ. ಅಶೋಕ ಚಕ್ರವರ್ತಿ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ತನ್ನ ಅರಮನೆಯಲ್ಲಿ ನಿತ್ಯ ಸಹಸ್ರಾರು ಪ್ರಾಣಿಗಳ ವಧೆ ಆಗುವುದನ್ನು ನಿಲ್ಲಿಸಿ ಕೇವಲ ಮೂರು ಪ್ರಾಣಿಗಳನ್ನು (ಎರಡು ನವಿಲು, ಒಂದು ಜಿಂಕೆ) ಮಾತ್ರ ಕೊಲ್ಲುವುದಕ್ಕೆ ಸೀಮಿತಗೊಳಿಸಿದ. ತದನಂತರ ಅದನ್ನೂ ನಿಲ್ಲಿಸಿ ಶಾಖಾಹಾರಿ ಆದನೆಂದು ಶಿಲಾ ಶಾಸನಗಳಿಂದ ತಿಳಿದು ಬರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಪ್ರಾಣಿ ಹಿಂಸೆಯನ್ನು ಖಂಡಿಸಿ ಶಾಖಾಹಾರವನ್ನು ಪ್ರತಿಪಾದಿಸಿದರು.

ಹಿಂದೂ ಧರ್ಮದ ಭಾಗವೆಂದು ಹೇಳಲಾಗುವ ದಲಿತರು, ಆದಿವಾಸಿಗಳು, ಹಿಂದುಳಿದ ಜನಾಂಗಗಳೆಲ್ಲ ಮಾಂಸಾಹಾರಿಗಳಾಗಿದ್ದಾರೆ. ಸಿಕ್ಖ್, ಕ್ರೈಸ್ತ, ಯಹೂದಿ, ಪಾರ್ಸಿ, ಮರಾಠಿಗರು ಹಾಗೂ ಮುಸ್ಲಿಮರು ಸಾಮಾನ್ಯವಾಗಿ ಮಾಂಸಾಹಾರಿಗಳಾಗಿದ್ದಾರೆ. ನಮ್ಮ ದೇಶದಲ್ಲಿ 4635 ಜಾತಿ-ಉಪಜಾತಿಗಳಿವೆ. ಪ್ರತಿಯೊಂದು ಗುಂಪಿಗೂ ತನ್ನದೇ ಆದ ಆಹಾರ ಕ್ರಮವಿದೆ. ಕೇರಳದ ಶೇ 40ರಷ್ಟು ಜನ ದನದ ಮಾಂಸ ಉಪಯೋಗಿಸುತ್ತಾರೆ. ಈಶಾನ್ಯ ರಾಜ್ಯಗಳ ಗುಡ್ಡ-ಗಾಡು ಜನರ ಮುಖ್ಯ ಆಹಾರ ದನದ ಮಾಂಸ. ಕರಾವಳಿ ಪ್ರದೇಶದ ಜನರ ಮುಖ್ಯ

ಆಹಾರ ಸಮುದ್ರದ ಮೀನು. ಬಡಜನರಿಗೆ ದನದ ಮಾಂಸ ಈ ಭಾಗಗಳಲ್ಲಿ ಸಿಗುವ ಅಗ್ಗದ ಹಾಗೂ ಪೌಷ್ಟಿಕ ಆಹಾರವಾಗಿದೆ.

ಸುಮಾರು 3 ಕೋಟಿ ವೆಚ್ಚದಲ್ಲಿ ತಯಾರಿಸಿದ ನಲ್ವತ್ತು ಸಾವಿರ ಪುಟದಷ್ಟಿರುವ "ಪೀಪಲ್ಸ್ ಆಫ್ ಇಂಡಿಯಾ"ದ ವರದಿಯ(1992-93) ಪ್ರಕಾರ ಸುಮಾರು 49% ಭಾರತೀಯರು ದಿನನಿತ್ಯ ಮಾಂಸ ಭಕ್ಷಿಸುತ್ತಾರೆ. 16% ಮಂದಿ ಮಾತ್ರ ಶಾಖಾಹಾರಿಗಳಾಗಿದ್ದಾರೆ. ಈ ಸಮೀಕ್ಷೆಯ ಮುಖ್ಯಸ್ಥ ಸುರೇಶ್ ಕುಮಾರ್‌ರ ಪ್ರಕಾರ ಈ ಸಮೀಕ್ಷೆ ಜಾತಿ ಆಧಾರಿತವಾಗಿರದೆ ವರ್ಗ ಆಧಾರಿತವಾಗಿದೆ.

❖❖❖

3

ಜೀವಿಗಳ ಪ್ರಕಾರಗಳು

1. ಮನುಷ್ಯ.
2. ಪಶು-ಪಕ್ಷಿ, ಪ್ರಾಣಿ, ಕ್ರಿಮಿ-ಕೀಟಗಳು.
3. ವನಸ್ಪತಿ.

ಮೊದಲಿನೆರಡು ಪ್ರಕಾರಗಳು ಸಜೀವಿಗಳೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ವನಸ್ಪತಿಗಳಲ್ಲಿ ಜೀವವಿರುವಿಕೆಯ ಬಗ್ಗೆ ಸಂಶಯ ವ್ಯಕ್ತಪಡಿಸಲಾಗುತ್ತಿದೆ. ವನಸ್ಪತಿಗಳನ್ನು ಕೀಳುವುದು, ಕೊಯ್ಯುವುದು ಹಾಗೂ ತಿನ್ನುವುದನ್ನು ಹಿಂಸೆ ಎನ್ನಲಾಗುವುದಿಲ್ಲ. ಕಷ್ಟ-ಸುಖಗಳ ಅನುಭವ ಮತ್ತು ಚೈತನ್ಯ ಶೀಲತೆಯು ಸಜೀವಿಯ ಲಕ್ಷಣವಾಗಿದೆ. ವನಸ್ಪತಿಗಳಲ್ಲಿ ಈ ಗುಣಗಳಿವೆ. ಸಜೀವ ವಸ್ತುಗಳು 'ಪ್ರೊಟೊಪ್ಲಾಝುಮ್' ಎಂಬ ದ್ರವದಿಂದ ಉಂಟಾಗಿದ್ದು ಪಶು-ಪ್ರಾಣಿಗಳಂತೆ ವನಸ್ಪತಿಗಳೂ ಕೂಡಾ ಪ್ರೊಟೊಪ್ಲಾಝುಮ್‌ನಿಂದ ಅಸ್ತಿತ್ವಕ್ಕೆ ಬಂದಿವೆ. ಈ ಸತ್ಯವನ್ನು ವೈಜ್ಞಾನಿಕವಾಗಿ ಜಗತ್ತಿಗೆ ತೋರಿಸಿದ ಕೀರ್ತಿ ಭಾರತದ ಸುಪ್ರಸಿದ್ಧ ವಿಜ್ಞಾನಿ ಆಚಾರ್ಯ ಜಗದೀಶ್ ಚಂದ್ರ ಬೋಸರಿಗೆ ಸಲ್ಲುತ್ತದೆ. ಅವರು ತಮ್ಮ ಸಂಶೋಧನೆಗಳಿಂದ ಜಗತ್ತಿನ ವಿಜ್ಞಾನಿಗಳನ್ನು ಚಕಿತಗೊಳಿಸಿದರು. ಸಸ್ಯ ಮತ್ತು ಗಿಡಮರಗಳಲ್ಲಿ ಜೀವನದ ಎಲ್ಲ ಪ್ರಕ್ರಿಯೆಗಳು ಪಶು ಹಾಗೂ ಮನುಷ್ಯನ ದೇಹದಲ್ಲಿ ನಡೆಯುವಂತೆ ಇರುವುದನ್ನು ಕಂಡುಕೊಂಡರು. ಅವುಗಳು ಮಲಗುತ್ತವೆ, ಎಚ್ಚರಗೊಳ್ಳುತ್ತವೆ, ಹುಟ್ಟು, ಸಾವು, ತಂಪು-ಬಿಸಿ, ಸಂಗೀತ, ಔಷಧ, ವಿಷ ಇತ್ಯಾದಿಗಳಿಂದ ಪ್ರಾಣಿಗಳಂತೆ ಪ್ರಭಾವಕ್ಕೊಳಗಾಗುತ್ತವೆ. ರಕ್ತದ ಚಲನೆ ಇತರ ಜೀವಿಗಳಲ್ಲಿ ಹೃದಯದ ಬಡಿತದಿಂದ ಆಗುವಂತೆ ಸಸ್ಯಗಳ ಬೇರಿನಲ್ಲಿ ಈ ಪ್ರಕ್ರಿಯೆ ಇದ್ದು ಇದರ ಮೂಲಕ ನೀರು ಎತ್ತರದ ಎಲೆ, ಹೂವು ಹಣ್ಣುಗಳಿಗೆ ತಲುಪುತ್ತದೆ. ಸಸ್ಯಗಳ ಶ್ವಾಸೋಚ್ಛ್ವಾಸ, ಬೆಳವಣಿಗೆ ಇತ್ಯಾದಿ ಸಜೀವಿಗಳ ಪ್ರಕ್ರಿಯೆಗಳನ್ನು ಜಗದೀಶ್ ಚಂದ್ರ ಬೋಸ್ ತನ್ನ ಸೂಕ್ಷ್ಮದರ್ಶಕ ಯಂತ್ರಗಳ ಮೂಲಕ ವೈಜ್ಞಾನಿಕವಾಗಿ ಅಳೆದು ತೋರಿಸಿದರು. ಅದಕ್ಕಾಗಿ ದೇಶ-ವಿದೇಶಗಳಲ್ಲಿ ಅವರು ಅನೇಕ ಪುರಸ್ಕಾರಗಳನ್ನು ಪಡೆದರು.

ಹಿಂದೂ ದರ್ಶನ ಹಾಗೂ ಧಾರ್ಮಿಕ ವಿಶ್ವಾಸದ ಪ್ರಕಾರ ಸಸ್ಯಗಳು ಸಜೀವಿಯೆನ್ನುವುದನ್ನು ಅಂಗೀಕರಿಸಲಾಗಿದೆ. ಪುನರ್ಜನ್ಮ ಸಿದ್ಧಾಂತದ ಪ್ರಕಾರ ಆತ್ಮ ಒಂದೇ ಆಗಿದ್ದು

ದೇಹ ಕರ್ಮಕ್ಕನುಸಾರವಾಗಿ ಬದಲಾಗುತ್ತಿರುತ್ತದೆ. ಮನುಷ್ಯ ಕೆಲವು ಸಲ ಪ್ರಾಣಿ, ಪಶು, ಕ್ರಿಮಿ ಕೀಟ ಹಾಗೂ ಸಸ್ಯವಾಗುವುದುಂಟು. ಆ ಕುರಿತು ಹಿಂದೂ ಧರ್ಮಶಾಸ್ತ್ರಕ್ಕೆ ಬುನಾದಿಯಾಗಿರುವ ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ;

ತಮಸಾ ಬಹುರೂಪೇಣ ವೇಷ್ಟಿತಾಃ ಕರ್ಮಹೇತುನಾ ||

ಅಂತಃಸಂಜ್ಞಾ ಭವಂತ್ಯೇತೇ ಸುಖದುಃಖಸಮನ್ವಿತಾಃ || (1-49)

ಕರ್ಮದ ಕಾರಣವಾಗಿ ಈ ಗಿಡ-ಮರ ಬಳ್ಳಿಗಳು ಅಭಿವ್ಯಕ್ತ ಮಾಡುವ ಸಾಮರ್ಥ್ಯವಿಲ್ಲದೇ, ನಾನಾ ಪ್ರಕಾರದ ಅಜ್ಞಾನದಿಂದ ಸ್ತಬ್ಧವಾಗಿರುವಂತೆ ಕಂಡರೂ ಅಂತಃ ಪ್ರಜ್ಞೆಯುಳ್ಳವುಗಳಾಗಿ, ಸುಖ ದುಃಖಗಳನ್ನು ಅನುಭವಿಸುತ್ತವೆ.

ಸ್ಥಾವರಾಃ ಕ್ರಿಮಿಕೀಟಾಶ್ಚ ಮತ್ಸ್ಯಾಃ ಸರ್ಪಾಃ ಸಕಚ್ಛಪಾಃ

ಪಶವಶ್ಚ ಮೃಗಾಶ್ಚೈವ ಜಘನ್ಯಾ ತಾಮಸೀ ಗತಿಃ (ಅಧ್ಯಾಯ 12-42)

ಮರ ಬಳ್ಳಿ ಮೊದಲಾದ ಸ್ಥಾವರಗಳು, ಕ್ರಿಮಿ-ಕೀಟ, ಮತ್ಸ್ಯ, ಸರ್ಪ, ಆಮೆ ಇತ್ಯಾದಿಗಳು ಹಾಗೂ ಇದೇ ರೀತಿಯ ಪಶು-ಮೃಗಗಳು ಇವು ತಮೋಗುಣವುಳ್ಳ ಪ್ರಾಣಿಗಳಲ್ಲಿ ಅಧಮ ಜಾತಿಯವುಗಳು.

ತೃಣಗುಲ್ಮಲತಾನಾಂ ಚ ಕ್ರವ್ಯಾದಾಂ ದಂಷ್ಟ್ರಿಣಾಮಪಿ

ಕ್ರೂರಕರ್ಮಕೃತಾಂ ಚೈವ ಶತಶೋ ಗುರುತಲ್ಪಗಃ (12-58)

ಗುರುತಲ್ಪಗಾಮಿಯಾದ (ಗುರುಪತ್ನಿಯನ್ನು ಸಂಭೋಗಿಸಿದ) ಪಾಪಿಷ್ಠನು ಹುಲ್ಲು, ಕಂಟಿ, ಬಳ್ಳಿ ಅಥವಾ ಮಾಂಸಾಹಾರಿಯಾದ ನಾಯಿ, ಹದ್ದು ಅಥವಾ ಕೋರೆದಾಡೆಯುಳ್ಳ ಸಿಂಹ, ವರಾಹ ಇತ್ಯಾದಿಗಳ ಜನ್ಮವನ್ನು ಹೊಂದುವನು. (ಸಮಾಜ ಪುಸ್ತಕಾಲಯ, ಧಾರವಾಡ ಮುದ್ರಣ 2003, ಮನುಸ್ಮೃತಿ - ಅನು: ಶೇಷ ನವರತ್ನ)

ಸ್ವಾಮಿ ದಯಾನಂದ ಸರಸ್ವತಿಯವರ ಸತ್ಯಾರ್ಥ ಪ್ರಕಾಶದಲ್ಲಿಯೂ ಈ ವಿಚಾರ ವ್ಯಕ್ತ ಪಡಿಸಲಾಗಿದೆ. ಸಸ್ಯಗಳ ಕೊಯ್ಯುವಿಕೆ ಮತ್ತು ಸೇವನೆ, ಪ್ರಾಣಿಗಳ ಕೊಯ್ಯುವಿಕೆ ಮತ್ತು ಸೇವನೆ- ಹಿಂಸೆ ಎನ್ನುವುದು ಧಾರ್ಮಿಕವಾಗಿ, ವೈಜ್ಞಾನಿಕವಾಗಿ ಮಾನ್ಯತೆ ಪಡೆದ ಸತ್ಯವಾಗಿದೆ. ಪಶು ಮತ್ತು ಸಸ್ಯಗಳಲ್ಲಿರುವ ಅಂತರ ಚಲನ ಶೀಲತೆ ಎನ್ನುವುದು ಸಂಪೂರ್ಣ ಸರಿಯಲ್ಲ, ಏಕೆಂದರೆ ಸ್ಪಂಜು ಜಲಜೀವಿಯಾಗಿದ್ದು ಚಲನ ಶೀಲತೆ ಇಲ್ಲದೆ ಗೋಡೆಗೆ ಅಂಟಿದ ಬಳ್ಳಿಯಂತಿದೆ. ಅನೇಕ ಸಸ್ಯಗಳು ಗತಿಯಲ್ಲಿರುವುದನ್ನು ಕಾಣುತ್ತೇವೆ. ವಾಸ್ತವದಲ್ಲಿ ಅಂತರವು ಆಹಾರ ಸ್ವೀಕಾರದ ಕ್ರಮದಲ್ಲಾಗಿದೆ. ಎಲ್ಲ ಪ್ರಾಣಿ-ಪಶು ಮತ್ತು ಸಸ್ಯ ಸಂಕುಲಕ್ಕೆ ಕಾರ್ಬನ್, ಹೈಡ್ರೋಜನ್ ಹಾಗೂ ಆಕ್ಸಿಜನ್ ಆವಶ್ಯಕ. ಹಸಿರು ಸಸ್ಯಗಳು ಸೂರ್ಯ ಪ್ರಕಾಶದ ಸಹಾಯದಿಂದ ಗಾಳಿಯ ಕಾರ್ಬನ್ ಡೈ ಆಕ್ಸೈಡ್‌ನಿಂದ ಕಾರ್ಬನ್ ಸ್ವೀಕರಿಸುತ್ತದೆ. ನೀರು ಮತ್ತು ಉಪ್ಪಿನಾಂಶದಿಂದ ಹೈಡ್ರೋಜನ್ ಹಾಗೂ ಗಾಳಿಯಿಂದ ಪ್ರಾಣ ವಾಯು ಪಡೆಯುತ್ತದೆ. ವನಸ್ಪತಿ ಹಾಗೂ ಪ್ರಾಣಿಗಳ ಮೂಲ ಅಂತರವು ಜೀವ

ನಿರ್ಜೀವವೆಂಬುದಲ್ಲ, ಖಂಡಿತವಾಗಿ ಎರಡೂ ಸಜೀವಿಗಳಾಗಿವೆ. ಅವೆರಡೂ ಚೈತನ್ಯ ಹಾಗೂ ಸಂವೇದನೆ ಹೊಂದಿವೆ.

ಅನೇಕ ಸಸ್ಯಗಳು ಕ್ರಿಮಿ-ಕೀಟಗಳನ್ನು ತಮ್ಮ ಆಹಾರವನ್ನಾಗಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇವುಗಳನ್ನು ಮಾಂಸಾಹಾರಿ ಸಸ್ಯ(Carnivorus Plants) ಗಳೆನ್ನುತ್ತಾರೆ. ಯುಟ್ರಿಕುಲೇರಿಯಾ, ನೆಫೆನ್‌ಥಿಸ್, ಪಿಚರ ಪ್ಲಾಂಟ್ಸ್, ವೆನಸ್ ಫ್ಲ್ಯಾಟ್ರ್ಯಾಫ್ ಹಾಗೂ ಡ್ರಾಸೇರಾ ಸಸ್ಯಗಳು ಇದರ ಉದಾಹರಣೆಗಳಾಗಿವೆ.

❖❖❖

ಧಾರ್ಮಿಕ ದೃಷ್ಟಿಕೋನ

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಬಹು ಧರ್ಮೀಯರ ದೇಶ. ತನ್ನ ಧರ್ಮದ ಬಗ್ಗೆ ಅಭಿಮಾನ ಹೊಂದಿರುವುದರೊಂದಿಗೆ ಪರಧರ್ಮ ತತ್ವಾದರ್ಶಗಳನ್ನು ಅರಿತು ಗೌರವಿಸುತ್ತ ಸೋದರ ಸಹಬಾಳ್ವೆ ನಡೆಸುವುದು ದೇಶವು ಶಾಂತಿ, ಸ್ಥಿರತೆ ಹಾಗೂ ಪ್ರಗತಿ ಪಥದಲ್ಲಿ ಮುನ್ನಡೆಯುವುದಕ್ಕಿರುವ ಮೂಲಸೂತ್ರವಾಗಿದೆ. ಆಹಾರದ ವಿಷಯವನ್ನು ಗಮನಿಸುವಾಗ ಈ ಪ್ರಪಂಚ, ಪ್ರಪಂಚದ ಒಡೆಯ, ಈ ಪ್ರಪಂಚದಲ್ಲಿರುವ ಮನುಷ್ಯ ಹಾಗೂ ಚರಾಚರ ವಸ್ತುಗಳು, ಪ್ರಪಂಚದಲ್ಲಿ ಮನುಷ್ಯನ ನೈಜ ಸ್ಥಾನಮಾನ, ಅವನ ಜೀವನೋದ್ದೇಶ, ಜೀವನ ಮಾರ್ಗದರ್ಶನದ ಮೂಲಗಳು ಮತ್ತು ಆದರ್ಶ ಜೀವನ ಮಾದರಿಗಳ ಬಗ್ಗೆ ವಿವಿಧ ಧರ್ಮಗಳ ದೃಷ್ಟಿಕೋನ ಅರಿಯುವುದು ಅತ್ಯಂತ ಆವಶ್ಯಕ. ಈ ದೃಷ್ಟಿಕೋನ ನಮ್ಮ ಇಹಜೀವನದ ಆಚರಣೆಯ ಮೇಲೆ ನಿರ್ಣಾಯಕ ಪ್ರಭಾವ ಬೀರುತ್ತದೆ. ಆಹಾರದ ವಿಷಯವೂ ಇದರಿಂದ ಹೊರತಾಗಿಲ್ಲ.

ದಯೆ ಎಲ್ಲ ಧರ್ಮಗಳ ಮೂಲ ಸಿದ್ಧಾಂತವಾಗಿದೆ. ವಿವಿಧ ರೀತಿಯಲ್ಲಿ ವಿವಿಧ ಧರ್ಮಗಳಲ್ಲಿ ಇದನ್ನು ವ್ಯಾಖ್ಯಾನಿಸಲಾಗಿದೆ. ದಯೆ ಇಲ್ಲದ ಧರ್ಮವಿಲ್ಲ. ದಯೆಯ ಬೋಧನೆ ಮತ್ತು ಆಚರಣೆ ಇಲ್ಲದಿದ್ದರೆ ಅದು ಧರ್ಮವೆನಿಸಲಾರದು.

ಹಿಂಸೆ ಎಂಬ ಶಬ್ದವನ್ನು ಜೀವವಿರುವ ಪ್ರಾಣಿಗಳಿಗೆ ದುಃಖ ಕೊಡುವುದಕ್ಕೆ, ಕೊಲ್ಲುವುದಕ್ಕೆ ಪರ್ಯಾಯವಾಗಿ ಬಳಸಲಾಗುತ್ತದೆ. ಇದರಲ್ಲಿ ಶಾರೀರಿಕ - ಮಾನಸಿಕ ನೋವುಗಳೆರಡೂ ಸೇರಿವೆ. ಅಹಿಂಸೆ ಇದರ ವಿರೋಧಾರ್ಥವಾಗಿದೆ.

ಜೈನಧರ್ಮ

ಅಹಿಂಸೆ ಜೈನಧರ್ಮದ ಮೌಲಿಕ ಸಿದ್ಧಾಂತಗಳಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. "ಅಹಿಂಸಾ ಮನು ಪರಮೋ ಧರ್ಮ" ಅರ್ಥಾತ್ ಅಹಿಂಸೆ ಮನುಷ್ಯನ ಎಲ್ಲ ಧರ್ಮಗಳಿಗಿಂತಲೂ ಉಚ್ಚಧರ್ಮ ಮತ್ತು ಎಲ್ಲ ಕರ್ತವ್ಯಗಳಿಗಿಂತಲೂ ದೊಡ್ಡ ಕರ್ತವ್ಯವೆನ್ನಲಾಗಿದೆ. ಜೈನಧರ್ಮದ ನಾಯಕರಾದ ಶ್ರೀ ವಿಜಯ ವಲ್ಲಭ ಸೂರಜಿಯವರು 'ಜೈನಿಝಮ್' ಎಂಬ ತನ್ನ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾರೆ: "ಜೀವನವು ಪವಿತ್ರವಾಗಿದೆ, ಅದು ಯಾವುದೇ ರೂಪದಲ್ಲಿರಲಿ, ಅದಕ್ಕೆ ತೊಂದರೆ ಕೊಡದಿರುವುದು ಅಹಿಂಸೆ ಆಗಿದೆ.

ಇದು ನೈತಿಕತೆಯ ಶ್ರೇಷ್ಠ ಸಿದ್ಧಾಂತವಾಗಿದೆ. ಯಾವ ರೀತಿಯಲ್ಲಿಯೂ ಹಿಂಸೆ ಮಾಡದ ವ್ಯಕ್ತಿ ಸಜ್ಜನನಾಗಿದ್ದಾನೆ. ಪ್ರತಿಯೊಂದು ಧರ್ಮವು ಮಾನವ ಜೀವನವನ್ನು ಗೌರವಿಸುತ್ತದೆ. ಶಾರೀರಿಕ ಕಷ್ಟ, ಶಬ್ದ ಹಾಗೂ ವಿಚಾರಗಳ ಆಕ್ರಮಣ ಶೈಲಿಯೂ ಹಿಂಸೆ ಎನಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿ ಇದರಿಂದ ದೂರ ಉಳಿಯಬೇಕು." (ಪುಟ: 7-10) ಜೈನಧರ್ಮ ಅಹಿಂಸೆಯನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದ್ದರೂ ಅನಿವಾರ್ಯ ಹಿಂಸೆಗೆ ಸಮ್ಮತಿಸಿದೆ. ಭೋಜನ, ಉಸಿರಾಟ, ನಡೆಯುವುದು, ಕೃಷಿ, ಉದ್ಯೋಗ, ಸಂಪತ್ತಿನ ರಕ್ಷಣೆ, ಸಮಾಜ ದ್ರೋಹಿಗಳಿಗೆ ಶಿಕ್ಷೆ ಮುಂತಾದುವುಗಳು ಅನಿವಾರ್ಯ ಹಿಂಸೆಗಳಾಗಿವೆ. ಸಾಂಯೋಗಿಕ, ವ್ಯವಸಾಯಿಕ ಮತ್ತು ಪ್ರತಿರಕ್ಷಣಾತ್ಮಕ ಎಂಬ ಮೂರು ಪ್ರಕಾರದ ಹಿಂಸೆಯನ್ನು ಅದು ತಡೆಯುವುದಿಲ್ಲ. ಯಾವ ಹಿಂಸೆ ಪೀಡಿಸಲಿಕ್ಕಾಗಿ, ಮನರಂಜನೆಗಾಗಿ, ಸ್ವಾದಕ್ಕಾಗಿ, ಯಜ್ಞಯಾಗಾದಿಗಳಿಗಾಗಿದೆಯೋ ಅಂತಹ ಹಿಂಸೆಯಿಂದ ಸದಾ ದೂರವಿರಲು ಅದು ಬೋಧಿಸುತ್ತದೆ. ಜೈನಧರ್ಮ ಅತ್ಯಂತ ಕಡಿಮೆ, ಅನಿವಾರ್ಯ ಹಿಂಸೆಯನ್ನು ಅನುಮತಿಸುತ್ತದೆ.

ಈ ನಿಲುವಿಗೆ ಜೈನಧರ್ಮದ ವಿಶ್ವಾಸವೇ ಕಾರಣವಾಗಿದೆ. ಅದರ ದೃಷ್ಟಿಯಲ್ಲಿ ಮಾನವ ಆತ್ಮ ಇಲ್ಲಿ ಮಾಯಾಜಾಲದಲ್ಲಿ ಸಿಲುಕಿದೆ. ಈ ಪ್ರಪಂಚದ ಕೊಡುಗೆ ಹಾಗೂ ಅನುಗ್ರಹಗಳು ಈ ಜಾಲದ ಆಕರ್ಷಣೆಗಳಾಗಿದ್ದು, ಇವುಗಳಿಂದ ದೂರವಿದ್ದು ಸಾಕಷ್ಟು ಮಟ್ಟಿಗೆ ಶರೀರವನ್ನು ದಂಡಿಸಬೇಕು. ಊಟ ರುಚಿ ರಹಿತ, ಕಡಿಮೆ ಹಾಗೂ ಪೌಷ್ಟಿಕ ರಹಿತವಾಗಿರಬೇಕು. ಊಟದ ತಟ್ಟೆಯ ಬದಲಾಗಿ ಕೈಯಲ್ಲೇ ಆಹಾರ ಸೇವಿಸಬೇಕು. ಬಟ್ಟೆ ಗುಪ್ತಾಂಗ ಮುಚ್ಚುವಷ್ಟಾದರೆ ಅಥವಾ ಅದೂ ಇಲ್ಲದಿದ್ದರೆ ನಡೆಯುತ್ತದೆ. ದಾಂಪತ್ಯ ಜೀವನ, ಕಾಮೇಚ್ಛೆ ಮತ್ತು ಹೆಣ್ಣಿನ ನೆರಳಿನಿಂದಲೂ ದೂರವಿರಬೇಕು. ಏಕೆಂದರೆ ಈ ಪ್ರಪಂಚ ಕೆಟ್ಟ ಬಲೆ ಹಾಗೂ ಸೆರೆಮನೆಯಾಗಿದ್ದು ಆತ್ಮದ ಮುಕ್ತಿ ಅಥವಾ ಮೋಕ್ಷ ಎಲ್ಲ ತರದ ಮೋಹ, ಆಕಾಂಕ್ಷೆಗಳ ತ್ಯಾಗ ಹಾಗೂ ದೇಹದಂಡನೆಯಿಂದಲೇ ಸಾಧ್ಯ. ದೇಹ ಮತ್ತು ಪ್ರಾಣದ ಸಂಬಂಧ ಕೊನೆಗೊಳಿಸಿ, ಆತ್ಮ ಮಾಯಾಜಾಲದಿಂದ ಮುಕ್ತಿ ಪಡೆದು, ಪರಮಾತ್ಮನಲ್ಲಿ ವಿಲೀನ ಹೊಂದಿ ಸ್ವತಃ ಪರಮಾತ್ಮನಾಗುವುದೇ ಜೀವನದ ಮಹದುದ್ದೇಶ.

ಈ ವಿಚಾರ ಚಾಲನೆಯಲ್ಲಿದೆ. ಇದಂತೂ ಸಂಸಾರತ್ಯಾಗ, ಸುಸಂಸ್ಕೃತ ಜೀವನ ತ್ಯಾಗ, ಜೀವನ ಸಂಘರ್ಷದಿಂದ ಪಲಾಯನ ಮತ್ತು ಆತ್ಮಹತ್ಯೆಯ ದಾರಿಯಾಗಿದೆ. ಯಾರು ಬೇಕಾದರೂ ವ್ಯಾವಹಾರಿಕವಲ್ಲದ ಈ ಅಹಿಂಸಾ ತತ್ವಾದರ್ಶವನ್ನು ಒಪ್ಪಿ-ಅಪ್ಪಿಕೊಳ್ಳಬಹುದಾಗಿದೆ.

ಬೌದ್ಧ ಧರ್ಮ

ಅಹಿಂಸಾ ತತ್ವದ ಬೋಧನೆಯಲ್ಲಿ ಜೈನಧರ್ಮದ ನಂತರ ಬೌದ್ಧಧರ್ಮ ಅತಿ ಪ್ರಮುಖವಾಗಿದೆ. ಆದರೆ ಗೌತಮ ಬುದ್ಧರು ಮಾಂಸಾಹಾರಿಯಾಗಿದ್ದು ಮರಣಕ್ಕಿಂತ ಮುಂಚೆ ವರಾಹ ಮಾಂಸ ಸೇವಿಸಿದ್ದರು. ಇದರಿಂದ ಮೃತ್ಯು ಆಯಿತು. ಅವರ ಈ ಮೃತ್ಯುವಿಗೆ ನಿರ್ವಾಣ(ಮುಕ್ತಿ) ಎನ್ನಲಾಗುತ್ತದೆ (ಭಗವಾನ್ ಬುದ್ಧ, ಪುಟ: 381). ಬೌದ್ಧ

ಧರ್ಮಗುರುಗಳು, ಅನುಯಾಯಿಗಳು ಮಾಂಸಾಹಾರಿಯಾಗಿದ್ದಾರೆ. ಟಿಬೇಟಿನ ಬೌದ್ಧ ನಾಯಕ ದಲಾಯಿಲಾಮಾ ಮಾಂಸಾಹಾರಿಯಾಗಿದ್ದಾರೆ. ಗೌತಮ ಬುದ್ಧರು ಯಜ್ಞಯಾಗಾದಿಗಳಲ್ಲಿ ಬಲಿ ಅರ್ಪಿಸುವುದನ್ನು ತಡೆದರು. ಈ ಬಲಿಪಶುಗಳನ್ನು ಬಡವರಿಂದ ಬಲಾತ್ಕಾರವಾಗಿ ವಶಪಡಿಸಿಕೊಳ್ಳಲಾಗುತ್ತಿತ್ತು ಮತ್ತು ಆ ಪ್ರಾಣಿಗಳು ಅತ್ಯುಪಯೋಗಿಗಳಾಗಿರುತ್ತಿದ್ದವು.

(ಧರ್ಮಾನಂದ ಗೋಸಂಬಿ. ಗೌತಮಬುದ್ಧ, ಪುಟ: 320-321)

ಹಿಂದೂ ಧರ್ಮ

ಡಾ| ರಾಧಾಕೃಷ್ಣನ್ ದಿವಂಗತ ರಾಷ್ಟ್ರಪತಿ, ಹಿಂದೂ ಮೇಧಾವಿ, ತತ್ವಜ್ಞಾನಿ ಹಾಗೂ ಧರ್ಮ ಪಂಡಿತರು. ಇವರು 'ಧರ್ಮ ಮತ್ತು ಸಮಾಜ' ಎಂಬ ತಮ್ಮ ಪುಸ್ತಕ(ಪುಟ: 207) ದಲ್ಲಿ ಹೀಗೆ ಬರೆದಿದ್ದಾರೆ: "ಹಿಂದೂ ಧರ್ಮಗ್ರಂಥಗಳು ಅಹಿಂಸೆಯನ್ನು ಅತ್ಯಂತ ಶ್ರೇಷ್ಠವಾದ ನೈತಿಕತೆ ಎಂದು ವರ್ಣಿಸುತ್ತವೆ. ಅಹಿಂಸೆಯು ಹಿಂಸೆಯ ವಿರೋಧಾರ್ಥ ವಾಗಿದೆ. ಅದರ ಅರ್ಥ ನೋವು ಅನುಭವಿಸುವ ಯಾವುದೇ ಜೀವಿಗೆ ಕಷ್ಟ ಕೊಡದಿರುವುದಾಗಿದೆ."

ಹಿಂದೂ ಧರ್ಮಗ್ರಂಥಗಳಲ್ಲಿ ಪ್ರಾಣಿವಧೆ ಮತ್ತು ಮಾಂಸಾಹಾರದ ಇನ್ನೂ ಅನೇಕ ಉಲ್ಲೇಖಗಳಿವೆ. ಅವಶ್ಯವಿದ್ದರೆ ಪ್ರಾಣಿ ಮಾತ್ರವಲ್ಲ ಮನುಷ್ಯನನ್ನೂ ಕೊಲ್ಲಬಹುದು. ಆತ್ಮರಕ್ಷಣೆಯ ಕಾರಣಕ್ಕಾಗಿ ಯುದ್ಧವನ್ನು ಎಲ್ಲ ಧರ್ಮಗಳೂ ಅನುಮತಿಸಿವೆ. ಯುದ್ಧದಲ್ಲಿ ವಿಜಯಕ್ಕಾಗಿ ದೇವಿ-ದೇವತೆಗಳನ್ನು ಪ್ರಾರ್ಥಿಸಲಾಗಿದೆ. ಯುದ್ಧದ ಆದೇಶ ಮತ್ತು ಆಜ್ಞೆಗಳು ವೇದ ಮತ್ತು ಸ್ಮೃತಿಗಳಲ್ಲಿ ಸಾಕಷ್ಟು ಸಿಗುತ್ತವೆ. ರಾಮಾಯಣ-ಮಹಾಭಾರತ ಹಾಗೂ ಪುರಾಣಗಳಲ್ಲಿ ದೇವಿ-ದೇವತೆಗಳೇ ಯುದ್ಧದಲ್ಲಿ ಸಕ್ರಿಯವಾಗಿ ಪಾಲ್ಗೊಂಡದ್ದು ಕಂಡು ಬರುತ್ತದೆ. ಆಯುಧ ರಹಿತ ದೇವಿ-ದೇವತೆಯರ ಚಿತ್ರಗಳು ಸಿಗುವುದು ಅಪರೂಪ. ಅನೇಕ ಕೈಗಳಲ್ಲಿ-ಅನೇಕ ತರದ ಯುದ್ಧಾಯುಧಗಳಿಂದ ಅಲಂಕೃತಗೊಂಡ ಚಿತ್ರಗಳೇ ಹೆಚ್ಚು.

ಸ್ವಾಮಿ ವಿವೇಕಾನಂದರಿಗೆ ಹಿಂದೂ ಧರ್ಮವನ್ನು ಜಗತ್ತಿನ ಜನರಿಗೆ ಅತ್ಯಂತ ಸಮರ್ಪಕವಾಗಿ ಪ್ರಚಾರ ಮಾಡಿದ ಕೀರ್ತಿ ಸಲ್ಲುತ್ತದೆ. ಅವರು ತನ್ನ "ಹಿಂದೂಯಿಝ್ಮ್ ಮತ್ತು ವೇದಾಂತ" ಎಂಬ ಗ್ರಂಥದಲ್ಲಿ ಯಜ್ಞಗಳಲ್ಲಿ ಪ್ರಾಣಿಬಲಿ ಕೊಡುವುದನ್ನು ಮತ್ತು ಇಂದ್ರದೇವನಿಗೆ ಬಲಿ ಅರ್ಪಿಸುವುದನ್ನು ಉಲ್ಲೇಖಿಸಿದ್ದಾರೆ.

ಮನುಸ್ಮೃತಿ ಹಿಂದೂ ಧರ್ಮಶಾಸ್ತ್ರದ ಬುನಾದಿ ಮತ್ತು ಕಾನೂನು ಸಂಬಂಧಿ ಗ್ರಂಥವಾಗಿದೆ.

ಮನುಸ್ಮೃತಿಯಿಂದ ಪ್ರಮಾಣಗಳು

ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್ |

ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಂ || (ಅಧ್ಯಾಯ 5-28)

ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ಜಂಗಮ ಜೀವ-ಜಂತುಗಳನ್ನು ಚರಾಚರ ವಸ್ತುಗಳನ್ನು ತಿನ್ನಲಿಕ್ಕೆಂದೇ ಪರಮಾತ್ಮನು ಸೃಷ್ಟಿಸಿದ್ದಾನೆ.

ಶ್ವಾವಿಧಂ ಶಲ್ಯಕಂ ಗೋಧಾಂ ಖಡ್ಗ ಕೂರ್ಮಶಶಾಂಸ್ತಥಾ |
ಭಕ್ಷ್ಯಾನ್ ಪಂಚನಖೇಷ್ವಾಹುರನುಷ್ಟ್ರಾಂಶ್ಚೈಕತೋದತಃ || (5-18)

ಮುಳ್ಳು ಹಂದಿ, ಉದ್ದ ಕೂದಲಿನ ಮುಳ್ಳು ಹಂದಿ, ಉಡ, ಖಡ್ಗಮೃಗ, ಆಮೆ, ಮೊಲ ಇವುಗಳನ್ನೂ ಪಂಚನಖಗಳುಳ್ಳ ಪ್ರಾಣಿಗಳನ್ನೂ ತಿನ್ನಬಹುದು ಹಾಗೂ ಒಂಟೆಯನ್ನು ಬಿಟ್ಟು ಒಂದೇ ಸಾಲು ಹಲ್ಲುಳ್ಳ ಪ್ರಾಣಿಗಳನ್ನು ತಿನ್ನಬಹುದೆಂದು ಮನ್ವಾದಿಗಳು ಹೇಳುತ್ತಾರೆ. ಶಾಸ್ತ್ರಸಮ್ಮತ ಮಾಂಸ ತಿನ್ನದವರಿಗೆ 21 ಜನ್ಮ ಪಶುವಾಗಿ ಹುಟ್ಟುವ ಉಗ್ರ ಎಚ್ಚರಿಕೆ ನೀಡಲಾಗಿದೆ.

ನಿಯುಕ್ತಸ್ತು ಯಥಾನ್ಯಾಯಂ ಯೋ ಮಾಂಸಂ ನಾತ್ತಿ ಮಾನವಃ |
ಸ ಪ್ರೇತ್ಯ ಪಶುತಾಂ ಯಾತಿ ಸಂಭವಾನೇಕವಿಂಶತಿಂ || (5-35)

ದೇವ ಪಿತೃ ಕಾರ್ಯಗಳಲ್ಲಿ ಶಾಸ್ತ್ರವಿಧಿ ಹೇಳಿದ ರೀತಿಯಲ್ಲೇ ಮಾಂಸವನ್ನು ಯಾವನು ತಿನ್ನುವುದಿಲ್ಲವೋ ಅವನು ಸತ್ತ ನಂತರ ಇಪ್ಪತ್ತೊಂದು ಜನ್ಮ ಪಶುವಾಗಿ ಹುಟ್ಟುತ್ತಾನೆ. ಅಧ್ಯಾಯ 5ರ ಶ್ಲೋಕ 22 ಹಾಗೂ 27ರಲ್ಲಿಯೂ ಇದರ ವಿವರಣೆಯಿದೆ. ಯಾವ ವಸ್ತು ಮತ್ತು ಜೀವಿ ಯಾರಿಗೆ ಆಹಾರ, ಯಾವುದು ಪಾಪ-ಪುಣ್ಯ, ಯಾವುದು ಹಿಂಸೆ-ಅಹಿಂಸೆ ಎನ್ನುವ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ಮನುಸ್ಮೃತಿಯಲ್ಲಿದೆ.

ಚರಾಣಾಮನ್ನಮಚರಾ ದಂಷ್ಟ್ರಿಣಾಮಪ್ಯದಂಷ್ಟ್ರಿಣಃ |
ಅಹಸ್ತಾಶ್ಚ ಸಹಸ್ತಾನಾಂ ಶೂರಾಣಾಂ ಚೈವ ಭೀರವಃ || (5-29)

ಚಲಿಸುವ ಪಶು-ಪ್ರಾಣಿಗಳಿಗೆ ಚಲಿಸದಿರುವ ಹುಲ್ಲು-ಸಸ್ಯಗಳು ಆಹಾರಗಳು, ಕೋರೆದಾಡೆಗಳಿರುವ ಸಿಂಹ, ಹುಲಿಗಳಿಗೆ ಕೋರೆದಾಡೆಗಳಿರದ ಜಿಂಕೆ ಇತ್ಯಾದಿಗಳು ಆಹಾರಗಳು, ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶು-ಪ್ರಾಣಿಗಳು ಆಹಾರಗಳು ಹಾಗೂ ಶೂರವಾದ ಮತ್ತು ಕ್ರೂರವಾದ ಪ್ರಾಣಿಗಳಿಗೆ ಸಾಧುವಾದ-ಭೀರುವಾದ ಪ್ರಾಣಿಗಳು ಆಹಾರಗಳು.

ನಾತ್ತಾ ದುಷ್ಯತ್ಯದನ್ನಾದ್ಯಾನ್ಪ್ರಾಣಿನೋಽ ಹನ್ಯಹನ್ಯಪಿ |
ಧಾತ್ರೈವ ಸೃಷ್ಟಾ ಹ್ಯಾದ್ಯಾಶ್ಚ ಪ್ರಾಣಿನೋಽತ್ತಾರ ಏವ ಚ || (5-30)

ಪ್ರತಿದಿನವೂ ತಿನ್ನಲಿಕ್ಕೆ ಯೋಗ್ಯವಾದ ಪ್ರಾಣಿಗಳನ್ನು ಕೊಂದು ತಿಂದರೆ ಅದು ಅಪರಾಧವಲ್ಲ. ಏಕೆಂದರೆ ತಿನ್ನುವವರನ್ನೂ ಮತ್ತು ತಿನ್ನಲಾಗುವ ಪ್ರಾಣಿಗಳನ್ನೂ ಭಗವಂತನೇ ಸೃಷ್ಟಿಮಾಡಿದ್ದಾನೆ.

ಕ್ರೀತ್ವಾ ಸ್ವಯಂ ವಾಪ್ಯುತ್ಪಾದ್ಯ ಪರೋಪಕೃತಮೇವ ವಾ |
ದೇವಾನ್ ಪಿತೄಂಶ್ಚಾರ್ಚಯಿತ್ವಾ ಖಾದನ್ ಮಾಂಸಂ ನ ದುಷ್ಯತಿ || (5-32)

ತಾನಾಗಿ ಕೊಂಡು ತಂದು ಅಥವಾ ತಾನಾಗಿ ಪಶುವನ್ನು ಕೊಂದು ತಂದು ಅಥವಾ ಇನ್ನೊಬ್ಬನಿಂದ ಬೇಡಿ ಪಡೆದು ತಂದು ಆ ಮಾಂಸದಿಂದ ದೇವ-ಪಿತೃ ಕಾರ್ಯಗಳನ್ನು ಮಾಡಿ ತಿಂದರೆ ಅದು ದೋಷಯುಕ್ತವಲ್ಲ.

ಬ್ರಾಹ್ಮಣರು ವಿಶೇಷವಾಗಿ ಯಾವ ಮಾಂಸ ತಿನ್ನಬೇಕು ಮತ್ತು ತಿನ್ನಬಾರದೆನ್ನುವ ಬಗ್ಗೆ ಮನುಸ್ಮೃತಿಯ ಮಾರ್ಗದರ್ಶನ:

ಅಸಂಸ್ಕೃತಾನ್ಪಶೂನ್ಮಂತ್ರೈರ್ನಾದ್ಯಾದ್ವಿಪ್ರಃ ಕದಾಚನ |
ಮಂತ್ರೈಸ್ತು ಸಂಸ್ಕೃತಾನದ್ಯಾಚ್ಛಾಶ್ವತಂ ವಿಧಿಮಾಸ್ಥಿತಃ || (5-36)

ಮಂತ್ರಗಳಿಂದ ಯಜ್ಞಾದಿಗಳಲ್ಲಿ ಪವಿತ್ರವಾಗದೇ ಇದ್ದ ಮಾಂಸವನ್ನು ಬ್ರಾಹ್ಮಣನು ಎಂದಿಗೂ ತಿನ್ನಕೂಡದು. ಮಂತ್ರಗಳಿಂದ ಸಂಪ್ರೋಕ್ಷಿತವಾದ ಮತ್ತು ಶಾಸ್ತ್ರವಿಧಿ ಪ್ರಕಾರ ಶುದ್ಧಿ ಮಾಡಲ್ಪಟ್ಟ ಪಶು ಮಾಂಸವನ್ನು ಬ್ರಾಹ್ಮಣರು ತಿನ್ನಬಹುದು.

ಪಶುಗಳ ಸೃಷ್ಟಿಯ ಉದ್ದೇಶವನ್ನು ಮನುಸ್ಮೃತಿಯಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ.

ಯಜ್ಞಾರ್ಥಂ ಪಶವಃ ಸೃಷ್ಟಾಃ ಸ್ವಯಮೇವ ಸ್ವಯಂಭುವಾ |
ಯಜ್ಞಸ್ಯ ಭೂತ್ಯೈ ಸರ್ವಸ್ಯ ತಸ್ಮಾದಜ್ಞೇ ವಧೋಽವಧಃ || (5-39)

ಯಜ್ಞಗಳಿಗೆಂದೇ ಪರಮಾತ್ಮನು ಈ ಪಶುಗಳನ್ನು ಸೃಷ್ಟಿಸಿದ್ದಾನೆ. ಈ ಎಲ್ಲವೂ ಯಜ್ಞದ ಆಚರಣೆಗೆಂದೇ ಇದೆ. ಆದ್ದರಿಂದ ಯಜ್ಞದಲ್ಲಿ ಮಾಡುವ ಪಶುವಧೆಯು ಪಾಪಕರವಲ್ಲ.

ಸಸ್ಯ, ಪ್ರಾಣಿ-ಪಶು, ಪಕ್ಷಿಗಳೆಲ್ಲ ಮುಂದಿನ ಜನ್ಮದಲ್ಲಿ ಉತ್ತಮವಾದ ಜನ್ಮ ಪಡೆಯಬೇಕಾದರೆ ಅವುಗಳು ಮಾಡಬೇಕಾದ ಕರ್ತವ್ಯದ ಬಗ್ಗೆ ಮನುಸ್ಮೃತಿಯ ಮಾರ್ಗದರ್ಶನ. ಈ ರೀತಿಯಾಗಿದೆ:

ಓಷಧ್ಯಃ ಪಶವೋ, ವೃಕ್ಷಾಸ್ತಿರ್ಯಂಚಃ ಪಕ್ಷಿಣಸ್ತಥಾ |
ಯಜ್ಞಾರ್ಥಂ ನಿಧನಂ ಪ್ರಾಪ್ತಾಃ ಪ್ರಾಪ್ನುವಂತ್ಯುತ್ಸೃತೀಃ ಪುನಃ || (5-40)

ಓಷಧಿಗಳು(ಸಸ್ಯಗಳು), ಪಶುಗಳು, ವೃಕ್ಷಗಳು, ಪ್ರಾಣಿ-ಪಕ್ಷಿಗಳು ಯಜ್ಞಗಳಲ್ಲಿ ಉಪಯುಕ್ತವಾಗಿ ಮರಣ ಹೊಂದಿದರೆ ಇನ್ನೂ ಉತ್ತಮವಾದ ಪುನರ್ಜನ್ಮಗಳನ್ನು ಪಡೆಯುತ್ತವೆ.

ಏಷ್ವರ್ಥೇಷು ಪಶೂನ್ ಹಿಂಸನ್ ವೇದತತ್ತ್ವಾರ್ಥವಿದ್ದ್ವಿಜಃ
ಆತ್ಮಾನಂ ಚ ಪಶುಂ ಚೈವ ಗಮಯತ್ಯುತ್ತಮಾಂ ಗತಿಂ || (5-42)

ಹೀಗೆ ಯಜ್ಞ, ಶ್ರಾದ್ಧ ಮತ್ತು ಮಧುಪರ್ಕ ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ಕೊಂದರೆ ತನ್ನ ಜೊತೆಗೆ ಆ ಪಶುವಿಗೂ ಉತ್ತಮ ಗತಿ ಉಂಟು ಮಾಡುತ್ತಾನೆ.

ಮನುಸ್ಮೃತಿಯಲ್ಲಿ ಅಹಿಂಸೆಯನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ:

ಯಾ ವೇದವಿಹಿತಾ ಹಿಂಸಾ ನಿಯತಾಸ್ಮಿಂಶ್ಚರಾಚರೇ |
ಅಹಿಂಸಾಮೇವ ತಾಂ ವಿದ್ಯಾದ್ವೇದಾದ್ಧರ್ಮೋಹಿ ನಿರ್ಬಭೌ || (5-44)

ವೇದವಿಹಿತವಾದ ಎಂದರೆ ವೇದಗಳಲ್ಲಿ(ಯಜ್ಞಗಳಲ್ಲಿ) ಹೇಳಿದ ಹಿಂಸೆಯು ಶಾಸ್ತ್ರನಿಯಮ ರೀತ್ಯಾ ನಡೆಯುವುದರಿಂದ ಅದನ್ನು ಅಹಿಂಸೆಯೆಂದೇ ಪರಿಗಣಿಸಬೇಕು. ಏಕೆಂದರೆ ವೇದಗಳಿಂದಲೇ ಧರ್ಮವು ಹುಟ್ಟಿದೆ.

ಜಗತ್ತಿನಲ್ಲಿ ಅತ್ಯಂತ ಮಹಾಪಾಪಿ ಯಾರೆಂಬುದನ್ನು ಮನುಸ್ಮೃತಿ ಈ ರೀತಿ ತಿಳಿಸಿದೆ:

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ |

ಅನಭ್ಯರ್ಚ್ಯ ಪಿತೄನ್ದೇವಾಂಸ್ತತೋಽನ್ಯೋ ನಾಸ್ತ್ಯಪುಣ್ಯಕೃತ್ || (5-52)

"ಯಾವನು ಪಿತೃಗಳನ್ನು ಹಾಗೂ ದೇವತೆಗಳನ್ನು ಮಾಂಸದ ಮೂಲಕ ಅರ್ಚಿಸದೇ ಕೇವಲ ತನ್ನ ಮಾಂಸವನ್ನೇ ಪರಮಾಂಸದ ಮೂಲಕ ಬೆಳೆಸಿಕೊಳ್ಳಲು ಇಚ್ಛಿಸುತ್ತಾನೋ ಅವನಂತಹ ಪಾಪಿ ಜಗತ್ತಿನಲ್ಲಿ ಇನ್ನಾವನೂ ಇರಲಾರನು."

ಮಾನವ ಸಹಜ ಸ್ವಭಾವ ಮತ್ತು ಪ್ರವೃತ್ತಿಯ ಬಗ್ಗೆ ಮನುಸ್ಮೃತಿಯ ಬೋಧನೆ ಹೀಗಿದೆ:

"ನ ಮಾಂಸಭಕ್ಷಣೇ ದೋಷೋ ನ ಮದ್ಯೇ ನ ಚ ಮೈಥುನೇ |

ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ || (5-56)

ಮಾಂಸ ಭಕ್ಷಣದಲ್ಲಿ, ಮದ್ಯಪಾನದಲ್ಲಿ ಮತ್ತು ಮೈಥುನದಲ್ಲಿ ದೋಷವಿಲ್ಲ. ಏಕೆಂದರೆ ಇದು ಮನುಷ್ಯರಿಗೆ ಸ್ವಾಭಾವಿಕವಾದುದು ಹಾಗೂ (ಇದು ಮನುಷ್ಯರ) ಸಹಜ ಪ್ರವೃತ್ತಿಯಾಗಿದೆ. ಆದರೆ ಇವುಗಳಲ್ಲಿ ಪ್ರವೃತ್ತಿಗಿಂತ, ಇವುಗಳ ನಿವೃತ್ತಿಯೇ ಮಹಾಫಲದಾಯಕವಾದದ್ದು.

ಪಿತೃಗಳನ್ನು ವಿಧಿಪ್ರಕಾರ ಯಾವ ರೀತಿ ಸಂತುಷ್ಟಗೊಳಿಸಬೇಕು ಮತ್ತು ಅವು ಯಾವ ವಿಧಿಯಿಂದ ಎಷ್ಟು ಸಮಯದ ವರೆಗೆ ಸಂತುಷ್ಟವಾಗಿರುವವೆನ್ನುವುದನ್ನು ಮನುಸ್ಮೃತಿಯ ಮೂರನೆಯ ಅಧ್ಯಾಯದಲ್ಲಿ ವಿವರವಾಗಿ ತಿಳಿಸಲಾಗಿದೆ;

ಪಿತೄಣಾಂ ಮಾಸಿಕ ಶ್ರಾದ್ಧಂ ಮನ್ವಾಹಾರ್ಯಂ ವಿದುರ್ಬುಧಾಃ |

ತಚ್ಚಾಮಿಷೇಣ ಕರ್ತವ್ಯಂ ಪ್ರಶಸ್ತೇನ ಪ್ರಯತ್ನತಃ (3-123)

ಪಿಂಡಪಿತೃಯಜ್ಞದ ಬಳಿಕವೇ ಮಾಸಿಕ ಶ್ರಾದ್ಧವು (ಪ್ರತಿ ತಿಂಗಳಲ್ಲಿ) ಮಾಡಲ್ಪಡುವ ಕಾರಣ ಈ ಪಾರ್ವಣ(ಅಮಾವಾಸ್ಯೆಯ ಪರ್ವದಿನದಲ್ಲಿ ಮಾಡುವ) ಶ್ರಾದ್ಧವನ್ನು ಪಿಂಡಾನ್ವಾಹಾರ್ಯಕವೆಂದು ಹೇಳುತ್ತಾರೆ. ಇದಕ್ಕೆ ಒಳ್ಳೆಯ ಮಾಂಸವನ್ನು ಉಪಯೋಗಿಸಬೇಕು. (ಶ್ರಾದ್ಧದಲ್ಲಿ ಮಾಂಸದ ಅಡುಗೆ ಮಾಡಬೇಕು) ಆಮಿಷಂ=ಮಾಂಸ.

ಯಾವ ಒಳ್ಳೆಯ ಮಾಂಸದಿಂದ ಪಿತೃಗಳು ಎಷ್ಟು ಅವಧಿಯ ವರೆಗೆ ತೃಪ್ತಿಯಿಂದ ಇರುತ್ತವೆ ಎನ್ನುವುದನ್ನು ಕೂಡಾ ಸ್ಪಷ್ಟವಾಗಿ ತಿಳಿಸಲಾಗಿದೆ-

ದ್ವೌ ಮಾಸೌ ಮತ್ಸ್ಯಮಾಂಸೇನ ತ್ರೀನ್ ಮಾಸಾನ್ ಹಾರಿಣೇನ ತು |

ಔರಭ್ರೇಣಾಥ ಚತುರಃ ಶಾಕುನೇನಾಥ ಪಂಚ ವೈ|| (3-268)

ಮೀನಿನ ಮಾಂಸದಿಂದ ಎರಡು ತಿಂಗಳು, ಜಿಂಕೆಯ ಮಾಂಸದಿಂದ ಮೂರು ತಿಂಗಳು, ಕುರಿಯ ಮಾಂಸದಿಂದ ನಾಲ್ಕು ತಿಂಗಳು, ಪಕ್ಷಿಯ ಮಾಂಸದಿಂದ ಐದು ತಿಂಗಳು- ಹೀಗೆ ಪಿತೃಗಳು ತೃಪ್ತಿಯಿಂದಿರುತ್ತಾರೆ.

ಷಣ್ಮಾಸಾಂಶ್ಚಾಗಮಾಂಸೇನ ಪಾರ್ಷತೇನ ಚ ಸಪ್ತ ವೈ |
ಅಷ್ಟಾವೇಣಸ್ಯ ಮಾಂಸೇನ ರೌರವೇಣ ನವೈವ ತು || (3-269)

ಆಡಿನ ಮಾಂಸದಿಂದ ಆರು ತಿಂಗಳು, ಚಿತ್ರಮೃಗದ ಮಾಂಸದಿಂದ ಏಳು ತಿಂಗಳು, ಕೃಷ್ಣಮೃಗದ ಮಾಂಸದಿಂದ ಎಂಟು ತಿಂಗಳು, ಸಾರಂಗದ ಮಾಂಸದಿಂದ ಒಂಬತ್ತು ತಿಂಗಳು- ಹೀಗೆ ಪಿತೃಗಳು ತೃಪ್ತಿಯಿಂದಿರುತ್ತಾರೆ.

ದಶಾಮಾಸಾಂಸ್ತು ತೃಪ್ಯಂತಿ ವರಾಹಮಹಿಷಾಮಿಷೈಃ |
ಶಶಕೂರ್ಮಯೋಸ್ತು ಮಾಂಸೇನ ಮಾಸಾನೇಕಾದಶೈವ ತು || (3-270)

ಕಾಡುಹಂದಿ-ಕಾಡುಕೋಣಗಳ ಮಾಂಸದಿಂದ ಹತ್ತು ತಿಂಗಳು, ಮೊಲ ಮತ್ತು ಆಮೆಗಳ ಮಾಂಸದಿಂದ ಹನ್ನೊಂದು ತಿಂಗಳು ಪಿತೃಗಳು ತೃಪ್ತಿಯಿಂದಿರುತ್ತಾರೆ.

ವೇದಗಳಲ್ಲಿಯೂ ಕೂಡಾ ಮಾಂಸ ಭಕ್ಷಣೆಯ ಉಲ್ಲೇಖವಿದೆ. ವೇದಗಳು ನಾಲ್ಕು- 1. ಋಗ್ವೇದ 2. ಯಜುರ್ವೇದ 3. ಸಾಮವೇದ 4. ಅಥರ್ವ ವೇದ.

ಋಗ್ವೇದ ಎಲ್ಲಕ್ಕಿಂತ ಪ್ರಾಚೀನ ಹಾಗೂ ಮಹತ್ವಪೂರ್ಣ ಧಾರ್ಮಿಕ ಗ್ರಂಥ, ಯಜುರ್ವೇದವು ಯಜ್ಞಕ್ಕೆ ಸಂಬಂಧಿಸಿದ ಆಚಾರ, ಆದೇಶ ಹಾಗೂ ಮಂತ್ರಗಳನ್ನೊಳಗೊಂಡಿದೆ. ಋಗ್ವೇದದ 5ನೇ ಮಂಡಲದ 29ನೇ ಸೂಕ್ತದ 7ನೇ ಮಂತ್ರದಲ್ಲಿ ಎಮ್ಮೆ ಅಥವಾ ಕೋಣದ ಮಾಂಸ ಭಕ್ಷಣೆಯ ಬಗ್ಗೆ ಈ ರೀತಿ ಹೇಳಲಾಗಿದೆ;

ಸಖಾ ಸಖ್ಯೇ ಅಪಚತ್ತೂಯಮಗ್ನಿರಸ್ಯ ಕೃತ್ವಾ ತ್ರಿಶತಾನಿ ಮಹಿಷಾನಿ (5:29-7)

ತನ್ನ ಮಿತ್ರನಾದ ಇಂದ್ರನಿಗೋಸ್ಕರ ಅಗ್ನಿಯು 300 ಕೋಣಗಳನ್ನು ಬೇಯಿಸಿಕೊಟ್ಟನು. ನೂರು ಎಮ್ಮೆಯ ವಿವರ ಕೂಡಾ ಇದೆ. (6:11-17 ಋ)

ಈ ಆಕಳ ಹಾಲು ಮತ್ತು ಮಾಂಸ ಬಹಳ ರುಚಿಕರವಾಗಿರುತ್ತದೆ. ಇದನ್ನು ಅತಿಥಿಗಳಿಗಿಂತ ಮುಂಚೆ ತಿನ್ನಕೂಡದು. ಅಥರ್ವ ವೇದ (39:6-9)

ಯಜುರ್ವೇದದ 22ನೇ ಅಧ್ಯಾಯದಿಂದ 25ನೆಯ ಅಧ್ಯಾಯದ ವರೆಗೆ ಅಶ್ವಮೇಧ ಯಜ್ಞದ ವಿವರವಿದೆ. ಋಗ್ವೇದದ ಒಂದು ಮಂತ್ರದಲ್ಲಿ ಗೋವನ್ನು ವಧಾಸ್ತಂಭಕ್ಕೆ ಕಟ್ಟಿ ಅದನ್ನು ವಧಿಸಲು ಸಿದ್ಧತೆ ಮಾಡುವ ಮಂತ್ರ ಹೀಗಿದೆ:

"ಸ್ವಿಧ್ಮಾಯದ್ವನದೀತಿಭಿ: ಅಪಸ್ಯಾತ್ ಸೂರೋ ಅಧ್ವರೇ ಪರಿರೋಧನಾ ಗೋಃ"

(1-121-7)

ವೇದ ಕಾಲದ ಆರ್ಯರ ಗೋಮಾಂಸ, ಕುದುರೆ, ಆಡು, ಕೋಣದ ಮಾಂಸ ಭಕ್ಷಣೆಯ ಖಚಿತ ಆಧಾರ ಋಗ್ವೇದದಲ್ಲಿದೆ. ಅದರ ಮೊದಲನೇ ಮಂಡಲದ 162ನೇ ಸೂಕ್ತ ಸಂಪೂರ್ಣ ಕುದುರೆಯ ವಧೆಗೆ ಮೀಸಲಾಗಿದೆ. ಈ ಸೂಕ್ತದ 12ನೇ ಮಂತ್ರದಲ್ಲಿ

ವಧಿಸಲ್ಪಟ್ಟ ಕುದುರೆಯ ಮಾಂಸ ಬೇಯಿಸುತ್ತಿರುವುದನ್ನೂ ಅದರ ಹಂಚುವಿಕೆಯನ್ನೂ ವಿವರಿಸಲಾಗಿದೆ,

ಯೇ ವಾಜಿನಂ ಪರಿಪಶ್ಯಂತಂ ಪಕ್ವಂ
ಯ ಈಮಾಹುಃ ಸುರಭಿರ್ನಿಹರೇತಿ!
ಯೇಚಾರ್ವತೋ ಮಾಂಸಭಿಕ್ಷಾಮಂಪಾಸತ
ಉತೋ ತೇಷಾ ಮಾಭಿ ಗೂರ್ತಿರ್ನ ಇನ್ವತುಃ (ಋ: 1-162-12)

"ಈ ಕುದುರೆಯ ಅವಯವಗಳೂ ಮಾಂಸವೂ ಬೇಯುತ್ತಿರುವುದನ್ನು ಬಹಳ ಆಸಕ್ತಿಯಿಂದ ಯಾರು ನೋಡುತ್ತಿರುವರೋ; ಮಾಂಸವು ಚೆನ್ನಾಗಿ ಬೆಂದು ಸುವಾಸನೆಯನ್ನು ಬೀರುತ್ತಿದೆಯಾದ್ದರಿಂದ ಅದನ್ನು ಬೆಂಕಿಯಿಂದ ಕೆಳಗೆ ಇಳಿಸಿ ಅದರ ಒಂದು ಭಾಗವನ್ನು ದೇವತೆಗಳಿಗೆ ಅರ್ಪಿಸಿ, ಒಂದು ಭಾಗವನ್ನು ತಮಗೂ ಕೊಡಬೇಕೆಂದು ಯಾರು ಅಪೇಕ್ಷಿಸುತ್ತಿರುವರೋ ಅವರ ಕೋರಿಕೆಗಳೆಲ್ಲ ನೆರವೇರಲಿ."

(S.R.Bhat ಹಿಂದೂ, ಮುಸ್ಲಿಮ್ ಘರ್ಷಣೆಗಳ ಸಮಸ್ಯೆ, ನವ ಕರ್ನಾಟಕ ಪ್ರಕಾಶನ 1989, ಹಿಂದೂ ಧರ್ಮದಲ್ಲಿ ಗೋವು ಸತ್ಯ-ಮಿಥ್ಯ, ಪುಟ: 79-90)

19ನೇ ಶತಮಾನದ ಪ್ರಸಿದ್ಧ ಬಂಗಾಳಿ ವಿದ್ವಾಂಸ ರಾಜಾ ರಾಜೇಂದ್ರಲಾಲ್ ಮಿತ್ರ ಅವರು "ಪ್ರಾಚೀನ ಭಾರತದಲ್ಲಿ ಗೋಮಾಂಸ" ಎಂಬ ತಮ್ಮ ಕೃತಿಯಲ್ಲಿ ಬಹಳ ವಿವರವಾಗಿ ಗೋಮೇಧಗಳ ಬಗ್ಗೆ ಬರೆದಿದ್ದಾರೆ.

ಕೆಲವು ನಿರ್ದಿಷ್ಟ ಫಲಗಳಿಗೋಸ್ಕರ ನಿರ್ದಿಷ್ಟ ದೇವತೆಗಳನ್ನು ಉದ್ದೇಶಿಸಿ ಮಾಡಲಾಗುತ್ತಿದ್ದ ಕಾಮೇಷ್ಟಿಗಳಲ್ಲೂ ಗೋವುಗಳೇ ಮುಖ್ಯ ಬಲಿಪಶುಗಳಾಗಿದ್ದವು. ವೇದ ಸಂಹಿತೆಗಳ ಅನಂತರ ಬರುವ ಐತಿರೇಯ, ತೈತಿರೇಯ, ಗೋಪಥ ಮೊದಲಾದ ಬ್ರಾಹ್ಮಣಗಳಲ್ಲಿ ಹಾಗೂ ಧರ್ಮಸೂತ್ರಗಳಲ್ಲಿ ಈ ಯಜ್ಞಗಳ ವಿವರವಿದೆ. ಶತಪತ ಬ್ರಾಹ್ಮಣ ಕಾಂಡ-4, ಕುಂಡಕ 1-2-3ರಲ್ಲಿ ಬಲಿಪಶುವನ್ನು (ಯಾವ ರೀತಿ) ಕಂಬಕ್ಕೆ ಕಟ್ಟಿ-ಬಲಿಕೊಡುವಾಗ ಓದುವ ಮಂತ್ರಗಳ ವಿವರವಿದೆ. ಶತಪತ ಕುಂಡಕ 6ರಲ್ಲಿ ಬಲಿಪಶುವಿನ ಬಲಿಯ ನಂತರ ಅದರ ವಿವಿಧ ಅಂಗಾಂಗಗಳನ್ನು ಸ್ವಚ್ಛಗೊಳಿಸುವಾಗ ಪಠಿಸುವ ಮಂತ್ರ ಹೀಗಿದೆ-

"ನಾನು ನಿನ್ನ ವಾಗೇಂದ್ರಿಯವನ್ನು ಸ್ವಚ್ಛಗೊಳಿಸುತ್ತೇನೆ, ನಿನ್ನ ಶ್ವಾಸ ಮಾರ್ಗವನ್ನು ಸ್ವಚ್ಛಗೊಳಿಸುತ್ತೇನೆ, ನಿನ್ನ ಕಣ್ಣು, ಕಿವಿ, ಜನನೇಂದ್ರಿಯ, ಮಲಸ್ಥಾನ ಹಾಗೂ ಕಾಲುಗಳನ್ನು ತೊಳೆಯುತ್ತೇನೆ."

"ತೈತಿರೇಯ ಬ್ರಾಹ್ಮಣದ ಪ್ರಕಾರ ಕಾಮೇಷ್ಟಿಗಳಲ್ಲಿ ಬೇರೆ ಬೇರೆ ದೇವತೆಗಳಿಗೆ ಬೇರೆ ಬೇರೆ ರೀತಿಯ ಗೋವುಗಳನ್ನು ಆಹುತಿ ಮಾಡಲಾಗುತ್ತಿತ್ತು. ವಿಷ್ಣುವಿಗೆ ಒಂದು ಕುಳ್ಳ ಎತ್ತು, ಇಂದ್ರನಿಗೆ ದಪ್ಪ ಕಾಲುಗಳುಳ್ಳ ಒಂದು ಹಸು ಅಥವಾ ಹಣೆಯ ಮೇಲೆ ಬಿಳಿ ಪಟ್ಟೆ ಇರುವ ಎತ್ತು, ವರುಣನಿಗೆ ಒಂದು ಗೊಡ್ಡು ಹಸು, ಬೃಹ್ಮಣಸ್ಪತಿಗೆ ಕೋಡುಗಳಿಲ್ಲದ

ಎತ್ತು, ವಾಯುವಿಗೆ ಒಂದು ಬಾರಿ ಮಾತ್ರ ಕರು ಹಾಕಿದ ಹಸು, ರುದ್ರನಿಗೆ ಕೆಂಪು ಹಸು, ಸೂರ್ಯನಿಗೆ ಬಿಳಿ ಬಣ್ಣದ ಗೊಡ್ಡು ಹಸು ಇತ್ಯಾದಿ." (ಪ್ರಾಚೀನ ಭಾರತದಲ್ಲಿ ಗೋಮಾಂಸ, ಪುಟ: 8)

ಗೋವುಗಳ ಮಾಂಸದ ವಿವಿಧ ಭಾಗಗಳ ಅಡಿಗೆ ತಯಾರಿಕೆಯ ವಿವರ ತಿಳಿಸಲಾಗಿದೆ. ಈ ಭಕ್ಷ್ಯಗಳ ಒಂದು ಭಾಗ ಅಗ್ನಿಯ ಮೂಲಕ ದೇವತೆಗಳಿಗೆ ಅರ್ಪಿಸಿ, ಉಳಿದ ಅಂಶವನ್ನು ಯಜ್ಞದ ಕರ್ತೃಗಳೂ ಯತ್ವಿಜರೂ ತಿನ್ನುತ್ತಿದ್ದರು. (ಪುಟ: 25)

ಮಧುಪರ್ಕ ಅಂದರೆ ಅಪರೂಪದ ಅತಿಥಿಗಳಿಗೆ ನೀಡುವ ಸತ್ಕಾರ, ಇಂತಹ ಸಮಾರಂಭದ ಭೋಜನದಲ್ಲಿ ಗೋಮಾಂಸ ಅತ್ಯಗತ್ಯವೆಂದು ಅಶ್ವತ್ಥಾಮರೇ ಮೊದಲಾದ ಧರ್ಮ ಸೂತ್ರಕಾರರು ವಿವರಿಸಿದ್ದಾರೆ. "ಉತ್ತರ ರಾಮಚರಿತ"ದಲ್ಲಿ ಬರುವಂತೆ ವಸಿಷ್ಠರೇ ಮೊದಲಾದ ಅತಿಥಿಗಳು ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಬಂದಾಗ ಅವರನ್ನು ಸತ್ಕರಿಸಲು ಒಂದು ಗೋವಿನ ಕರುವನ್ನು ಕೊಲ್ಲಿಸಿ ಅಡಿಗೆ ಮಾಡಿಸುತ್ತಾರೆ.

ಸಂಸ್ಕೃತ ಭಾಷೆಯಲ್ಲಿ ಅತಿಥಿಗೆ "ಗೋಘ್ನ" ಎಂಬ ಪರ್ಯಾಯ ನಾಮ ಬಳಕೆಗೆ ಬರಲು ಇದೇ ಕಾರಣ.

ಉಪನಿಷತ್ತುಗಳಲ್ಲಿ ಅತ್ಯಂತ ಹಳೆಯದಾದ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೀಗಿದೆ;

"ಅಥಯ ಇಚ್ಛೇತ್ ಪುತ್ರೋಮೇ ಪಂಡಿತೋ ವಿಗೀತಃ ಸಮಿತಿಂಗಮಃ
ಶೂಶ್ರೂ ಷಿತಾಂ ವಾಚಂ ಭಾಷಿತಾ ಜಾಯೇತ, ಸರ್ವಾನ್ ವೇದಾನ್ ಅನುಬ್ರುವೀತ,
ಸರ್ವಂ ಆಯುರಿಯಾದಿತಿ, ಮಾಂಸೋದನಂ ಪಾಚಯಿತ್ವಾ ಸರ್ಪಿಷ್ಮಂತಂ
ಅಶ್ನೀಯಾತಾಮಿಶ್ವರೌ ಜನಯಿತಾ ವೈ ಔಕ್ಷೇನ ವಾ ಅರ್ಷಭೇನ
ವಾ - ಬ್ರಹದಾರಣ್ಯಕೋಪನಿಷತ್" (6-4-28)

ಒಳ್ಳೆಯ ಪಂಡಿತನೂ, ವಾಗ್ಮಿಯೂ, ಎಲ್ಲ ವೇದಗಳನ್ನು ಅರಿಯಬಲ್ಲವನೂ, ದೀರ್ಘಾಯುಷಿಯೂ ಆದ ಮಗನನ್ನು ಪಡೆಯಬೇಕೆಂಬ ಇಚ್ಛೆಯುಳ್ಳವರು ಬಲಿತ ಎತ್ತಿನ ಅಥವಾ ಯುವ ಹೋರಿಯ ಮಾಂಸವನ್ನು ಅನ್ನದೊಂದಿಗೆ ಬೇಯಿಸಿ, ಬೆಣ್ಣೆಯಲ್ಲಿ ಕಲಸಿ ತಿನ್ನಬೇಕು ಎಂದು ಹೇಳಲಾಗಿದೆ.

ಹಿಂದೂ ಧರ್ಮಗ್ರಂಥಗಳಲ್ಲಿ ಇಷ್ಟೊಂದು ಸವಿವರವಾಗಿ ಮಾಂಸ ಭಕ್ಷಣೆಯ ಆದೇಶಗಳು ಇರುವಾಗ ಮಾಂಸಭಕ್ಷಣೆ ಹಿಂದುಗಳಿಗೆ ನಿಷಿದ್ಧವೆನ್ನುವುದು ಯಾವಾಗ ಪ್ರಾರಂಭವಾಯಿತು, ಯಾವ ಧರ್ಮಗ್ರಂಥಗಳ ಆಧಾರದ ಮೇಲಾಯಿತು. ಈ ಹಿಂದಿನ ಸರ್ವಮಾನ್ಯ ಹಿಂದೂ ಧರ್ಮಗ್ರಂಥಗಳ ಮಾಂಸಭಕ್ಷಣೆಯ ಬೋಧನೆಯನ್ನು ತಿರಸ್ಕರಿಸುವ ಅಧಿಕಾರ ಯಾರಿಗಿತ್ತು ಮತ್ತು ಅದೂ ಎಲ್ಲ ಹಿಂದೂ ಬಾಂಧವರಿಗೆ ಮಾನ್ಯವೇ ಎಂಬ ಅನೇಕ ಪ್ರಶ್ನೆಗಳಿಗೆ ನಿಖರವಾದ ಉತ್ತರ ಸಿಗುವುದು ಕಠಿಣ.

ಎಸ್. ಆರ್. ಭಟ್‌ರವರು 'ಹಿಂದೂ ಧರ್ಮದಲ್ಲಿ ಗೋವು, ಸತ್ಯ ಮತ್ತು ಮಿಥ್ಯ' ಎಂಬ ತಮ್ಮ ಪುಸ್ತಕದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳ ಅಹಿಂಸೆಯ ಪ್ರಭಾವ,

ಯಜ್ಞಗಳಲ್ಲಿ ಪ್ರಾಣಿವಧೆಯ ಖಂಡನೆ ಮತ್ತು ಬೇಸಾಯದಲ್ಲಿ ದೊಡ್ಡ ಪ್ರಮಾಣದ ಪಶು ಹತ್ಯೆಯಿಂದಾದ ದುಷ್ಪರಿಣಾಮಗಳೇ ನಿಧಾನವಾಗಿ ಪ್ರಾಣಿಬಲಿ ಕಡಿಮೆಯಾಗುವ ಕಾರಣವೆಂದಿದ್ದಾರೆ. ಅದರ ನಂತರ ಪುಷ್ಟ ಪಶುಗಳಿಗೆ ಬದಲಾಗಿ ಪಿಷ್ಟ ಪಶುವನ್ನು (ಪಶುವಿನ ಆಕಾರದ ಹಿಟ್ಟಿನ ಮುದ್ದೆಗಳು) ಆಹುತಿ ಮಾಡುವ ಕ್ರಮ ಮೊದಲು ಆರಂಭವಾಯಿತು. ಅನಂತರ ಬರೇ ಹಿಟ್ಟಿನ ಮುದ್ದೆಗಳನ್ನು ಅಥವಾ ಬೇಯಿಸಿದ ಅನ್ನವನ್ನು ಅರ್ಪಿಸುವ ಸಂಪ್ರದಾಯ ರೂಢಿಗೆ ಬಂತು.

ಕ್ರಿ.ಶ. 11ನೇ ಶತಮಾನದ ವರೆಗೆ ಬ್ರಾಹ್ಮಣರು ಯಜ್ಞಗಳಲ್ಲಿ ಆಡುಗಳನ್ನು ಬಲಿಕೊಟ್ಟು, ಅದರ ಮಾಂಸ ತಿನ್ನುತ್ತಿದ್ದುದು ಬಸವಣ್ಣನವರ ವಚನಗಳಿಂದ ತಿಳಿದು ಬರುತ್ತದೆ. ಒಂದು ವಚನ ಹೀಗಿದೆ;

"ಹೋಮದ ನೇಮದಲ್ಲಿ ಹೋತವ ಕೊಂದು ತಿಂಬ ಅನಾಮಿಕರೊಡನಾಡಿ ಗೆಲ್ಲುವುದೇನು ಕೂಡಲ ಸಂಗಮ ದೇವಾ"

ಹುಟ್ಟಿನಿಂದ ಬ್ರಾಹ್ಮಣರಾದ ಬಸವಣ್ಣನವರ ಇನ್ನೊಂದು ವಚನ ಹೀಗಿದೆ;

ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೇ,

ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ ಎಲೆ ಹೋತೇ.

ಗೋಮಾಂಸ ನಿಷಿದ್ಧ ಹಾಗೂ ಪ್ರಾಣಿಬಲಿ ತ್ಯಾಜವೆಂಬ ಆದೇಶಗಳನ್ನು ನಂತರ ಪುರಾಣಗಳಲ್ಲಿ ಸೇರಿಸಲಾಯಿತೆಂದು ಎಸ್.ಆರ್.ಭಟ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಮ್, ಕ್ರೈಸ್ತ, ಯಹೂದಿ ಮತ್ತು ಸಿಖ್ ಧರ್ಮದ ಬೋಧನೆಗಳು ಮಾಂಸಾಹಾರ ಪರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ನಮ್ಮ ನಾಡಿನಲ್ಲಿ, ನಮ್ಮ ಸಾಹಿತ್ಯದಲ್ಲಿ ಸರ್ವಜ್ಞನ ವಚನಗಳಿಗೆ ಬಹಳ ಮಹತ್ವದ ಸ್ಥಾನ ನೀಡಲಾಗಿದೆ. ಬರಹ, ಭಾಷಣಗಳಲ್ಲಿ ತನ್ನ ನಿಲುವಿನ ಸಮರ್ಥನೆಗಾಗಿ ಸಾಹಿತಿಗಳು ಮತ್ತು ಭಾಷಣಕಾರರು ಸರ್ವಜ್ಞನ ವಚನಗಳನ್ನು ಧಾರಾಳವಾಗಿ ಬಳಸುತ್ತಾರೆ. ಆಹಾರದ ವಿಷಯದಲ್ಲಿ ಸರ್ವಜ್ಞನು ತನ್ನ ಒಂದು ವಚನದಲ್ಲಿ ತನ್ನ ನಿಲುವನ್ನು ಈ ರೀತಿ ಸ್ಪಷ್ಟಪಡಿಸಿರುವನು;

ಜೀವಿ-ಜೀವಿಯ ತಿಂದು ಜೀವಿಪುದು ಜಗವೆಲ್ಲ |

ನಿರ್ಜೀವಿಯ ಜೀವಿ ತಿಂದು ಜೀವಿಪುದು ನಾಕಾಣೆ ಸರ್ವಜ್ಞ ||

ಇಸ್ಲಾಮ್ ಧರ್ಮದ ದೃಷ್ಟಿಕೋನ

ಇಸ್ಲಾಮ್ ಶಬ್ದದ ಅರ್ಥ ಶಾಂತಿ ಎಂದಾಗಿದೆ. ಸೃಷ್ಟಿಕರ್ತನ ಮಾರ್ಗದರ್ಶನಕ್ಕೆ ಸಂಪೂರ್ಣ ವಿಧೇಯರಾಗಿ ನಡೆಯುವುದಕ್ಕೆ ಇಸ್ಲಾಮ್ ಎನ್ನುವರು. ಈ ರೀತಿ ವಿಧೇಯ ಜೀವನ ಸಾಗಿಸುವವರಿಗೆ ಮುಸ್ಲಿಮ್ ಎನ್ನಲಾಗುತ್ತದೆ. ಸೃಷ್ಟಿಕರ್ತನ ಮಾರ್ಗದರ್ಶನ ಇಂದು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ನಡೆ-ನುಡಿಯ ರೂಪದಲ್ಲಿ ಸುರಕ್ಷಿತವಾಗಿದೆ. ಕುರ್‌ಆನ್ ತನ್ನನ್ನು "ಹುದಲ್ಲಿನ್ನಾಸ್" ಅಂದರೆ ಮಾನವ ಕೋಟಿಗೆ

ಮಾರ್ಗದರ್ಶನ ಎಂದು ಪರಿಚಯಿಸುತ್ತದೆ. ಅದೇ ರೀತಿ ಕುರ್‌ಆನ್, ಮುಹಮ್ಮದ್‌ರನ್ನು(ಸ) "ರಹ್ಮತುಲ್ಲಿಲ್ ಆಲಮೀನ್" ಅಂದರೆ ಮಾನವ ಕೋಟಿಗೆ ದಯೆ ಹಾಗೂ ಕರುಣೆಯಾಗಿ ಕಳುಹಿಸಲಾದ ಪ್ರವಾದಿ ಎಂದು ಪರಿಚಯಿಸುತ್ತದೆ. ಕುರ್‌ಆನ್ ಮತ್ತು ಪ್ರವಾದಿವರ್ಯರ ಜೀವನ ಯಾವುದೇ ನಿರ್ದಿಷ್ಟ ವರ್ಗದ ಜನರಿಗೆ, ಕಾಲಕ್ಕೆ, ಪರಿಸರ ಮತ್ತು ಭೂಭಾಗಕ್ಕೆ ಸೀಮಿತವಾಗಿಲ್ಲ. ಕುರ್‌ಆನ್ ಮತ್ತು ಸುನ್ನತ್(ಪ್ರವಾದಿ ಮುಹಮ್ಮದ್‌ರ(ಸ) ಜೀವನ ಚರ್ಯೆ) ಇವೆರಡೂ ಇಸ್ಲಾಮ್ ಧರ್ಮದ ಬುನಾದಿ. ಸೃಷ್ಟಿಕರ್ತನು ಸೃಷ್ಟಿಯಲ್ಲಿಯೇ ಶ್ರೇಷ್ಠ ಜೀವಿಯಾದ ಮಾನವರಿಗೆ ಕುರ್‌ಆನ್ ಮತ್ತು ಸುನ್ನತ್‌ನ ಮೂಲಕ ಪರಿಪೂರ್ಣ ಹಾಗೂ ಸುರಕ್ಷಿತ ಮಾರ್ಗದರ್ಶನ ನೀಡಿದ್ದಾನೆ. ತನ್ನ ಸೃಷ್ಟಿಗೆ ಮಾರ್ಗದರ್ಶನ ನೀಡುವುದು ಸೃಷ್ಟಿಕರ್ತನ ದಯೆ ಮತ್ತು ಕರುಣೆಯ ಬೇಡಿಕೆಯಾಗಿದ್ದು, ಸೃಷ್ಟಿಯ ಆವಶ್ಯಕತೆಯೂ ಆಗಿದೆ. ಈ ಮಾರ್ಗದರ್ಶನವನ್ನು ಜೀವನದ ಎಲ್ಲ ರಂಗಗಳಲ್ಲಿ ನೀಡಲಾಗಿದ್ದು, ಆಹಾರದ ವಿಷಯ ಇದರಿಂದ ಹೊರತಾಗಿಲ್ಲ. ಕುರ್‌ಆನ್ ಮತ್ತು ಸುನ್ನತ್‌ನ ಶಿಕ್ಷಣದಲ್ಲಿ ನಮಗೆ ಆಹಾರದ ಬಗ್ಗೆ ಸ್ಪಷ್ಟವಾದ ಬೋಧನೆಗಳು ಸಿಗುತ್ತವೆ.

ನಾವು ನಮ್ಮ ದಿನನಿತ್ಯದ ಜೀವನದಲ್ಲಿ ಒಂದು ತತ್ವವನ್ನು ಪಾಲಿಸುತ್ತೇವೆ. ಅದೇನೆಂದರೆ ಯಾರಾದರೂ ಒಂದು ಹೊಸ ಯಂತ್ರ ಅಥವಾ ಉಪಕರಣವನ್ನು ತಯಾರಿಸಿದರೆ ಆ ಯಂತ್ರ ಹಾಗೂ ಅದರ ಸದ್ಬಳಕೆಯ ಬಗ್ಗೆ ಒಂದು ಮಾರ್ಗದರ್ಶಕ ಕೈಪಿಡಿ(Mannual) ನೀಡುವುದು ವಾಡಿಕೆ. ಯಂತ್ರದ ಬಳಕೆದಾರರು ಕೈಪಿಡಿಯ ಮಾರ್ಗದರ್ಶನದಂತೆ ನಡೆಯುವುದು ಕೂಡಾ ಒಂದು ನಿಯಮ. ಬಳಕೆದಾರರ ಮತ್ತು ಯಂತ್ರದ ಒಳಿತು ಈ ನಿಯಮವನ್ನು ಪಾಲಿಸುವುದರಲ್ಲೇ ಅಡಕವಾಗಿದೆಯೆಂಬುದನ್ನು ಎಲ್ಲರೂ ಸಮ್ಮತಿಸುವರು. ಮನುಷ್ಯ ಅತ್ಯಂತ ಜಟಿಲ ಹಾಗೂ ಸೂಕ್ಷ್ಮ ಯಂತ್ರ(ಜೀವಕೋಶ)ಗಳ ಸಮೂಹವಾಗಿದ್ದಾನೆ. ಮನುಷ್ಯನಿಗೆ ಅವನ ಮಾರ್ಗದರ್ಶಕ ಕೈಪಿಡಿ ದೈವಿಕ ಗ್ರಂಥ ಮತ್ತು ಅದರ ಮಾದರಿ ಎಂಬಂತೆ ಪ್ರವಾದಿಯ ಜೀವನದ ರೂಪವನ್ನೂ ಕೊಡಲಾಗಿದೆ. ಮನುಷ್ಯನಿಗೆ ಈ ಮಾರ್ಗದರ್ಶನ ಸ್ವೀಕರಿಸುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಮನುಷ್ಯರ ಒಳಿತು ಈ ಮಾರ್ಗದರ್ಶನವನ್ನು ಸ್ವ ಇಚ್ಛೆಯಿಂದ ಸ್ವೀಕರಿಸಿ ನಡೆಯುವುದರಲ್ಲಿಯೇ ಇದೆ ಎನ್ನುವುದು ಸ್ಪಷ್ಟ. (ಹಾಗೆ ಮಾಡದಿರುವುದು ಮನುಷ್ಯರಿಗೆ ನೀಡಲಾದ ವಿವೇಕ ಮತ್ತು ಸ್ವಾತಂತ್ರ್ಯಕ್ಕೆ ಕಳಂಕವಾಗಿದೆ.)

ಮನುಷ್ಯರಿಗೆ ಕಾನೂನು ಮತ್ತು ಮಾರ್ಗದರ್ಶನ ಯಾರು ಕೊಡಬೇಕೆನ್ನುವುದರ ಬಗ್ಗೆ ನಮ್ಮ ಕಾನೂನು ಪುಸ್ತಕಗಳಲ್ಲಿ ಸಾಕಷ್ಟು ಬರೆಯಲಾಗಿದೆ. ಕಾನೂನಿನ ಸ್ಪಷ್ಟವಾದ ವ್ಯಾಖ್ಯಾನವಿಲ್ಲದಿದ್ದರೂ ಅನೇಕ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸಲಾಗಿದೆ. ಅದರಲ್ಲಿ ಆಸ್ಟಿನ್(Austin's theory of Law)ರ ದೃಷ್ಟಿಕೋನ "ಸಾರ್ವಭೌಮನ (Sovereign) ಆದೇಶವೇ ಕಾನೂನು" ಎನ್ನುವುದಾಗಿದೆ. ಸಾರ್ವಭೌಮನ ಗುಣವಿಶೇಷತೆಗಳನ್ನು ಕೂಡಾ ಕಾನೂನು ಪುಸ್ತಕಗಳಲ್ಲಿ ವಿವರಿಸಲಾಗಿದೆ. ಸಾರ್ವಭೌಮನ ಜ್ಞಾನ ವ್ಯಕ್ತಿಗತವಾಗಿದ್ದು,

ವರ್ಗಾವಣೆಗೊಳಪಡಬಾರದು. ಆ ಜ್ಞಾನವು ಪರಿಪೂರ್ಣವೂ, ತಪ್ಪಿಲ್ಲದ್ದೂ ಆಗಿರಬೇಕು. ಯಾರೊಂದಿಗೂ ಸಾರ್ವಭೌಮನ ಸಂಬಂಧ ವಿಶೇಷವಾಗಿರದೆ ಅವನು ಯಾರ ಮುಂದೆಯೂ ಉತ್ತರದಾಯಿತ್ವದ ಹೊಣೆ ಹೊಂದಿರಬಾರದು. ಸಾರ್ವಭೌಮ, ಯಾರಿಗಾಗಿ ಕಾನೂನು ನೀಡುತ್ತಿರುವನೋ ಅವರ ಬಗ್ಗೆ ಎಲ್ಲವನ್ನು ಅರಿತವನೂ, ಭೂತ, ವರ್ತಮಾನ ಹಾಗೂ ಭವಿಷ್ಯದ ಬಗ್ಗೆ ಎಲ್ಲವನ್ನೂ ತಿಳಿದವನಾಗಿರಬೇಕು. ಈ ಗುಣ ವಿಶೇಷತೆಗಳಿದ್ದಾಗ ಮಾತ್ರ ಕಾನೂನು ನೀಡಲು ಸಮರ್ಥನಾಗುವನು ಮತ್ತು ಆ ಕಾನೂನು ಮಾತ್ರ ನ್ಯೆಜವಾದ ಫಲಕಾರಿ ಕಾನೂನು ಆಗಲು ಸಾಧ್ಯ. ಈಗ ಜಗತ್ತಿನಲ್ಲಿ ನಾವು ಯಾರನ್ನೆಲ್ಲ ಸಾರ್ವಭೌಮ (ಪ್ರಜೆ, ಸಂಸತ್ತು, ರಾಜ, ರಾಷ್ಟ್ರಾಧ್ಯಕ್ಷ, ಏಕಾಧಿಪತಿ ಇತ್ಯಾದಿ)ರೆಂದು ಕರೆಯುತ್ತಿದ್ದೇವೆಯೋ ಅವರಾರ ಲ್ಲಿಯೂ ಈ ಗುಣ ವಿಶೇಷತೆಗಳಿಲ್ಲ. ಈ ಎಲ್ಲ ಗುಣವಿಶೇಷತೆಗಳು ಕೇವಲ ನಮ್ಮೆಲ್ಲರ ಹಾಗೂ ಜಗದ ಸೃಷ್ಟಿಕರ್ತನಲ್ಲಿ ಮಾತ್ರ ಇವೆ. ಆದ್ದರಿಂದ ಸೃಷ್ಟಿಕರ್ತ ನೀಡಿದ ಮಾರ್ಗದರ್ಶನವೇ ಕಾನೂನು ಎನಿಸಿಕೊಳ್ಳಲು ಯೋಗ್ಯ. ಮಾನವರ ಕಲ್ಯಾಣ ಈ ಮಾರ್ಗದರ್ಶನವನ್ನು ಚಾಚೂ ತಪ್ಪದೆ ಪಾಲಿಸುವುದರಲ್ಲಿಯೇ ಅಡಕವಾಗಿದೆಯೆಂಬುದೂ ಸ್ಪಷ್ಟ. ಈ ಮಾರ್ಗದರ್ಶನವಿಂದು ಮಾನವರೆಲ್ಲರಿಗೂ ದಿವ್ಯ ಕುರ್‌ಆನ್ ಮತ್ತು ಸುನ್ನತ್‌ನ ರೂಪದಲ್ಲಿ ಸುರಕ್ಷಿತ ಹಾಗೂ ಪರಿಪೂರ್ಣ ರೂಪದಲ್ಲಿ ಲಭ್ಯವಿದೆ. ಆಹಾರದ ವಿಷಯದಲ್ಲಿ ಅದರ ಮಾರ್ಗದರ್ಶನ ಈ ರೀತಿಯಾಗಿದೆ:

ಪವಿತ್ರ ಕುರ್‌ಆನಿನ ಕೆಲವು ಬೋಧನೆಗಳು

ಕುರ್‌ಆನ್ ಸೂಕ್ತಗಳ ಅನುವಾದವನ್ನೂ ಇಲ್ಲಿ ಪ್ರಸ್ತುತಪಡಿಸಲಾಗಿದೆ.

"ಸೃಷ್ಟಿಯೂ ಆಜ್ಞಾಧಿಕಾರವೂ ಅಲ್ಲಾಹನದೇ ಆಗಿದೆ." (7:54)

"ಆಜ್ಞಾಧಿಕಾರವು ಮಹೋನ್ನತನಾದ ಅಲ್ಲಾಹನಿಗೇ ಇದೆ." (40:12)

"ಸಕಲ ವಸ್ತುಗಳನ್ನು ಆತನೇ ಸೃಷ್ಟಿಸಿದ್ದಾನೆ, ವಸ್ತು ಜೀವಿಗಳ ಬಗ್ಗೆ ಅಗಾಧ ಜ್ಞಾನ ಉಳ್ಳವನು ಆತನೇ." (6:101)

"ಭೂಮಿಯಲ್ಲಿ ಬಾಳುವ ಪ್ರತಿಯೊಂದು ಜೀವಿಯ ಆಹಾರದ ಬಾಧ್ಯತೆ(ಹೊಣೆ) ಅಲ್ಲಾಹನ ಮೇಲೆಯೇ ಇದೆ." (11:6)

ಅಲ್ಲಾಹನು ಸೃಷ್ಟಿಕರ್ತನಾಗಿದ್ದು ಆಹಾರದ ಹೊಣೆಯೂ ಅವನದೇ ಆಗಿದೆ. ಶಾಖಾಹಾರ ಮತ್ತು ಮಾಂಸಾಹಾರಗಳೆರಡೂ ಅವನ ಕೊಡುಗೆಗಳು. ಮನುಷ್ಯರಿಗೆ ಯಾವ ಆಹಾರವನ್ನು ಅನುಮತಿಸಲಾಗಿದೆ, ಯಾವುದು ಶುದ್ಧ, ಯಾವುದು ಅಶುದ್ಧ ಮತ್ತು ಯಾವುದು ನಿಷಿದ್ಧವೆಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಲು, ಜೇನು, ಹಣ್ಣು - ತರಕಾರಿ ದವಸಧಾನ್ಯಗಳ ಬಗ್ಗೆ ಪವಿತ್ರ ಕುರ್‌ಆನಿನಲ್ಲಿ ವಿವರಿಸಲಾಗಿದೆ.

ಶಾಖಾಹಾರ:

"ತರತರದ ಉದ್ಯಾನಗಳನ್ನೂ ದ್ರಾಕ್ಷಾ ತೋಟಗಳನ್ನೂ ಖರ್ಜೂರದ ತೋಟಗಳನ್ನೂ ಬೆಳೆಗಳನ್ನೂ ಬೆಳೆಸಿದವನು ಅಲ್ಲಾಹನೇ. ಅವುಗಳಿಂದ ತರತರದ ಆಹಾರ ಪದಾರ್ಥಗಳು

ಸಿಗುತ್ತವೆ. ಅವುಗಳ ಫಲಗಳು ಆಕಾರದಲ್ಲಿ ಏಕ ಪ್ರಕಾರವಾಗಿದ್ದು ರುಚಿಯಲ್ಲಿ ಭಿನ್ನವಾಗಿರುತ್ತವೆ. ಅವುಗಳು ಫಲಿಸಿದಾಗ ಫಲಗಳನ್ನು ತಿನ್ನಿರಿ. ಬೆಳೆಗಳನ್ನು ಕೊಯ್ಯುವಾಗ ಕೊಯ್ಲಿನ ಒಂದು ಪಾಲನ್ನು ದಾನ ಮಾಡಿರಿ. ದುರ್ವ್ಯಯ ಮಾಡದಿರಿ, ದುರ್ವ್ಯಯ ಮಾಡುವವರನ್ನು ಅಲ್ಲಾಹ್ ಮೆಚ್ಚುವುದಿಲ್ಲ." (6:141)

"ಖರ್ಜೂರದ ಮರದಿಂದ, ದ್ರಾಕ್ಷಿಯ ಬಳ್ಳಿಯಿಂದ ನಾವು ನಿಮಗೊಂದು ವಸ್ತುವನ್ನು(ಪಾನೀಯವನ್ನು) ಕುಡಿಸುತ್ತೇವೆ. ಅದನ್ನು ನೀವು ಮಾದಕ ಪೇಯವನ್ನಾಗಿಯೂ ಶುದ್ಧ ಆಹಾರವನ್ನಾಗಿಯೂ ಮಾಡಿಕೊಳ್ಳುತ್ತೀರಿ. ನಿಜವಾಗಿ ವಿವೇಕಮತಿ ಜನರಿಗೆ ಇದರಲ್ಲಿ ನಿದರ್ಶನವಿದೆ." (16:67)

ಜೇನು:

"ಇನ್ನು ನೋಡಿ. ನಿಮ್ಮ ಪ್ರಭು ಜೇನುನೊಣಕ್ಕೆ ಗುಡ್ಡ-ಬೆಟ್ಟಗಳಲ್ಲೂ ಮರಗಳಲ್ಲೂ ತಟ್ಟಿಗಳ ಮೇಲಿರಿಸಿದ ಬಳ್ಳಿಗಳಲ್ಲೂ ತನ್ನ ತೊಟ್ಟಿಗಳನ್ನು ಕಟ್ಟಿ ಎಲ್ಲಾ ವಿಧದ ಫಲಗಳ ರಸಹೀರಿ ನಿಮ್ಮ ಪ್ರಭು ಸುಗಮಗೊಳಿಸಿದ ಮಾರ್ಗಗಳಲ್ಲಿ ಚಲಿಸುತ್ತಿರು ಎಂದು ವಹ್ಯ್ ಮಾಡಿದನು(ಆದೇಶವಿತ್ತನು). ಆ ನೊಣದ ಹೊಟ್ಟೆಯಿಂದ ವಿವಿಧ ಬಣ್ಣಗಳ ಪಾನಕ ಹೊರಡುತ್ತದೆ. ಅದರಲ್ಲಿ ಜನರಿಗೆ (ರೋಗ-ರುಜಿನಗಳಿಗೆ) ಗುಣಾಂಶವಿದೆ- ನಿಶ್ಚಯವಾಗಿಯೂ ಚಿಂತನಾ ಶೀಲರಿಗೆ ಇದರಲ್ಲಿ ಅತ್ಯುನ್ನತ ದೃಷ್ಟಾಂತವಿದೆ." (16:68-69)

ಹಾಲು:

"ನಿಶ್ಚಯವಾಗಿಯೂ ಜಾನುವಾರುಗಳಲ್ಲಿ ನಿಮಗೊಂದು ಪಾಠವಿದ್ದೇ ಇದೆ. ಅವುಗಳ ಹೊಟ್ಟೆಯೊಳಗಿರುವ ಸೆಗಣಿ ಮತ್ತು ರಕ್ತದ ಮಧ್ಯದಿಂದ ಕುಡಿಯುವವರಿಗೆ ಆಹ್ಲಾದಕರವಾದ ಶುದ್ಧ ಹಾಲನ್ನು ನಾವು ಕುಡಿಸುತ್ತೇವೆ." (16:66)

ಪ್ರಾಣಿಗಳು:

"ಅಲ್ಲಾಹನು ಪ್ರಾಣಿಗಳನ್ನು ಸೃಷ್ಟಿಸಿದನು. ಅವುಗಳಲ್ಲಿ ನಿಮಗೆ ಉಡುಪೂ ಆಹಾರವೂ ಇನ್ನೂ ನಾನಾ ತರದ ಪ್ರಯೋಜನಗಳಿವೆ." (16:5)

ಮೀನು ಹಾಗೂ ಅಲಂಕಾರ ವಸ್ತುಗಳು:

"ನಿಮಗಾಗಿ ಸಮುದ್ರಗಳನ್ನು ನಿಯಂತ್ರಿಸಿ, ಅದರಿಂದ ತಾಜಾ ಮಾಂಸ(ಮೀನು ಇತ್ಯಾದಿ) ಪಡೆದು ತಿನ್ನುವಂತೆಯೂ ಅದರಿಂದ ನೀವು ಧರಿಸುವ ಅಲಂಕಾರದ (ಮುತ್ತು, ಹವಳ, ಚಿಪ್ಪಿ ಇತ್ಯಾದಿ) ಸಾಧನಗಳನ್ನು ಹೊರತೆಗೆಯುವಂತೆಯೂ ಮಾಡಿದವನು ಅಲ್ಲಾಹನೇ." (16:14)

ಶುದ್ಧ ಹಾಗೂ ನಿಷಿದ್ಧ ಆಹಾರ:

"ಓ ಸತ್ಯವಿಶ್ವಾಸಿಗಳೇ, ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಿ. ನಿಮಗೆ 'ಅನ್‌ಆಮ್' ವರ್ಗದ ಎಲ್ಲ ಪ್ರಾಣಿಗಳನ್ನು ಹಲಾಲ್(ಧರ್ಮಸಮ್ಮತ)ಗೊಳಿಸಲಾಗಿದೆ." (5:1)

"ಅನ್‌ಆಮ್ ಅರಬೀ ಭಾಷೆಯ ಪದವು ಒಂಟೆ, ದನ, ಕುರಿ ಮತ್ತು ಆಡುಗಳಿಗೆ ಅನ್ವಯವಾಗುತ್ತದೆ. ಕೋರೆ ಹಲ್ಲುಗಳಿಲ್ಲದ, ಸಸ್ಯವನ್ನು ತಿನ್ನುವ ಭೂಚರ ಚತುಷ್ಪಾದಿಗಳನ್ನು ಧರ್ಮಸಮ್ಮತಗೊಳಿಸಲಾಗಿದೆ. ಈ ಪ್ರಾಣಿಗಳನ್ನು ವ್ಯವಸಾಯಕ್ಕಾಗಿ, ಭಾರ ಹೊರಲು, ಸವಾರಿಗಾಗಿ ಮತ್ತು ಆಹಾರಕ್ಕಾಗಿ ಉಪಯೋಗಿಸಲು ಅನುಮತಿಸಲಾಗಿದೆ."

"ನಿಮಗೆ ಇವು ನಿಷಿದ್ಧಗೊಳಿಸಲ್ಪಟ್ಟಿವೆ- ಶವ, ರಕ್ತ, ಹಂದಿ ಮಾಂಸ, ಅಲ್ಲಾಹನ ಹೊರತು ಇತರರ ಹೆಸರಲ್ಲಿ ದಿಬ್ಹ್(ಚೂರಿ ಹಾಕಲ್ಪಟ್ಟ) ಮಾಡಿದ ಪ್ರಾಣಿ, ಉಸಿರುಕಟ್ಟಿ ಅಥವಾ ಪೆಟ್ಟು ತಾಗಿ, ಎತ್ತರದಿಂದ ಬಿದ್ದು ಅಥವಾ ಘರ್ಷಿಸಲ್ಪಟ್ಟು ಅಥವಾ ಕ್ರೂರಮೃಗದಿಂದ ಹರಿದು ಹಾಕಲ್ಪಟ್ಟು ಸತ್ತ ಪ್ರಾಣಿ - ಆದರೆ ನೀವು ಜೀವಂತ ಪಡೆದು 'ದಿಬ್ಹ್' ಮಾಡಿದ ಪ್ರಾಣಿ ಇದಕ್ಕೆ ಹೊರತಾಗಿದೆ." (5:3)

ಈ ತರದ ಶುದ್ಧ ಹಾಗೂ ನಿಷಿದ್ಧ ಮಾಂಸಾಹಾರದ ಬಗ್ಗೆ ಮನುಸ್ಮೃತಿಯ ಅಧ್ಯಾಯ 5, ಶ್ಲೋಕ 11-17ರಲ್ಲಿಯೂ ವಿವರಗಳಿವೆ.

ಅಲ್ಲಾಹನು ನಿರಪೇಕ್ಷನು, ನಾವು ಕೊಡುವ ಬಲಿಯ(ಪ್ರಾಣಿ) ಮಾಂಸ ಅಥವಾ ರಕ್ತ ಅವನಿಗೆ ತಲುಪದು. ಅವನಿಗೆ ನಮ್ಮ ತಕ್ವಾ(ಧರ್ಮನಿಷ್ಠೆ, ಕೃತಜ್ಞತೆ) ಮಾತ್ರ ತಲುಪುತ್ತದೆ. ಬಲಿದಾನದಿಂದ ಮನುಷ್ಯರ ಆವಶ್ಯಕತೆ ಈಡೇರುತ್ತದೆ, ಅಲ್ಲಾಹನಿಗೆ ಹೂವು, ಹಣ್ಣು, ಕಾಯಿ, ಕರ್ಪೂರ, ಸುಗಂಧ, ಕಾಣಿಕೆ, ಮಾಂಸ- ರಕ್ತಗಳಾವುವೂ ತಲುಪುವುದಿಲ್ಲ. ಇವೆಲ್ಲವುಗಳನ್ನು ಅಲ್ಲಾಹನೇ ಮನುಷ್ಯರಿಗಾಗಿ ಸೃಷ್ಟಿಸಿ ಕೊಟ್ಟಿದ್ದಾನೆ. ಇದನ್ನೇ ಕುರ್‌ಆನ್ ಈ ರೀತಿಯಾಗಿ ತಿಳಿಸಿದೆ;

"ನಾವು ಪ್ರತಿಯೊಂದು ಸಮುದಾಯಕ್ಕೆ ಬಲಿದಾನದ ಒಂದು ಕಾಯಿದೆಯನ್ನು ನಿಶ್ಚಯಿಸಿ ಕೊಟ್ಟಿದ್ದೇವೆ. ಇದು ಆ ಸಮುದಾಯದ ಜನರು ತಮಗೆ ಅಲ್ಲಾಹನು ದಯಪಾಲಿಸಿರುವ ಪ್ರಾಣಿಗಳ ಮೇಲೆ ಅಲ್ಲಾಹನ ನಾಮ ಉಚ್ಚರಿಸಲೆಂದು." **(ಹಜ್ಜ್: 34)**

ನೀವು ಕೃತಜ್ಞರಾಗಲಿಕ್ಕಾಗಿ ನಾವು ಈ ರೀತಿಯಾಗಿ ನಿಮಗಾಗಿ ಪ್ರಾಣಿಗಳನ್ನು ನಿಯಂತ್ರಿಸಿ ಕೊಟ್ಟಿದ್ದೇವೆ. ಅವುಗಳ ಮಾಂಸವಾಗಲಿ, ರಕ್ತವಾಗಲಿ ಅಲ್ಲಾಹನಿಗೆ ತಲಪುವುದಿಲ್ಲ ಆದರೆ ಅವನಿಗೆ ನಿಮ್ಮ ತಕ್ವಾ(ಧರ್ಮನಿಷ್ಠೆ) ಮಾತ್ರ ತಲಪುತ್ತದೆ.

ಭೂಮಿ-ಆಕಾಶದಲ್ಲಿರುವುದೆಲ್ಲ ಅಲ್ಲಾಹನ ಸೃಷ್ಟಿ. ಮನುಷ್ಯ ಈ ಸೃಷ್ಟಿಯಲ್ಲೇ ಶ್ರೇಷ್ಠ ಜೀವಿಯಾಗಿದ್ದು ಉಳಿದ ಸೃಷ್ಟಿಗಳೆಲ್ಲವನ್ನು ಅವನಿಗಾಗಿ, ಅವನ ಉಪಯೋಗಕ್ಕಾಗಿ ಸೃಷ್ಟಿಸಿ ನಿಯಂತ್ರಿಸಿ ಕೊಡಲಾಗಿದೆ. ಯಾವುದು ಅವನ ಸೇವೆಗಾಗಿ ಸೃಷ್ಟಿಸಲಾಗಿದೆಯೋ ಅದು ಅವನಿಗೆ ಪವಿತ್ರ ಅಥವಾ ಆರಾಧ್ಯವಾಗುವುದಾದರೂ ಹೇಗೆ? ಬೇಡದೆಯೇ ಅನಂತ ಅನುಗ್ರಹಗಳನ್ನು ನೀಡಿದ ಸೃಷ್ಟಿಕರ್ತನು ಮಾತ್ರ ಮನುಷ್ಯರಿಗೆ ಆರಾಧ್ಯನಾಗಲು ಸಾಧ್ಯ. ಇದುವೇ ಎಲ್ಲ ನೈಜ ಧರ್ಮಗ್ರಂಥಗಳ ತಿರುಳು, ವಿವೇಕದ ತೀರ್ಪು.

ಅಲ್ಲಾಹನು ಕರುಣಿಸಿದ ಸಸ್ಯಜನ್ಯ ಹಾಗೂ ಪ್ರಾಣಿಜನ್ಯ ಆಹಾರಗಳೆರಡೂ ಅವನ ಕೊಡುಗೆಗಳಾಗಿದ್ದು, ಎರಡರಲ್ಲಿಯೂ ಜೀವವಿರುವುದು ನಿರ್ವಿವಾದ. ಜೀವ ಕೊಡುವವನಿಗೆ

ಮಾತ್ರ ಜೀವ ಕಸಿದುಕೊಳ್ಳುವ ಅಧಿಕಾರವಿರಬೇಕಾದದ್ದು ಸೂಕ್ತ ಹಾಗೂ ನ್ಯಾಯಸಮ್ಮತ. ಈ ಅಧಿಕಾರ ಅಲ್ಲಾಹನಿಗೆ ಮಾತ್ರ ಸೀಮಿತ. ಅವನ ಆಜ್ಞೆ ಹಾಗೂ ಆದೇಶದ ಹೊರತು ಅವನು ಸೃಷ್ಟಿಸಿದ ಯಾವುದೇ ಸಸ್ಯ ಅಥವಾ ಪ್ರಾಣಿಯ ಪ್ರಾಣಹರಣದ ಅಧಿಕಾರ ಯಾರಿಗೂ ಇಲ್ಲ. ಸಸ್ಯ ಹಾಗೂ ಪ್ರಾಣಿಗಳೆರಡೂ ಸಜೀವಿಯಾಗಿದ್ದು ಅಲ್ಲಾಹನು ಯಾವುದನ್ನೆಲ್ಲ ಆಹಾರವೆಂದು ಉಪಯೋಗಿಸಲು ಅನುಮತಿಸಿದ್ದಾನೋ ಅವುಗಳನ್ನು ಅವನ ನಾಮ ಉಚ್ಚರಿಸಿ ಕೃತಜ್ಞತಾಭಾವದಿಂದ ಅವನು ತಿಳಿಸಿದ ವಿಧಾನದಿಂದ ಸ್ವೀಕರಿಸುವುದೇ ಸತ್ಯವಿಶ್ವಾಸಿಗಿರುವ ಏಕೈಕ ನೈಜ ಮಾರ್ಗ. ಮನುಷ್ಯ ತನಗಾಗಿ ಶುದ್ಧ, ನಿಷಿದ್ಧಗಳನ್ನು ನಿರ್ಧರಿಸಿ ನಿಸ್ಸೀಮ ಜ್ಞಾನ, ಯುಕ್ತಿ, ಶಕ್ತಿ ಹಾಗೂ ಕರುಣೆಯುಳ್ಳ ಅಲ್ಲಾಹನು ಕರುಣಿಸಿದ ಅನುಗ್ರಹಗಳಲ್ಲಿ ಯಾವುದೇ ಅನುಗ್ರಹವನ್ನು ತನ್ನ ಸೀಮಿತ ಬುದ್ಧಿಯಿಂದ ತಿರಸ್ಕರಿಸಿದರೆ ಅದು ಅವನ ಅವಿಶ್ವಾಸ ಹಾಗೂ ಕೃತಘ್ನತೆಯ ಪ್ರತೀಕವಾಗಿರುವುದು ಮತ್ತು ಯಾವ ಒಡೆಯನೂ ತನ್ನ ಕೊಡುಗೆಗಳಿಗೆ ದಾಸನಿಂದ ಧಿಕ್ಕಾರವನ್ನು ಮೆಚ್ಚಲಾರ.

ಪ್ರಾಣಿಜನ್ಯ ಆಹಾರದ ವಿಷಯದಲ್ಲಿ ವರ್ಗೀಯ, ಜನಾಂಗೀಯವಾಗಿ ನಾನಾ ಮಟ್ಟದ ಜಿಗುಪ್ಸೆ ಹಾಗೂ ಅಸಹ್ಯತೆಗಳಿರುವುದು ವಾಸ್ತವಿಕತೆ. ಕೆಲವರಿಗೆ ಕೆಲವು ವಸ್ತುಗಳನ್ನು ತಿನ್ನಲು ಇಷ್ಟವಿರುವುದಿಲ್ಲ. ನಿಷಿದ್ಧವಲ್ಲದ ಎಲ್ಲ ವಸ್ತುಗಳನ್ನು ತಿಂದೇ ತೀರಬೇಕೆಂದು ದೇವ ಧರ್ಮಶಾಸ್ತ್ರವು ಯಾರನ್ನೂ ಒತ್ತಾಯಪಡಿಸುವುದಿಲ್ಲ ಹಾಗೂ ಅದು ಕೆಲವರಿಗೆ ಅಸಹ್ಯವಾದುದನ್ನು ಒಂದು ಕಾನೂನನ್ನಾಗಿಸಿ ಒತ್ತಾಯ ಪೂರ್ವಕ ಇತರರ ಮೇಲೆ ಹೇರುವುದನ್ನೂ ಅನುಮತಿಸುವುದಿಲ್ಲ. ತಿನ್ನುವ-ತಿನ್ನದಿರುವ ಸ್ವಾತಂತ್ರ್ಯವನ್ನು ಅದು ಪ್ರತಿಯೊಬ್ಬರಿಗೂ ನೀಡಿದೆ. ಆದರೆ ಅದು ಶುದ್ಧ-ಅಶುದ್ಧ ಮತ್ತು ನಿಷಿದ್ಧಗಳನ್ನು ನಿರ್ಣಯ ಮಾಡುವ ಹಕ್ಕನ್ನು ನೀಡಿಲ್ಲ. ಮನುಸ್ಮೃತಿಯಲ್ಲಿರುವಂತೆ (5: 35) ದೇವ ಪಿತೃಕಾರ್ಯ ಗಳಲ್ಲಿ ಶಾಸ್ತ್ರವಿಧಿಯಂತೆ ಮಾಂಸ ತಿನ್ನದಿದ್ದರೆ ಇಪ್ಪತ್ತೊಂದು ಜನ್ಮ ಪಶುವಾಗಿ ಹುಟ್ಟುತ್ತಾನೆಂಬ ಕಠೋರ ಎಚ್ಚರಿಕೆಯನ್ನೂ ನೀಡಿಲ್ಲ. ಮನುಷ್ಯ ಸಹಜ ಪ್ರಕೃತಿಗೆ ಅನುಗುಣವಾಗಿಯೇ ಆದೇಶ ನೀಡಲಾಗಿದೆ.

ಒಬ್ಬ ಸತ್ಯವಿಶ್ವಾಸಿ ಸೇವಿಸುವ ಸಸ್ಯಾಹಾರ ಅಥವಾ ಮಾಂಸಾಹಾರ ನಾಲಗೆಯ ರುಚಿಗೆ ಮಾತ್ರವಾಗಿರದೆ ಕೃತಜ್ಞತಾಭಾವದಿಂದ ದೇವಾದೇಶ ಪಾಲಿಸುವುದಾಗಿದೆ. ಒಬ್ಬ ಸತ್ಯವಿಶ್ವಾಸಿ ದೇವಾದೇಶಕ್ಕೆ ವಿರುದ್ಧವಾದ ಯಾವುದೇ ಆಹಾರ ಅದೆಷ್ಟೇ ರುಚಿಕರವಾಗಿದ್ದರೂ ಅದನ್ನೆಂದೂ ಸೇವಿಸಲಾರ. ಸತ್ಯವಿಶ್ವಾಸಿಯ ವಿಶ್ವಾಸದ ಪ್ರಕಾರ ಅಲ್ಲಾಹನ ಆದೇಶಗಳು ಕಳಂಕರಹಿತ, ಯುಕ್ತಿಪೂರ್ಣ ಹಾಗೂ ದಯಾಭರಿತವಾಗಿವೆ. ಅವನ ಆಜ್ಞೆ - ಆದೇಶಗಳು ಸಕಲ ವಿಶ್ವದ ಸಕಲ ಜೀವಿಗಳ ಉಳಿವು ಮತ್ತು ಒಳಿತಿಗಾಗಿವೆ.

ಮನುಷ್ಯನ ದೈಹಿಕ ಹಾಗೂ ನೈತಿಕ ಬೆಳವಣಿಗೆಗಾಗಿ ಅವಶ್ಯವಿರುವ ಯಾವುದೇ ಆಹಾರವನ್ನು ದೇವದತ್ತ ಕಾನೂನಿನಲ್ಲಿ ನಿಷೇಧಿಸಲಾಗಿಲ್ಲ ಹಾಗೂ ಮನುಷ್ಯರ ನೈತಿಕ ಹಾಗೂ ದೈಹಿಕ ಬೆಳವಣಿಗೆಗಾಗಿ ಅಹಿತಕರವಾದ ಯಾವುದೇ ಆಹಾರವನ್ನೂ ಸೇವಿಸುವಂತೆ ನಿರ್ಬಂಧಿಸಲಾಗಿಲ್ಲ. ಅನುಭವ ಹಾಗೂ ಆಧುನಿಕ ವಿಜ್ಞಾನ ಕೂಡ ಇದನ್ನು ಸಮರ್ಥಿಸುತ್ತದೆ.

ಮದ್ಯವನ್ನು ದೈವಿಕ ಮಾರ್ಗದರ್ಶನದಲ್ಲಿ ನಿಷಿದ್ಧ ಗೊಳಿಸಲಾಗಿದೆ. ಮದ್ಯ ಸೇವನೆಯಿಂದಾಗುವ ದೈಹಿಕ, ನೈತಿಕ, ಸಾಮಾಜಿಕ ಹಾಗೂ ಆರ್ಥಿಕ ಹಾನಿಗೆ, ಇದು ಎಲ್ಲ ಕಾಲದಲ್ಲಿಯೂ ಹಾನಿಕಾರಕವೆನ್ನುವುದರ ಬಗ್ಗೆ ಅನುಭವ ಹಾಗೂ ವಿಜ್ಞಾನದ ಸಮರ್ಥನೆ ಇದೆ. ಅದೇ ರೀತಿ ಅನೇಕ ಭಯಂಕರ ರೋಗಗಳಿಗೆ ಕಾರಣವಾಗಿರುವ ತಂಬಾಕನ್ನು ದೈವಿಕ ಕಾನೂನಿನಲ್ಲಿ ಅಪ್ರಿಯವೆಂದು(ಮಕ್ರೂಹ್) ಸಾರಿ ಅದರ ಬಳಕೆಯನ್ನು ನಿರುತ್ತೇಜಿಸಿದೆ. ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ಮಾದಕವಾಗುವಂತಹ ಪದಾರ್ಥವನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸುವುದನ್ನೂ ನಿಷೇಧಿಸಲಾಗಿದೆ.

ಪ್ರಾಣಿದಯೆ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಶಿಕ್ಷಣ

ಇಸ್ಲಾಮ್ ಧರ್ಮದ ಬುನಾದಿ, ಪವಿತ್ರ ಕುರ್‌ಆನಿನ ನಂತರ ಪ್ರವಾದಿ ಮುಹಮ್ಮದ್‌ರ(ಸ) ಶಿಕ್ಷಣವಾಗಿದೆ. ಪ್ರಾಣಿದಯೆಯ ವಿಷಯದಲ್ಲಿ ಪ್ರವಾದಿಯವರು ನೀಡಿರುವ ಬೋಧನೆಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸೃಷ್ಟಿಕರ್ತನಿಗೆ ತನ್ನ ಸೃಷ್ಟಿಯ ಬಗ್ಗೆ ಇರುವ ಕರುಣೆಯ ಬಗ್ಗೆ ಪ್ರವಾದಿಯವರು(ಸ) ಹೀಗೆ ಹೇಳಿದ್ದಾರೆ: "ಅಲ್ಲಾಹನು ತನ್ನ ಕರುಣೆಯ ನೂರು ಭಾಗಗಳಲ್ಲಿ, 99 ಭಾಗ ಕರುಣೆಯನ್ನು ತನ್ನ ಹತ್ತಿರವಿಟ್ಟು ಒಂದು ಭಾಗ ಮಾತ್ರ ಭೂಮಿಯ ಸಕಲ ಜೀವಿಗಳಿಗೆ ನೀಡಿರುವನು. ಜೀವಿಗಳು ಪರಸ್ಪರ ಪ್ರೀತಿಸುವುದು ಈ ಒಂದು ಭಾಗದ ಪರಿಣಾಮವಾಗಿದೆ. ಒಂದು ಕುದುರೆ ತನ್ನ ಮರಿಗೆ ತೊಂದರೆಯಾಗಬಾರದೆಂದು ತನ್ನ ಕಾಲನ್ನು ಎತ್ತಿ ಹಿಡಿಯುವುದೂ ಇದೇ ಕಾರಣಕ್ಕಾಗಿ."

"ಒಂದು ಗುಬ್ಬಿಯನ್ನು ವಿನಾ ಕಾರಣ ಕೊಂದರೆ ಅದು ಅಲ್ಲಾಹನ ನ್ಯಾಯಾಲಯದಲ್ಲಿ ತನ್ನ ಅಳಲನ್ನು ತೋಡಿಕೊಳ್ಳುವುದು. ಗುಬ್ಬಿ ಅಥವಾ ಅದಕ್ಕಿಂತ ಚಿಕ್ಕದಾದ ಯಾವುದೇ ಜೀವಿಯ ವಿನಾ ಕಾರಣ ಕೊಲೆಯ ಬಗ್ಗೆ ಅಲ್ಲಾಹನು ನಿರ್ಣಾಯಕ ದಿನದಂದು ಪ್ರಶ್ನಿಸಲಿರುವನು."

"ಒಬ್ಬ ಸ್ತ್ರೀಯನ್ನು ನರಕಾಗ್ನಿಗೊಳಪಡಿಸಿದ್ದು ಆಕೆ ಒಂದು ಬೆಕ್ಕನ್ನು ಕಟ್ಟಿಹಾಕಿ ಆಹಾರ ಕೊಡದೆ ಹಾಗೂ ತನ್ನ ಆಹಾರವನ್ನು ತಾನೇ ಹುಡುಕಿ ತಿನ್ನಲೂ ಬಿಡದೆ ಇದ್ದುದಕ್ಕಾಗಿ."

ಪ್ರಾಣಿ-ಪಕ್ಷಿಗಳನ್ನು ಮೋಜಿಗಾಗಿ ಕಾದಾಡಿಸುವುದು, ಗುರಿಯಾಗಿ(Shooting target) ಬಳಸುವುದು, ಜಾನುವಾರುಗಳನ್ನು ವಿರೂಪಗೊಳಿಸುವುದು, (ಕಿವಿ, ಮೂಗು, ಬಾಲ ಇತ್ಯಾದಿ ಕತ್ತರಿಸುವುದು) ಬರೆ ಎಳೆಯುವುದು, ಅವುಗಳ ಮೇಲೆ ಹೆಚ್ಚಿನ ಭಾರ ಹೇರುವುದು, ಪ್ರಾಣಿಗಳನ್ನು ವೇದಿಕೆಯ ರೂಪದಲ್ಲಿ ಬಳಸುವುದು ಮತ್ತು ಅವುಗಳಿಗೆ ಸರಿಯಾದ ಆಹಾರ ಕೊಡದಿರುವುದನ್ನು ತೀವ್ರವಾಗಿ ಖಂಡಿಸಿದ್ದಾರೆ.

"ಜನರೇ, ನೀವು ಹಸಿರು ಪ್ರದೇಶದಲ್ಲಿ ಪ್ರಯಾಣಿಸುತ್ತಿರುವಾಗ ಸಾವಕಾಶವಾಗಿ ಚಲಿಸಿ. ಪ್ರಾಣಿಗಳು ಅಲ್ಲಿಯ ಹಸಿರು ಮೇವಿನ ಪ್ರಯೋಜನ ಪಡೆಯಲು ಬಿಡಿ ಮತ್ತು ಬರಡು ಭೂಮಿಯಲ್ಲಿ ಚಲಿಸುವಾಗ ಪ್ರಾಣಿಗಳಿಗೆ ತೊಂದರೆಯಾಗದಂತೆ ತೀವ್ರವಾಗಿ ಸಾಗಿಬಿಡಿ" ಎಂದಿದ್ದಾರೆ.

"ಜನರೇ, ಈ ಮೂಕ ಪ್ರಾಣಿಯ ವಿಷಯದಲ್ಲಿ ನಿಮ್ಮ ಪ್ರಭುವನ್ನು ಭಯಪಡಿರಿ, ಅವು ಸವಾರಿಗೆ ಯೋಗ್ಯವಾಗಿರುವಾಗ ಮತ್ತು ಆರೋಗ್ಯವಂತವಾಗಿರುವಾಗ ಮಾತ್ರ ಉಪಯೋಗಿಸಿರಿ, ನಂತರ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲೇ ಬಿಡಿರಿ."

ಪ್ರವಾದಿವರ್ಯರನ್ನುದ್ದೇಶಿಸಿ ಒಬ್ಬ ವ್ಯಕ್ತಿ ಹೀಗೆ ಹೇಳಿದನು: "ಪ್ರವಾದಿವರ್ಯರೇ, ನಾನು ಬರುವ ದಾರಿಯ ಗಿಡಗಂಟಿಗಳಲ್ಲಿದ್ದ ಕೆಲವು ಪಕ್ಷಿಯ ಮರಿಗಳನ್ನು ಹಿಡಿದಿಟ್ಟಾಗ ತಾಯಿ ಪಕ್ಷಿ ನನ್ನ ತಲೆಯ ಸುತ್ತ ಹಾರಾಡ ತೊಡಗಿತು, ನಾನು ಕಂಬಳಿ ಸ್ವಲ್ಪ ಸರಿಸಿದಾಗ ಅದು ನಾನು ಹಿಡಿದಿಟ್ಟ ಮರಿಗಳನ್ನು ಸೇರಿಕೊಂಡಿತು, ನಾನು ಅವನ್ನೆಲ್ಲ ಇಲ್ಲಿ ಹಿಡಿದು ತಂದಿದ್ದೇನೆ." ಇದಕ್ಕೆ ಉತ್ತರವಾಗಿ- ಆ ಪಕ್ಷಿ ಹಾಗೂ ಅದರ ಮರಿಗಳನ್ನು ಪುನಃ ಅದರ ಗೂಡಿನಲ್ಲಿ ಕೂಡಲೇ ಬಿಟ್ಟು ಬರಲು ತಿಳಿಸಿ ಪ್ರವಾದಿವರ್ಯರು ಈ ರೀತಿ ಬೋಧಿಸಿದರು: "ಜನರೇ, ಈ ಪಕ್ಷಿ ತನ್ನ ಪ್ರಾಣವನ್ನು ಗಂಡಾಂತರಕ್ಕೊಳಪಡಿಸಿ ತನ್ನ ಮರಿಗಳ ಬಗ್ಗೆ ತೋರುವ ಪ್ರೀತಿ ವಾತ್ಸಲ್ಯದ ಬಗ್ಗೆ ನಿಮಗೆ ಅಚ್ಚರಿಯಾಗುತ್ತಿದೆ ಅಲ್ಲವೆ? ಅಲ್ಲಾಹನಾಣೆ, ಯಾವನು ನನ್ನನ್ನು ಸತ್ಯಸಂದೇಶದೊಂದಿಗೆ ನಿಮ್ಮೆಲ್ಲರ ಕಡೆಗೆ ಕಳುಹಿಸಿರುವನೋ ಅವನು ತನ್ನ ದಾಸರೊಂದಿಗೆ ಈ ಪಕ್ಷಿ ತೋರುವ ಪ್ರೀತಿ ವಾತ್ಸಲ್ಯಕ್ಕಿಂತ ಅನೇಕ ಪಟ್ಟು ಹೆಚ್ಚು ದಯೆ ತೋರುವವನಾಗಿದ್ದಾನೆ."

ಒಂದು ಸಲ ಒಬ್ಬ ಪ್ರಯಾಣಿಕನಿಗೆ ದಾರಿಯಲ್ಲಿ ತೀವ್ರ ನೀರಡಿಕೆಯಾಯಿತು. ಹತ್ತಿರದಲ್ಲಿ ಅವನಿಗೊಂದು ಬಾವಿ ಕಾಣಿಸಿತು. ಅವನು ಆ ಬಾವಿಯಲ್ಲಿ ಇಳಿದು ನೀರು ಕುಡಿದು ಹೊರ ಬಂದಾಗ ಒಂದು ನಾಯಿ ತನ್ನ ನಾಲಿಗೆ ಹೊರ ಚಾಚಿ ತೇವವಾದ ನೆಲ ನೆಕ್ಕುತ್ತಿರುವುದು ಕಾಣಿಸಿತು. ಅವನು ಈ ನಾಯಿಗೂ ಕೂಡಾ ನನ್ನಂತೆ ತೀವ್ರ ಬಾಯಾರಿಕೆಯಾಗಿದೆ ಎಂದು ಊಹಿಸಿ ಮತ್ತೆ ಬಾವಿಗಿಳಿದ. ಅವನ ಹತ್ತಿರ ಯಾವುದೇ ಪಾತ್ರೆ ಇರಲಿಲ್ಲ ಹಾಗೂ ಬಾವಿಗೆ ಮೆಟ್ಟಲು ಇರದಿದ್ದ ಕಾರಣ ಅವನು ತನ್ನ ಕಾಲಿನಲ್ಲಿದ್ದ ಬೂಟಿನಲ್ಲಿ ನೀರನ್ನು ತುಂಬಿ, ತನ್ನ ಹಲ್ಲಿನಿಂದ ಅದನ್ನು ಕಚ್ಚಿ ಹಿಡಿದು ಬಾವಿಯ ಗೋಡೆಯನ್ನೇರಿ ಬಂದು ನಾಯಿಗೆ ನೀರು ಕುಡಿಸಿದ. ಅಲ್ಲಾಹನು ಪ್ರಯಾಣಿಕನ ಈ ಪ್ರಾಣಿದಯೆಯ ಪುಣ್ಯಕರ್ಮವನ್ನು ಮೆಚ್ಚಿ ಆತನ ಎಲ್ಲ ಪಾಪ ಪರಿಹಾರ ಮಾಡಿದನೆಂದು ಪ್ರವಾದಿವರ್ಯರು(ಸ) ತಿಳಿಸಿದ್ದಾರೆ.

ಜೀವಂತ ಆಡಿನ ಬಾಲ ಕೊಯ್ಯುವ ಮತ್ತು ಒಂಟೆಯ ಡುಬ್ಬದ ಮಾಂಸ ತೆಗೆದು ಉಪಯೋಗಿಸುವ ಅರಬರ ಕ್ರೂರ ವರ್ತನೆಯನ್ನು ಖಂಡಿಸಿ, ಪ್ರವಾದಿಯವರು(ಸ) ಅದರಿಂದ ಅವರನ್ನು ತಡೆದರು.

ಒಂದು ಸಲ ಪ್ರವಾದಿಯವರು ತಮ್ಮ ಸೈನ್ಯದೊಂದಿಗೆ ಸಾಗುತ್ತಿದ್ದಾಗ ದಾರಿಯಲ್ಲಿ ಒಂದು ನಾಯಿಯು ಮರಿ ಹಾಕಿರುವುದನ್ನು ಕಂಡರು. ಸೈನಿಕರು ಹಾಗೂ ಅವರ ಸವಾರಿಗಳಿಂದ ಆ ನಾಯಿ ಮತ್ತು ಅದರ ಮರಿಗಳಿಗೆ ಯಾವುದೇ ತೊಂದರೆಯಾಗದಿರಲೆಂದು ಒಬ್ಬ ಸೈನಿಕನನ್ನು ಪೂರ್ಣ ಸೈನ್ಯ ಅಲ್ಲಿಂದ ಹಾದು ಹೋಗುವ ವರೆಗೆ ರಕ್ಷಣೆಗಾಗಿ ನಿಲ್ಲಿಸಿದರು.

ಪ್ರಾಣಿಬಲಿಯ ಸಮಯದಲ್ಲೂ ಅತ್ಯಂತ ಕಡಿಮೆ ನೋವಾಗುವಂತೆ, ಸಾಧ್ಯವಿದ್ದ ಮಟ್ಟಿಗೆ ಬಲಿಪ್ರಾಣಿಯೊಂದಿಗೆ ಕರುಣೆಯಿಂದ ವರ್ತಿಸುವಂತೆ ಪ್ರವಾದಿ(ಸ) ಆದೇಶಿಸಿದ್ದಾರೆ. ಬಲಿಪ್ರಾಣಿಗೆ ಸರಿಯಾಗಿ ಮೇವನ್ನುಣಿಸಿ, ನೀರು ಕುಡಿಸಿ, ಅಲ್ಲಾಹನ ನಾಮ ಸ್ಮರಿಸಿ ಅತ್ಯಂತ ಹರಿತವಾದ ಚೂರಿಯಿಂದ ಕತ್ತಿನ ದೊಡ್ಡ ರಕ್ತನಾಳ ಕೊಯ್ಯಲ್ಪಡುವ ಹಾಗೆ 'ದಿಬ್ಹ್'(ಚೂರಿ ಚಲಾಯಿಸುವ ಇಸ್ಲಾಮೀ ವಿಧಾನ) ಮಾಡಲು ತಿಳಿಸಿದ್ದಾರೆ. ಈ ವಿಧಾನದಿಂದ ಬಲಿಪಶುವಿನ ರಕ್ತ ತೀವ್ರಗತಿಯಿಂದ ಹೊರಬಂದು ಅದು ನೋವಿಲ್ಲದ ಮೂರ್ಛಾವಸ್ಥೆಯನ್ನು ಕ್ಷಣಾರ್ಧದಲ್ಲಿ ತಲುಪುತ್ತದೆ. ಈ ವಿಧಾನವು ವೈಜ್ಞಾನಿಕವಾಗಿ ಅತ್ಯಂತ ಕಡಿಮೆ ನೋವಿನ ವಿಧಾನವಾಗಿದ್ದು, ರಕ್ತರಹಿತ ಶುದ್ಧ ಮಾಂಸ ಇದರಿಂದ ಲಭಿಸುತ್ತದೆ.

"ಭೂಮಿಯ ಮೇಲಿರುವ ಜೀವಿಗಳೊಡನೆ ಕರುಣೆ ತೋರಿರಿ. ಆಕಾಶದವನು ನಿಮ್ಮ ಮೇಲೆ ಕರುಣೆ ತೋರುವನೆಂದು" ಪ್ರವಾದಿವರ್ಯರು(ಸ) ಬೋಧಿಸಿದ್ದಾರೆ. ಮುಹಮ್ಮದ್‌ರನ್ನು(ಸ) ಅಲ್ಲಾಹನು ಮಾನವ ಕೋಟಿಗಾಗಿ "ರಹ್ಮತುಲ್ಲಿಲ್ ಆಲಮೀನ್" ಅಂದರೆ ದಯೆ ಹಾಗೂ ಕರುಣೆಯಾಗಿ ಕಳುಹಿಸಿದ್ದಾನೆ. ಅವರ ಜೀವನದಲ್ಲಿ ಮಾನವರೆಲ್ಲರಿಗಾಗಿ ಅತ್ಯಂತ ಉನ್ನತವಾದ ಮಾದರಿ ಇದೆ. ಪ್ರಾಣಿದಯೆಯ ಬಗ್ಗೆ ಅವರ ಶಿಕ್ಷಣ ಇಷ್ಟು ಉನ್ನತ ಹಾಗೂ ದಯೆಭರಿತವಾಗಿರುವಾಗ ಜೀವಿಗಳಲ್ಲೇ ಶ್ರೇಷ್ಠವಾಗಿರುವ ಮಾನವ ಜೀವದ ಬಗ್ಗೆ ಅದೆಷ್ಟು ಉನ್ನತ ಶಿಕ್ಷಣ ವಿರಬಹುದೆಂಬುದನ್ನು ಊಹಿಸಬಹುದು. ಪವಿತ್ರ ಕುರ್‌ಆನಿನಲ್ಲಿ ಮಾನವ ಜೀವದ ಬಗ್ಗೆ ಈ ರೀತಿ ತಿಳಿಸಲಾಗಿದೆ:

"ಒಬ್ಬ ಮಾನವನ ಹತ್ಯೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿಯಲ್ಲದೆ ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ."

(ಸೂರಃ ಅಲ್ ಮಾಇದಃ - 32)

ಪ್ರವಾದಿವರ್ಯರ(ಸ) ಶಿಕ್ಷಣದಲ್ಲಿ ಪ್ರಾಣಿಗಳನ್ನು ಕೊಲ್ಲುವುದನ್ನು ಅನುಮತಿಸಿರುವುದು ಕೇವಲ ಅವುಗಳ ಹಾನಿಯಿಂದ ಪಾರಾಗಲು ಮತ್ತು ಆಹಾರಕ್ಕಾಗಿ ಮಾತ್ರ. ರೋಗಾಣು, ವಿಷಜಂತು ಹಾಗೂ ಕ್ರೂರ ಪ್ರಾಣಿಗಳನ್ನು ಕೊಲ್ಲಲು ಅನುಮತಿಸಿರುವುದು ಮನುಷ್ಯನ ಪ್ರಾಣವು ಅವುಗಳ ಪ್ರಾಣಕ್ಕಿಂತ ಅಮೂಲ್ಯವಾಗಿರುವ ಕಾರಣಕ್ಕಾಗಿ ಮಾತ್ರ.

❖❖❖

ಮಾಂಸಾಹಾರ:
ವಿವಿಧ ಭಾರತೀಯ ಜನಾಂಗಗಳಲ್ಲಿ

ಭಾರತ ಬಹುಧರ್ಮೀಯ ರಾಷ್ಟ್ರ. ಇಲ್ಲಿ ಅನೇಕ ಧರ್ಮ, ಜಾತಿ, ಉಪಜಾತಿಗಳ ಜನರು ವಾಸಿಸುತ್ತಾರೆ. ಇವರಲ್ಲಿ ಸುಮಾರು 80% ಹಿಂದೂ, 12% ಮುಸ್ಲಿಮ್, 2.5% ಕ್ರೈಸ್ತರು, 2% ಸಿಕ್ಖ್, 0.7% ಬೌದ್ಧರು ಮತ್ತು 0.5% ಜೈನರಿದ್ದಾರೆ. ಮೌಲಾನಾ ಅಬ್ದುಲ್ ಕರೀಮ್ ಪಾರಿಖ್‌ರ ಸಂಶೋಧನಾತ್ಮಕ ಪುಸ್ತಕ(ಗೋ ಹಂತಕರಾರು ಮತ್ತು ಅಪವಾದ ಯಾರ ಮೇಲೆ?)ದಲ್ಲಿ ಗೋಮಾಂಸ ಸೇವಿಸುವವರಲ್ಲಿ ಮುಸ್ಲಿಮರ ಪಾಲು 1%ಕ್ಕಿಂತ ಕಡಿಮೆ ಎಂದು ತಿಳಿಸಿದ್ದಾರೆ. ಗೋಮಾಂಸ ಸೇವಿಸುವವರಲ್ಲಿ ಕ್ರೈಸ್ತರು, ಬೌದ್ಧರು, ನೇಪಾಲಿ, ಗೂರ್ಖಾ, ದಲಿತರು, ಆದಿವಾಸಿಗಳು, ಪಾರ್ಸಿ, ಚಮ್ಮಾರ, ಲಮ್ಮಾಣಿ, ಭಂಗಿ, ಹರಿಜನರು, ಕೊರಕೊ, ಗೊಂಡ, ಬನವಾಸಿ ಮತ್ತು ಅನೇಕ ಗುಡ್ಡಗಾಡಿನಲ್ಲಿರುವ ಅಲೆಮಾರಿ ಜನಾಂಗಗಳೂ ಸೇರಿವೆ. ವಾಸ್ತವಿಕತೆ ಹೀಗಿರುವಾಗ ಮುಸ್ಲಿಮರ ಮೇಲೆ ಗೋಹತ್ಯೆಯ ಅಪವಾದ ಬಾಲಿಶವೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಸ್ಲಾಮ್ ಧರ್ಮದಲ್ಲಿ ಅನುಮತಿಸಲ್ಪಟ್ಟ ಅನೇಕ ಪ್ರಾಣಿಗಳಲ್ಲಿ ಆಕಳೂ ಒಂದು. ಆಕಳನ್ನು ಕೊಂದು ತಿನ್ನಲೇಬೇಕೆಂಬ ಕಟ್ಟಾಜ್ಞೆ ಎಲ್ಲಿಯೂ ಇಲ್ಲ. ಇತರ ಧರ್ಮದ ಜನರ ಧಾರ್ಮಿಕ ಭಾವನೆಗಳನ್ನು ಗೌರವಿಸುವ ಬೋಧನೆಯನ್ನೇ ಇಸ್ಲಾಮ್ ಧರ್ಮ ನೀಡಿದೆ. ಭೂಮಿಯ ಮೇಲೆ ಕ್ಷೋಭೆಯನ್ನುಂಟು ಮಾಡುವುದನ್ನು ಕೊಲೆಗಿಂತ ದೊಡ್ಡ ಅಪರಾಧವೆಂದು ಅದು ಸಾರುತ್ತದೆ.

ದನದ ಮಾಂಸ, ಚರ್ಮ, ಎಲುಬು ಮತ್ತಿತರ ಅಂಗಾಂಗಗಳ ವ್ಯಾಪಾರ ಮಾಡುವವರಲ್ಲಿ ಹಾಗೂ ಆರ್ಥಿಕ ಲಾಭ ಪಡೆಯುವವರಲ್ಲಿ ಹೆಚ್ಚಿನವರು ಮುಸ್ಲಿಮೇತರರಾಗಿದ್ದಾರೆಂದು ಅಂಕಿ-ಸಂಖ್ಯೆಯ ಆಧಾರದಲ್ಲಿ ಮೌಲಾನಾ ಪಾರಿಖ್ ಸ್ಪಷ್ಟ ಪಡಿಸಿದ್ದಾರೆ.

ಡಾಲ್ಡದಲ್ಲಿ ಹಸುವಿನ ಕೊಬ್ಬನ್ನು ಬಳಸಿದ ಅಂತಾರಾಷ್ಟ್ರೀಯ ವ್ಯಾಪಾರಿಯೊಬ್ಬ ಜೈನ ಧರ್ಮದವನಾಗಿದ್ದನು. (ಜೈನ ಶುದ್ಧ ವನಸ್ಪತಿ ಲಿಮಿಟೆಡ್ ದಿಲ್ಲಿ - The Vitwada Nagpur Daily- 26th Aug 1983)

ಗೂರ್ಖಾ ಜನಾಂಗದವರು ಹಿಂದುಸ್ತಾನದಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರು ಹಿಂದೂ ರಾಷ್ಟ್ರವೆಂದು ಸಾರಿರುವ ನೇಪಾಳದ ರಾಜಧಾನಿಯಾದ ಕಾಠ್ಮಂಡುವಿನ ಕಾಳಿ ಮಂದಿರದಲ್ಲಿ ಪ್ರತಿವರ್ಷ ತಮ್ಮ ಇಷ್ಟಾರ್ಥ ಪೂರ್ತಿಗಾಗಿ ನೂರಾರು ಸಂಖ್ಯೆಯಲ್ಲಿ ಕೋಳಿ, ಕುರಿ ಮತ್ತು ದನವನ್ನು ನೀಡುತ್ತಾರೆ. ಈ ಕಾರ್ಯವನ್ನು ಮಂದಿರದ ಪೂಜಾರಿಗಳು ಸ್ವತಃ ಹರಿತವಾದ ಖಡ್ಗದಿಂದ ರುಂಡ ಕತ್ತರಿಸಿ ರಕ್ತವನ್ನು ಕಾಳಿದೇವಿಯ ಪಾದಗಳಿಗೆ ಅರ್ಪಿಸುತ್ತಾರೆ. ಭಾರತದ ವಿವಿಧ ಭಾಗಗಳಲ್ಲಿ ದುರ್ಗಾಪೂಜೆಯ ವೇಳೆ, ಜಾತ್ರೆಗಳಲ್ಲಿ ವಿವಿಧ ಪ್ರಾಣಿಗಳ ಬಲಿ ಅವ್ಯಾಹತವಾಗಿ ನಡೆಯುತ್ತಿರುವುದನ್ನು ಪ್ರಚಾರ ಮಾಧ್ಯಮಗಳು ಆಗಾಗ ಪ್ರಸ್ತುತ ಪಡಿಸುತ್ತಿರುತ್ತವೆ.

ಮಾಂಸಾಹಾರ ಸೇವನೆಯ ನೈತಿಕ ಪರಿಣಾಮ

ಮಾಂಸಾಹಾರದಿಂದ ಮನುಷ್ಯನಲ್ಲಿ ಕ್ರೌರ್ಯ, ಕಠೋರತೆ ಮತ್ತು ನಿರ್ದಯೆ ಉಂಟಾಗುತ್ತದೆಂದು ಹೇಳಲಾಗುತ್ತದೆ. ಶಾಖಾಹಾರಿಗಳು ಇದರಿಂದ ಮುಕ್ತರಾಗಿದ್ದಾರೆನ್ನಲಾಗಿದೆ. ಇತಿಹಾಸ ಮತ್ತು ಸಾಕ್ಷ್ಯಾಧಾರಗಳಿಂದ ಈ ನಿಲುವಿಗೆ ಸಮರ್ಥನೆ ಸಿಗುವುದಿಲ್ಲ. ಗೌತಮ ಬುದ್ಧ, ಏಸುಕ್ರಿಸ್ತ- ಇಬ್ಬರೂ ಅಹಿಂಸೆ, ಪ್ರೇಮ ಮತ್ತು ಕರುಣೆಯ ಸಾಕಾರ ಮೂರ್ತಿಗಳಾಗಿದ್ದರೂ ಮಾಂಸಾಹಾರಿಗಳಾಗಿದ್ದರು. ಇತಿಹಾಸ ಪುರುಷರಾದ ದಶರಥರಾಜ, ಶ್ರೀ ರಾಮಚಂದ್ರ, ಇಂದ್ರ, ದೇವಿ-ದೇವತೆಗಳು, ವೈದಿಕ ಕಾಲದ ಬ್ರಾಹ್ಮಣರು ಮಾಂಸಾಹಾರಿಗಳಾಗಿದ್ದರೆಂಬ ಬಗ್ಗೆ ಐತಿಹಾಸಿಕ ಆಧಾರಗಳಿವೆ. ಟಿಬೇಟಿನ ದಲಾಯಿಲಾಮಾ, ನೊಬೆಲ್ ಪಾರಿತೋಷಕ ಪಡೆದ ಮದರ್ ತೆರೇಸಾ ಮಾಂಸಾಹಾರಿಗಳಾಗಿದ್ದರು. ಇಪ್ಪತ್ತನೆಯ ಶತಮಾನದ ಅತ್ಯಂತ ಕ್ರೂರಿ ಎಂದು ಹೆಸರು ಪಡೆದ ಹಿಟ್ಲರ್ ಶಾಖಾಹಾರಿಯಾಗಿದ್ದುದು ಜಗಜ್ಜಾಹೀರಾಗಿದೆ. ಹರಿಯಾಣ ರಾಜ್ಯದ ಜಜ್ಜಾರ್‌ನಲ್ಲಿ ಸತ್ತ ಆಕಳ ಚರ್ಮ ಸುಲಿದರೆಂಬ ಅಪರಾಧಕ್ಕಾಗಿ ಐದು ಮಂದಿ ಹರಿಜನರ ಕಗ್ಗೊಲೆ, ಅದೂ ಪೊಲೀಸರೆದುರಲ್ಲೇ ಮಾಡಿದವರು ಮಾಂಸಾಹಾರಿಗಳೇ? ಗುಜರಾತ್ ಜನಾಂಗೀಯ ಹತ್ಯಾಕಾಂಡದಲ್ಲಿ ಪಾಲ್ಗೊಂಡವರು ಮಾಂಸಾಹಾರಿಗಳಲ್ಲವೆನ್ನುವುದೂ ಎಲ್ಲರ ಜನಮನದಲ್ಲಿ ಇಂದಿಗೂ ಹಚ್ಚ ಹಸುರಾಗಿದೆ.

❖❖❖

ಸಸ್ಯಾಹಾರ

ಸಸ್ಯಾಹಾರ ಸೇವಿಸುವವರು ಅನಿವಾರ್ಯ ಹಿಂಸೆಗೆ ಸಮ್ಮತಿಸಿದರೂ ನಾವೇಕೆ ಈ ಹಿಂಸೆಯನ್ನು ವನಸ್ಪತಿಗಳಿಗೆ ಸೀಮಿತಗೊಳಿಸಬಾರದೆಂದು ಕೇಳುತ್ತಾರೆ. ವನಸ್ಪತಿಗಳ ಹಿಂಸೆ ಇಲ್ಲದೆ ಬದುಕಲು ಅಸಾಧ್ಯ, ಆದರೆ ಪಶುಗಳನ್ನು ಹಿಂಸಿಸದೇ ಬದುಕಲು ಸಾಧ್ಯವಿಲ್ಲವೇ? ಇದು ಸಾಧ್ಯವೆಂದಾದರೆ ಅದರಿಂದ ನಾವು ಉಳಿಯ ಬೇಕೆನ್ನುವುದು ಅವರ ವಾದ.

ನದಿ ಹಾಗೂ ಸಮುದ್ರ ತೀರದ ನಿವಾಸಿಗಳು ಮೀನನ್ನು ದಿನನಿತ್ಯ ಆಹಾರದಲ್ಲಿ ಉಪಯೋಗಿಸುತ್ತಾರೆ. ಮೀನಿಗೆ ಅವರು ಸಮುದ್ರದ ಚವಳೆ ಕಾಯಿ, ತರಕಾರಿ ಎಂದು ಹೆಸರಿಸಿ ತಮ್ಮನ್ನು ಸ್ವತಃ ಶಾಖಾಹಾರಿಗಳೆನ್ನುತ್ತಾರೆ. ಅದೇ ರೀತಿ ಪ್ರಾಣಿಮೂಲದ ಕೊಬ್ಬಿನಿಂದ, ಅಂಗಾಂಗಗಳಿಂದ ಅನೇಕ ತರದ ಔಷಧ ತಯಾರಿಸಲಾಗುತ್ತದೆ. (ಉದಾ: ಇನ್ಸುಲಿನ್, ಲಿವರ್ ರಸ, ಕ್ಯಾಪ್ಸೂಲ್ ಸಲುವಾಗಿ ಬಳಸುವ ಜಿಲಾಟಿನ್-ಇತ್ಯಾದಿ) ಮೊಟ್ಟೆಯನ್ನು ಬೇಕರಿ ತಿಂಡಿಗಳಲ್ಲಿ (ಕೇಕ್) ಧಾರಾಳವಾಗಿ ಬಳಸಲಾಗುತ್ತದೆ. ಇವೆಲ್ಲವುಗಳನ್ನು ಉಪಯೋಗಿಸುವವರು ತಾವು ಶಾಖಾಹಾರಿಗಳೆನ್ನಲು ಯಾವುದೇ ಸಂಕೋಚ ಪಡುವುದಿಲ್ಲ. ಶಾಖಾಹಾರಿಗಳಲ್ಲಿ ಮುಖ್ಯವಾಗಿ ಮೂರು ವಿಧದವರಿದ್ದಾರೆ;

ಶಾಖಾಹಾರಿಗಳ ವಿಧಗಳು

1. ಕ್ಷೀರಯುಕ್ತ ಶಾಖಾಹಾರಿಗಳು(Lacto.vegitarians)

ಈ ಗುಂಪಿಗೆ ಸೇರಿದವರು ಸಸ್ಯಮೂಲದ ಆಹಾರದ ಜೊತೆಗೆ ಹಾಲು ಮತ್ತು ಹಾಲಿನಿಂದ ತಯಾರಿಸಲಾದ ವಿವಿಧ ಖಾದ್ಯಗಳನ್ನು ಸೇವಿಸುತ್ತಾರೆ. ಹಾಲು ಮೊಸರಾಗುವುದು ಕೋಟ್ಯಾವಧಿ ಲಾಕ್ಟೋಬ್ಯಾಸಿಲಸ್ ಎಂಬ ಕ್ರಿಮಿಗಳಿಂದ. ಮಜ್ಜಿಗೆಯಲ್ಲಿಯೂ ಈ ಕ್ರಿಮಿಗಳು ಧಾರಾಳವಾಗಿರುತ್ತವೆ. ಈ ಕ್ರಿಮಿಗಳ ಆವಶ್ಯಕತೆ ನಮ್ಮ ಕರುಳಿನಲ್ಲಿದ್ದು ಇವುಗಳ ಸಂಖ್ಯೆ ಕಡಿಮೆಯಾದಾಗ (ಆ್ಯಂಟಿಬೈಯೊಟಿಕ್ಸ್‌ಗಳ ಹೆಚ್ಚಿನ ಬಳಕೆಯಿಂದ) ಕ್ಯಾಪ್ಸೂಲ್‌ಗಳ (Sparlae) ರೂಪದಲ್ಲಿ ವೈದ್ಯರು ರೋಗಿಗಳಿಗೆ ಈ ಕ್ರಿಮಿಗಳಿರುವ ಔಷಧ ಸಾಮಾನ್ಯವಾಗಿ ಬರೆದು ಕೊಡುತ್ತಾರೆ. ಈ ತರದ ಕ್ರಿಮಿಗಳು ಅರೆ ಜೀವಗೊಳಿಸಿದ ರೂಪದಲ್ಲಿ ಜಗತ್ತಿನಾದ್ಯಂತ ಬಳಸಲಾಗುವ ಲಸಿಕೆ(Polio ಇತ್ಯಾದಿ)ಗಳಲ್ಲಿರುತ್ತವೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಯಾವುದೇ ತರದ ಭೇದಭಾವವಿಲ್ಲದೆ

ನಿಸ್ಸಂಕೋಚವಾಗಿ ಜೈನ, ಬೌದ್ಧ, ಹಿಂದೂ, ಮುಸ್ಲಿಮರೆಲ್ಲರೂ ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸುತ್ತಾರೆ ಮತ್ತು ಸಕ್ರಿಯವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಇತರರಿಗೆ ಲಸಿಕೆ ಹಾಕಿಸುತ್ತಾರೆ.

2. ಅಂಡ- ಕ್ಷೀರಯುಕ್ತ ಶಾಖಾಹಾರಿಗಳು(Ovo Lacto Vegitarians)

ಈ ಗುಂಪಿಗೆ ಸೇರಿದವರು ಸಸ್ಯ, ಹಾಲು, ಹೈನಿನೊಂದಿಗೆ ಮೊಟ್ಟೆಯನ್ನೂ ಸೇವಿಸುತ್ತಾರೆ. ಮೀನು-ಮಾಂಸ ಸೇವಿಸುವುದಿಲ್ಲ.

3. ವಿಗನ್‌ಗಳು (Vegans)

ಈ ಗುಂಪಿಗೆ ಸೇರಿದವರು ಕೇವಲ ಸಸ್ಯಮೂಲದ ಆಹಾರ ಸೇವಿಸುತ್ತಾರೆ. ಇವರು ಯಾವುದೇ ಧರ್ಮ, ವಿಶ್ವಾಸ ಅಥವಾ ವಿಶೇಷ ಪಂಥಕ್ಕೆ ಸೇರಿದವರಾಗಿರದೆ ತಮ್ಮದೇ ಆದ ಸಂಸ್ಥೆ(The Vegan Society)ಯನ್ನು ಕಟ್ಟಿ ಪ್ರಾಣಿಗಳ ಹಕ್ಕುಗಳಿಗಾಗಿ ಹೋರಾಡುತ್ತಾರೆ. ಇವರ ಸಂಖ್ಯೆ ಅತ್ಯಂತ ಕಡಿಮೆಯಾಗಿದ್ದು ಇವರು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಕಂಡು ಬರುತ್ತಾರೆ. ಇವರು ಪ್ರಾಣಿ ಮೂಲದ ಎಲ್ಲ ತರದ ಆಹಾರ, ವಸ್ತು ಮತ್ತು ಉಡುಪುಗಳ ವಿರೋಧಿಗಳಾಗಿದ್ದಾರೆ.

ಶಾಖಾಹಾರಿಗಳ ವಾದ

ಸಾಕು ಪ್ರಾಣಿಗಳ ವಧೆಯಿಂದ ದೇಶದಲ್ಲಿ ಹಾಲು, ಬೆಣ್ಣೆ ಹಾಗೂ ತುಪ್ಪದ ಕೊರತೆಯುಂಟಾಗುತ್ತದೆ. ಕೃಷಿ ಮತ್ತು ವ್ಯವಸಾಯದಲ್ಲಿ ಭಾರೀ ತೊಂದರೆಯಾಗುವುದು. ಒಂದು ವೇಳೆ ದನಕರು ವಿಶೇಷವಾಗಿ ಆಕಳ ವಧೆಯ ಮೇಲೆ ನಿಷೇಧ ಹೇರಿದರೆ (ಬಹುತೇಕ ರಾಜ್ಯಗಳಲ್ಲಿ ಈಗಾಗಲೇ ಜಾರಿಯಲ್ಲಿದೆ) ದೇಶದಲ್ಲಿ ಹಾಲು ಹೈನಿನ ಹೊಳೆ ಹರಿಯುವುದು, ಭೂಮಿ ಅನ್ನದ ಭಂಡಾರಗಳನ್ನು ಹೊರಹಾಕುವುದೆಂದು ವಾದಿಸುತ್ತಾರೆ. ನಮ್ಮ ದೇಶದಲ್ಲಿ ಹೆಚ್ಚಿನ ಹಾಲು ಸಿಗುವುದು ಆಕಳಿನಿಂದಲ್ಲ, ಎಮ್ಮೆಗಳಿಂದ ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸಸ್ಯಾಹಾರ ಪರ ವಾದಿಗಳು ಇದನ್ನು, ಧಾರ್ಮಿಕ ಹಾಗೂ ಭಾವನಾತ್ಮಕ ವಾಗಿರದೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದ್ದೆಂದು ತೋರ್ಪಡಿಸುತ್ತಾರೆ.

ಇವರ ವಾದದಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಇವರ ಅಜ್ಞಾನದ ಅರಿವಾಗುತ್ತದೆ. ಒಂದು ವೇಳೆ ಪ್ರಾಣಿವಧೆಯ ಗಂಭೀರ ಪರಿಣಾಮ ಕೃಷಿ ಮತ್ತು ಹಾಲು ಹೈನಿನ ಮೇಲೆ ಆಗುತ್ತಿದ್ದರೆ ಅದು ಅಮೇರಿಕಾ ಮತ್ತು ಯೂರೋಪಿಯನ್ ರಾಷ್ಟ್ರಗಳ ಮೇಲಾಗಬೇಕಿತ್ತು. ಏಕೆಂದರೆ ಈ ರಾಷ್ಟ್ರಗಳಲ್ಲಿ ನಮ್ಮ ರಾಷ್ಟ್ರದ ಬಹುತೇಕ ರಾಜ್ಯಗಳಲ್ಲಿರುವಂತೆ ಪ್ರಾಣಿವಧೆಯ ನಿಷೇಧವಿಲ್ಲ. ಈ ರಾಷ್ಟ್ರಗಳ ಜನರು ಗೋಮಾಂಸವನ್ನು ಅತ್ಯಂತ ರುಚಿಕರ ಮಾಂಸವೆಂದು ತಾವು ಸೇವಿಸುವುದರೊಂದಿಗೆ ಇತರ ರಾಷ್ಟ್ರಗಳಿಗೂ ಸಾಕಷ್ಟು ಪ್ರಮಾಣದಲ್ಲಿ ರಫ್ತು ಮಾಡುತ್ತಾರೆ. ಇಷ್ಟೇ ಅಲ್ಲ, ತಾಜಾ ಮಾಂಸಕ್ಕಾಗಿ ಪ್ರಾಣಿಗಳನ್ನು ಮಾರುತ್ತಾರೆ. ನಿಜವಾಗಿಯೂ ಆ ದೇಶಗಳಲ್ಲಿ ಹಾಲು-ಹೈನಿನ ಹೊಳೆ

ಹರಿಯುತ್ತಿದೆ ಎನ್ನಬಹುದು. ಭೂಮಿಯಲ್ಲಿ ಕಾಳಿನ ಭಂಡಾರಗಳು ಹೊರಹೊಮ್ಮುತ್ತಿದೆ. ಇವರು ಹೆಚ್ಚಿನ ಹಾಲನ್ನು ಪೌಡರ್ ರೂಪದಲ್ಲಿ ರಫ್ತು ಮಾಡುತ್ತಾರೆ. ಆ ದೇಶಗಳಲ್ಲಿ ಯಾವುದೇ ತರದ ಅನ್ನದ ಕೊರತೆಯಿಲ್ಲ. ಅದನ್ನು ರಫ್ತು ಮಾಡುವುದರೊಂದಿಗೆ ವಿವಿಧ ರೂಪದ ಡೈರಿ ಖಾದ್ಯಗಳನ್ನು ತಯಾರಿಸಿ ಅವುಗಳನ್ನೂ ರಫ್ತು ಮಾಡುತ್ತಾರೆ. ಕೆಲವೊಮ್ಮೆ ಬೆಲೆ ನಿಯಂತ್ರಣಕ್ಕಾಗಿ ಲಕ್ಷಾವಧಿ ಟನ್ ಆಹಾರವನ್ನು ಸಮುದ್ರದಲ್ಲಿ ಚೆಲ್ಲುತ್ತಾರೆ. ನಮ್ಮಲ್ಲಿ ಪ್ರಾಣಿವಧೆಯ ನಿಷೇಧವಿದ್ದಾಗ್ಯೂ ಹಾಲಿನ ಹೊಳೆ ಹರಿಯುವುದನ್ನು ಮತ್ತು ಎಲ್ಲ ರಾಜ್ಯಗಳು ಆಹಾರದಲ್ಲಿ ಸ್ವಾವಲಂಬಿಯಾಗಿರುವುದನ್ನು ನಾವು ನೋಡುತ್ತಿಲ್ಲ. ಹಾಲು, ಹೈನು ಮತ್ತು ದವಸಧಾನ್ಯದ ಬೆಲೆಗಳು ತಾರಕಕ್ಕೇರಿರುವುದನ್ನೇ ನಾವು ಈ ದೇಶದಲ್ಲಿ ನೋಡುತ್ತಿದ್ದೇವೆ.

ಈ ಜನರು ಐತಿಹಾಸಿಕ ಸತ್ಯದ ಕಡೆಗೂ ಗಮನ ಹರಿಸುವುದಿಲ್ಲ. ಬ್ರಿಟಿಷರ, ಮೊಗಲರ ಮತ್ತಿತರರ ರಾಜ್ಯಾಡಳಿತ ಕಾಲದಲ್ಲಿ ಹಾಲು, ತುಪ್ಪ ಹಾಗೂ ಆಹಾರದ ಸಮೃದ್ಧಿ ಇತ್ತು. ಇವುಗಳೆಲ್ಲ ಕಡಿಮೆ ದರದಲ್ಲಿ ಲಭ್ಯವಿದ್ದವೆಂಬ ಚರ್ಚೆ ಇಂದಿಗೂ ನಮ್ಮ ಹಿರಿಯರಿಂದ ಕೇಳಲು ಸಿಗುತ್ತದೆ. ಆ ಕಾಲದಲ್ಲಿ ಪ್ರಾಣಿವಧೆಯ ನಿಷೇಧವಿರಲಿಲ್ಲವೆಂಬುದು ಗಮನಾರ್ಹ.

ಸಸ್ಯಾಹಾರದ ವ್ಯಾವಹಾರಿಕತೆ

ವೈಜ್ಞಾನಿಕವಾಗಿ ಪ್ರಾಣಿಗಳಂತೆ ಸಸ್ಯಗಳೂ ಸಜೀವ, ಚೈತನ್ಯಶೀಲ, ಕಷ್ಟ- ಸುಖವನ್ನು ಅನುಭವಿಸುತ್ತವೆಯೆಂಬುದನ್ನು ಇಂದು ಜಗತ್ತು ಒಪ್ಪಿಕೊಂಡಿದೆ. ಆದ್ದರಿಂದ ಅಹಿಂಸೆಯ ವ್ಯಾಖ್ಯಾನ ಮನುಷ್ಯ, ಪಶು ಮತ್ತು ಸಸ್ಯಗಳನ್ನು ಕೊಯ್ಯುವುದರಿಂದ ಹಾಗೂ ಯಾವುದೇ ಪ್ರಕಾರದ ನೋವುಂಟು ಮಾಡುವುದರಿಂದ ದೂರ ಉಳಿಯುವುದೆಂದಾಗುತ್ತದೆ.

ಈ ತಾತ್ಪರ್ಯದ ಬೆಳಕಿನಲ್ಲಿ, ಅಹಿಂಸೆಯ ಸಿದ್ಧಾಂತ ಎಷ್ಟು ವ್ಯಾವಹಾರಿಕ ಮತ್ತು ಮಾನವ ಕೋಟಿಗೆ ಪ್ರಯೋಜನಕಾರಿಯೆಂಬುದನ್ನು ಕೂಲಂಕಷವಾಗಿ ಅಭ್ಯಸಿಸಿ ನೋಡಬೇಕಾಗಿದೆ.

ಮನುಷ್ಯನ ಉಳಿವಿಗೆ ಆಹಾರ ಅನಿವಾರ್ಯ. ಅದು ಸಸ್ಯಾಹಾರವಾಗಿರಲಿ, ಮಾಂಸಾಹಾರವಾಗಿರಲಿ ಅಥವಾ ಕೇವಲ ಹಾಲು ಕುಡಿಯುವುದಾಗಿರಲಿ. ಇದರಲ್ಲಿ ಯಾವುದೇ ತರದ ಆಹಾರವನ್ನು ಹಿಂಸೆ ಇಲ್ಲದೆ ಪಡೆಯಲು ಸಾಧ್ಯವೇ? "ಅಹಿಂಸಾ ಮನು ಪರಮೋ ಧರ್ಮ"ವೆನ್ನುವ ಮನಮೋಹಕ ತತ್ವ ಎಂದಾದರೂ ಸಂಪೂರ್ಣ ಆಚರಣೆಯಲ್ಲಿತ್ತೇ? ಮುಂದೆಂದಾದರೂ ಆಚರಣೆಯಲ್ಲಿ ಬರಲು ಸಾಧ್ಯವೇ ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ.

ನಮ್ಮ ಉಸಿರಾಡುವ ಪ್ರಕ್ರಿಯೆಯಿಂದ ಲಕ್ಷಾವಧಿ ಕ್ರಿಮಿಗಳು ನಮ್ಮ ಪುಪ್ಪುಸ ಸೇರಿ ಸಾಯುವುದುಂಟು. ಈ ಕ್ರಿಮಿಗಳನ್ನು ಹಿಂಸಿಸುವುದನ್ನು ತಡೆಯಲು ನಾವು ಉಸಿರಾಡುವುದನ್ನು ಬಿಟ್ಟರೆ ಜೀವಂತ ಉಳಿಯಬಹುದೆ? ನಾವು ಸೇವಿಸುವ ನೀರು, ಹಾಲು, ಮೊಸರು,

ಮಜ್ಜಿಗೆಗಳಲ್ಲಿ ಕೋಟ್ಯಾವಧಿ ಕ್ರಿಮಿಗಳಿರುತ್ತವೆ. ಇವುಗಳ ಸೇವನೆ ಹಿಂಸೆ ಅಲ್ಲವೆ? ಆಕಳ ಹಾಲನ್ನು ಅದರ ಕರುವಿಗೆ ವಂಚಿಸಿ ಪಡೆದು ಸೇವಿಸುವುದು ಹಿಂಸೆ ಅಲ್ಲವೆ? ಹಾಲು ಕೊಡುವ ಪ್ರಾಣಿಗಳು ಹುಲ್ಲು, ಮೇವು ಹಾಗೂ ಇತರ ಸಜೀವ ಸಸ್ಯಗಳನ್ನು ತಿನ್ನದೆ-ಹಿಂಸೆ ಮಾಡದೆ ಅವು ಹಾಲನ್ನು ಕೊಡುವುದಾದರೂ ಹೇಗೆ? ಪೂಜೆ-ಪುರಸ್ಕಾರಗಳಿಗಾಗಿ ಕೀಳುವ ಹೂವು, ಎಲೆ, ಹಣ್ಣು-ಕಾಯಿ ಹಿಂಸೆ ಅಲ್ಲವೆ? ಗಿಡ-ಮರಗಳನ್ನು ಕಡಿಯುವ ಹಿಂಸೆ ಮಾಡದೆ ಅಡುಗೆಗಾಗಿ ಒಲೆ ಹೊತ್ತಿಸಬಹುದೇ? ಬೇಯಿಸುವುದರಿಂದಾಗುವ ಕ್ರಿಮಿಗಳ ಹತ್ಯೆಯಿಂದ ಪಾರಾಗಬಹುದೇ? ಕೃಷಿ, ಉದ್ಯೋಗ, ಕೈಗಾರಿಕೆ, ವಸತಿ, ವಾಹನ ಹಾಗೂ ಪೀಠೋಪಕರಣಗಳಿಗಾಗಿ ಬಳಸುವ ಕಟ್ಟಿಗೆ ಹಿಂಸೆ ಇಲ್ಲದೆ ಪಡೆಯಬಹುದೇ? ಗಿಡ ಮೂಲಿಕೆಯ ಔಷಧ, ರಬ್ಬರ್, ಜೇನು, ರೇಶ್ಮೆ ಹಿಂಸೆ ಇಲ್ಲದೆ ಪಡೆಯುವುದನ್ನು ಊಹಿಸಬಹುದೇ? ವ್ಯವಸಾಯ, ಸವಾರಿ ಮತ್ತು ಭಾರ ಹೇರಲು ಪ್ರಾಣಿಗಳನ್ನು ಬಳಸುವುದು ಹಿಂಸೆ ಅಲ್ಲವೆ? ಕೃಷಿಗಾಗಿ ಭೂಮಿ ಹದಗೊಳಿಸುವಾಗ ಅದೆಷ್ಟೋ ಜೀವಿಗಳ ಹತ್ಯೆ ಆಗುವುದು ಹಿಂಸೆ ಅಲ್ಲವೆ? ಕಾಳು ಕಡ್ಡಿ, ಹಣ್ಣು-ತರಕಾರಿಗಳನ್ನು ಬೆಳೆಸಿ ಮನೆ ಹಾಗೂ ಮಾರುಕಟ್ಟೆಗೆ ತಲಪಿಸುವ ಮುಂಚೆ ಕ್ರಿಮಿನಾಶಕಗಳನ್ನು ಸಿಂಪಡಿಸಿ ಅದೆಷ್ಟೋ ಕೋಟಿ ಕ್ರಿಮಿಗಳ ಹತ್ಯೆ ಮಾಡುವುದು ಹಿಂಸೆ ಅಲ್ಲವೆ? ಬೆಳೆಗಳನ್ನು ನಾಶಪಡಿಸುವ ಇಲಿ, ಹೆಗ್ಗಣ, ಮಂಗ ಮುಂತಾದ ಕಾಡು ಪ್ರಾಣಿಗಳ ಹತ್ಯೆ ನಡೆಸದೆ ಬೆಳೆಯನ್ನು ರಕ್ಷಿಸಬಹುದೇ? ತಿಗಣೆ, ಚಿಕ್ಕಾಡು, ಗುಂಗಾಡು, ನೊಣ ಇತ್ಯಾದಿ ಜೀವಿಗಳಿಂದ ಆಗುವ ತೊಂದರೆ ಹಾಗೂ ರೋಗಗಳಿಂದ ಪಾರಾಗಲು ಇವುಗಳನ್ನು ನಾಶಪಡಿಸದಿರಲು ಸಾಧ್ಯವೆ? ರೋಗಿಯ ಉಪಚಾರಕ್ಕಾಗಿ ಬಳಸುವ ಔಷಧ, ಗುಳಿಗೆ, ಚುಚ್ಚುಮದ್ದುಗಳಿಂದ ಅಸಂಖ್ಯಾತ ರೋಗಾಣುಗಳ ಹತ್ಯೆ- ಹಿಂಸೆ ಆಗುತ್ತದೆಂದು ರೋಗಿಗಳನ್ನು ಸಾಯಲು ಬಿಡಬಹುದೆ?

ದೇಶದ ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ದಿನನಿತ್ಯ ವೈಜ್ಞಾನಿಕ ಶಿಕ್ಷಣ, ಸಂಶೋಧನೆ ಔಷಧಗಳ ಪ್ರಯೋಗ ಇತ್ಯಾದಿಗಳಿಗಾಗಿ ಲಕ್ಷಾವಧಿ ಕಪ್ಪೆ, ಜೊಂಡಿಗ, ಗಿನಿಪಿಗ್ಸ್, ಮೊಲ, ಮಂಗ ಇತ್ಯಾದಿ ಜೀವಿಗಳ ಹತ್ಯೆ ನಿರಂತರ ನಡೆಯುತ್ತಲೇ ಇರುತ್ತದೆ. ಈ ಪ್ರಾಣಿ ಹಿಂಸೆಯಿಂದ ದೂರ ಉಳಿದು ಜ್ಞಾನಗಳಿಕೆ ಹಾಗೂ ವೈಜ್ಞಾನಿಕ ಪ್ರಗತಿ ಸಾಧಿಸಬಹುದೆ?

ಹುಚ್ಚುನಾಯಿ, ಸಿಂಹ, ಕರಡಿ, ಹುಲಿ ಇತ್ಯಾದಿ ಹಿಂಸಕ ಪ್ರಾಣಿಗಳು ಕೆಲವೊಮ್ಮೆ ಮನುಷ್ಯನ ಜೀವಕ್ಕೆ ಗಂಡಾಂತರಕಾರಿಯಾಗುತ್ತವೆ. ಇವುಗಳ ಬಗ್ಗೆ ಹಾಗೂ ಹಾವು, ಚೇಳು, ಪುಸ್ತಕಗಳನ್ನು ತಿಂದು ಹಾಕುವ ಗೆದ್ದಲು ಇತ್ಯಾದಿ ಜೀವಿಗಳ ಬಗ್ಗೆ ನಾವು ಯಾವ ವ್ಯಾವಹಾರಿಕ ಧೋರಣೆ ತಾಳಬೇಕು? ದರೋಡೆಕೋರರನ್ನು, ಕೊಲೆಗಡುಕರನ್ನು, ಅಪರಾಧಿಗಳನ್ನು ದಂಡಿಸದೆ ಸಭ್ಯ ಸುಸಂಸ್ಕೃತ ಸಮಾಜದ ನಿರ್ಮಾಣ ಸಾಧ್ಯವೆ?

ಮನುಷ್ಯ ಚಲನವಲನಕ್ಕಾಗಿ ಇಡುವ ಹೆಜ್ಜೆಯಿಂದ, ವಾಹನಗಳ ಗಾಲಿಯಿಂದ, ಕುಡಿಯುವ ನೀರಿನಿಂದ, ತಿನ್ನುವ ಆಹಾರದಿಂದ, ಉಪಯೋಗಿಸುವ ಔಷಧದಿಂದ,

ಉಸಿರಾಡುವ ಹವೆಯಿಂದ ಅಸಂಖ್ಯಾತ ಜೀವಿಗಳ ಹತ್ಯೆ ಆಗುತ್ತಲೇ ಇರುತ್ತದೆ. ಹಾಗಾದರೆ ಅಹಿಂಸೆಯ ಅತ್ಯುನ್ನತ ತತ್ವಾದರ್ಶವೆನ್ನಲಾಗುವ "ಅಹಿಂಸಾ ಮನು ಪರಮೋ ಧರ್ಮ"ದ ಪಾಲನೆಯಾಗಬೇಕಾದರೆ ಮಾನವಕುಲದ ನಿರ್ನಾಮ ಮನುಷ್ಯನಿಂದಲೇ ಆಗಬೇಕು. ಉಸಿರಾಡುವುದನ್ನು, ಕುಡಿಯುವುದನ್ನು, ತಿನ್ನುವುದನ್ನು, ರೋಗಿಯ ಉಪಚಾರವನ್ನು ತಕ್ಷಣ ನಿಲ್ಲಿಸಬೇಕು. ಯಾವ ವಿವೇಕಮತಿಯೂ ಯಾವ ಕಾಲದಲ್ಲಿಯೂ ಇದನ್ನು ಅನುಮತಿಸಲಾರ. ಹಾಗಾದರೆ ಅಹಿಂಸೆಯ ಈ ಉನ್ನತ ಸಿದ್ಧಾಂತದ ಪಾಲನೆ ಅವ್ಯಾವಹಾರಿಕ ಮತ್ತು ಅವೈಜ್ಞಾನಿಕವಾಗಿದ್ದು ಮಾನವ ಕೋಟಿಗೆ ಮಾರಕವಾಗಿದೆ.

ಮಾನವಕುಲದ ಹಿತಚಿಂತಕರಾದ ವಿವೇಕಮತಿಗಳು ಪ್ರಪಂಚದ ಪ್ರಗತಿಯಲ್ಲಿ ಪ್ರಕೃತಿದತ್ತ ಅನಿವಾರ್ಯ ಹಿಂಸೆ ಅಡಕವಾಗಿರುವುದನ್ನು ಕಾಣದಿರಲಾರರು. ಸಕಲ ಜೀವಿಗಳ ಜನಕ, ಸೃಷ್ಟಿಕರ್ತ ಪ್ರತಿಯೊಂದು ಜೀವಿಯ ಆಹಾರದ ವ್ಯವಸ್ಥೆಯನ್ನು ಮಾಡಿರುವನು. ಒಂದು ಜೀವಿಯನ್ನು ಇನ್ನೊಂದು ಜೀವಿಯ ಆಹಾರವಾಗಿ ನಿಶ್ಚಯಿಸಿದ್ದಾನೆ. ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದು ಬದುಕುತ್ತವೆ. ಹುಲಿ, ಕರಡಿ, ಸಿಂಹ ಮುಂತಾದುವುಗಳು- ಮೊಲ, ಚಿಗರೆ ಇತ್ಯಾದಿ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಆಕಳು, ಎಮ್ಮೆ, ಕುರಿ, ಒಂಟೆ, ಆನೆ ಇತ್ಯಾದಿ ಪ್ರಾಣಿಗಳು ಹುಲ್ಲು, ತಪ್ಪಲು ಹಾಗೂ ಸಸ್ಯಮೂಲದ ಆಹಾರ ಸೇವಿಸಿ ಬದುಕುತ್ತವೆ. ಈ ರೀತಿ ಸೃಷ್ಟಿಕರ್ತನು ಜಗತ್ತಿನಲ್ಲಿ ಪ್ರಾಣಿ, ಪಶು, ಪಕ್ಷಿ, ಮೀನು ಮತ್ತಿತರ ಜೀವಿಗಳಲ್ಲಿ ಪರಸ್ಪರ ಅತ್ಯಂತ ಸಮಂಜಸವಾದ ಸಂತುಲನೆಯನ್ನು ಕಾಪಾಡಿದ್ದಾನೆ. ಈ ಸಂತುಲನೆಯು ಸೃಷ್ಟಿಕರ್ತನು ಅವುಗಳಿಗೆ ನೀಡಿದ ಪ್ರಕೃತಿದತ್ತ ನಿಯಮ ಪಾಲನೆಯಿಂದ ಸಾಧ್ಯವಾಗಿದೆ. ಮಾನವನೂ ಈ ಸೃಷ್ಟಿಯ ಒಂದು ಅಂಗವಾಗಿದ್ದು, ಸೃಷ್ಟಿಕರ್ತನು ಅವನಿಗೆ ನೀಡಿದ ಮಾರ್ಗದರ್ಶನವನ್ನು ಗುರುತಿಸಿ ಸ್ವ ಇಚ್ಛೆಯಿಂದ ಅದನ್ನು ಪಾಲಿಸಿ ಪ್ರಪಂಚ ಮತ್ತು ಪ್ರಕೃತಿಯ ನಡುವಿನ ಶಾಂತಿ ಸಮತೋಲನವನ್ನು ರಕ್ಷಿಸುವುದರಲ್ಲೇ ಅವನ ಒಳಿತು ಅಡಕವಾಗಿದೆ.

ವಿಜ್ಞಾನ ಮತ್ತು ಪ್ರಕೃತಿಯ ತೀರ್ಪು

ವಿವಿಧ ಜೀವಿಗಳ ಶರೀರ ರಚನೆ, ಅಂಗಾಂಗಗಳ ಕಾರ್ಯವಿಧಾನ ಹಾಗೂ ಆಹಾರ ಸೇವನೆಯ ರೀತಿಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿದರೆ ಕೆಲವೊಂದು ವೈಜ್ಞಾನಿಕ ವಾಸ್ತವಿಕತೆಗಳು ಸ್ಪಷ್ಟವಾಗುತ್ತವೆ.

ಹುಲಿ, ಕರಡಿ, ಸಿಂಹ ಇತ್ಯಾದಿ ಮಾಂಸಾಹಾರಿ ಪ್ರಾಣಿಗಳ ಕಾಲಿನ ಉಗುರು, ಬಾಯಿ, ಹಲ್ಲು, ಜಠರ, ಕರುಳು ಇತ್ಯಾದಿ ಅಂಗಾಂಗಗಳು ಮತ್ತು ಈ ಪ್ರಾಣಿಗಳ ಶರೀರದಲ್ಲಿ ಉತ್ಪನ್ನವಾಗುವ ಪಾಚಕ ರಸಗಳು ಮಾಂಸಾಹಾರಕ್ಕಾಗಿಯೇ ಪೂರಕವಾಗಿವೆ. ಈ ಪ್ರಾಣಿಗಳಿಗೆ ಸಸ್ಯಾಹಾರ ದಕ್ಕದು. ಆದ್ದರಿಂದ ಈ ಪ್ರಾಣಿಗಳು ಪ್ರಕೃತಿದತ್ತವಾಗಿ ಬೇಟೆಯಾಡಿ ಮಾಂಸಾಹಾರವನ್ನೇ ಪಡೆದು ತಿನ್ನುತ್ತವೆ. ಅದೇ ರೀತಿ ಆಕಳು, ಕುರಿ, ಒಂಟೆ, ಆನೆ ಇತ್ಯಾದಿ ಪ್ರಾಣಿಗಳ ಅಂಗಾಂಗ ರಚನೆ ಹಾಗೂ ಪಾಚಕ ರಸಗಳು ಸಸ್ಯಾಹಾರ ಸೇವನೆಗೇ

ಪೂರಕವಾಗಿದ್ದು ಅವು ಅದನ್ನೇ ಸೇವಿಸುತ್ತವೆ. ಈ ಪ್ರಾಣಿಗಳು ಮಾಂಸಾಹಾರ ತಿನ್ನಲಾರವು ಮತ್ತು ಪಚನಗೊಳಿಸಲಾರವು. ಈಗ ಮನುಷ್ಯನ ಕೈ, ಬಾಯಿ, ಹಲ್ಲು, ಜಠರ ಕರುಳುಗಳ ರಚನೆ ಹಾಗೂ ಶರೀರದಲ್ಲಿ ಉತ್ಪನ್ನವಾಗುವ ಪಾಚಕ ರಸಗಳನ್ನು ಗಮನಿಸೋಣ. ಅವು ಸಸ್ಯಾಹಾರ ಹಾಗೂ ಮಾಂಸಾಹಾರಗಳೆರಡನ್ನೂ ತಿನ್ನಲು ಮತ್ತು ಪಚನಗೊಳಿಸಲು ಪೂರಕವಾದುದೆಂದು ಕಂಡು ಬರುತ್ತದೆ. ಅನಾದಿ ಕಾಲದಿಂದಲೂ ಮನುಷ್ಯನು ಎರಡೂ ತರದ ಆಹಾರ ಸೇವಿಸುತ್ತ ಬಂದಿರುವುದು ಐತಿಹಾಸಿಕ ಸತ್ಯವಾಗಿದೆ, ಪ್ರಕೃತಿಗೆ ಅನುಗುಣವಾಗಿದೆ, ಆರೋಗ್ಯಕ್ಕೆ ಪೂರಕವಾಗಿದೆ ಮತ್ತು ಅವನ ಈ ವರ್ತನೆಗೆ ಬಹುತೇಕ ಜಾಗತಿಕ ಧರ್ಮಗಳ ಸಮರ್ಥನೆಯೂ ಇದೆ. ಮನುಷ್ಯನಿಗೆ ಪ್ರಕೃತಿದತ್ತವಾಗಿ ನೀಡಲಾದ ಬುದ್ಧಿ ಮತ್ತು ವಿವೇಕವನ್ನು ಬಳಸಿ ಅವನು ವಿವಿಧ ತರದ ರುಚಿಕರ ಹಾಗೂ ಆರೋಗ್ಯಕರ ಆಹಾರವನ್ನು ತಯಾರಿಸಿ ಉಪಯೋಗಿಸುತ್ತ ಬಂದಿದ್ದಾನೆ.

ಪ್ರಕೃತಿಯ ಇತರ ನಿದರ್ಶನಗಳೆಂದರೆ ತಾಯಿಯ ಗರ್ಭದಲ್ಲಿದ್ದಾಗ ತಾಯಿಯ ರಕ್ತವು ಶಿಶುವಿನ ಆಹಾರವಾಗಿತ್ತು. ಜನನದ ನಂತರ ತಾಯಿಯ ಎದೆ ಹಾಲು ಆಹಾರವಾಗುತ್ತದೆ. ಕೋಳಿಮರಿಗೆ ತತ್ತಿಯಿಂದ ಹೊರಬರುವ ವರೆಗೆ ತತ್ತಿಯಲ್ಲಿಯ ಅಂಶಗಳೇ ಆಹಾರ. ಭೂಮಿಯಲ್ಲಿ ಬಿತ್ತಿದ ಬೀಜ ಮೊಳಕೆಯೊಡೆದು ಎಲೆಗಳಾಗಲು ಅದು ಬೀಜದಲ್ಲಿರುವ ಘಟಕಗಳನ್ನೇ ಆಹಾರವಾಗಿಸುತ್ತವೆ. ಅನೇಕ ಸಸ್ಯಗಳು ಮಾಂಸಾಹಾರಿಗಳಾಗಿವೆ. ಈ ಸಸ್ಯಗಳ ರಚನೆ ಕ್ರಿಮಿಕೀಟಗಳನ್ನು ಬೇಟೆಯಾಡಿ ಪಚನಗೊಳಿಸುವ ಸಾಮರ್ಥ್ಯ ಪ್ರಕೃತಿದತ್ತವಾಗಿಯೇ ಪಡೆದಿದೆ. ಈ ಸಸ್ಯಗಳನ್ನು ಮಾಂಸಾಹಾರಿ ಸಸ್ಯಗಳೆಂದು (Carnivarus Plants) ಕರೆಯಲಾಗುತ್ತದೆ. ಇದರ ಕೆಲವು ಉದಾಹರಣೆಗಳೆಂದರೆ, ಯುಟ್ರಿಕುಲೇರಿಯಾ- ಇದು ನೀರಿನಲ್ಲಿರುವ ಸಸ್ಯವಾಗಿದ್ದು ಕ್ರಿಮಿ-ಕೀಟಗಳನ್ನು ತನ್ನ ಆಹಾರವಾಗಿಸುತ್ತದೆ. ನೆಫೆನ್‌ಥಿಸ್(Nepenthes), ಪಿಚರ ಪ್ಲಾಂಟ್ಸ್(Pijcher Plants), ವೆನಸ್ ಪ್ಲಾಟ್ರ್ಯಾಪ್(Venus Flytrap) ಮತ್ತು ಡ್ರಾಸೇರಾ (Drasera).

ಅನೇಕ ಕ್ರಿಮಿಗಳು ಮನುಷ್ಯ, ಪ್ರಾಣಿ, ಪಕ್ಷಿ ಹಾಗೂ ಸಸ್ಯಗಳನ್ನು ಅವಲಂಬಿಸಿ ಆಹಾರ ಪಡೆಯುತ್ತವೆ. ಕೆಲವು ಸಲ ಇವು ವಿವಿಧ ರೋಗಗಳಿಗೂ ಕಾರಣವಾಗುವುವು. (Viras, Bacterial, Fungal and Parasitic diseases). ಕೆಲವು ಕ್ರಿಮಿಗಳು ಸಸ್ಯಗಳ ಬೇರಿನಿಂದ ಆಹಾರ ಪಡೆದರೆ, ಸಸ್ಯಗಳಿಗೆ ಬೇಕಾದ ನೈಟ್ರೋಜನ್, ಹವೆಯಿಂದ ಪಡೆದು ಸಸ್ಯಗಳಿಗೆ ನೀಡುತ್ತವೆ. ಈ ರೀತಿ ಪರಸ್ಪರ ಅವಲಂಬಿಸಿ(Symbiosis) ಬಾಳುತ್ತವೆ.

ಆಹಾರದ ವಿಷಯದಲ್ಲಿ ಪ್ರಕೃತಿ ಮತ್ತು ವಿಜ್ಞಾನದ ತೀರ್ಪು ಹೀಗೆ ವಿವಿಧ ಜೀವಿಗಳಿಗಾಗಿ ಅವುಗಳ ಪ್ರಕೃತಿಗೆ ತಕ್ಕಂತೆ ಪ್ರದರ್ಶಿತವಾಗುತ್ತಿದ್ದರೂ ಅಹಿಂಸಾವಾದಿಗಳು ಮನುಷ್ಯ ಮಾತ್ರ ತನ್ನ ಆಹಾರವನ್ನು ಕೇವಲ ಸಸ್ಯಗಳಿಗೆ ಸೀಮಿತಗೊಳಿಸಬೇಕೆನ್ನುತ್ತಾರೆ. ತಮ್ಮ ಈ ನಿಲುವಿಗೆ ಯಾವುದೇ ಸ್ಪಷ್ಟ ಐತಿಹಾಸಿಕ, ವೈಜ್ಞಾನಿಕ, ನೈಸರ್ಗಿಕ, ವೈಚಾರಿಕ ಮತ್ತು ವ್ಯಾವಹಾರಿಕವಾದಂತಹ ಆಧಾರ ಕೊಡುವುದಿಲ್ಲ. ಪ್ರಾಣಿಗಳಲ್ಲಿ ಕೆಲವನ್ನು ಪವಿತ್ರ

ಹಾಗೂ ಪೂಜ್ಯವೆಂದು ಹೆಸರಿಸಿ ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ವಿಶೇಷವಾಗಿ ಅಲ್ಪಸಂಖ್ಯಾತರು ಮತ್ತು ದಲಿತರ ಮಾನ, ಪ್ರಾಣ ಹಾಗೂ ಸೊತ್ತಿನ ಹರಣಕ್ಕಾಗಿ ಹಿಂಸೆಯ ಕ್ರೂರ ತಾಂಡವ ನೃತ್ಯವನ್ನು ಅಹಿಂಸೆಯ ಹೆಸರಲ್ಲಿ ಇತಿಹಾಸದುದ್ದಕ್ಕೂ ಮಾಡುತ್ತಾ ಬಂದಿದ್ದಾರೆ. ಮುಗ್ಧ ಜನರ ಭಾವನೆಗಳನ್ನು ತಮ್ಮ ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಹೇಯ ಸ್ವಾರ್ಥಕ್ಕಾಗಿ ಬಳಸುತ್ತ ಬಂದಿರುವ ಉದಾಹರಣೆಗಳಿಗೆ ಕೊರತೆ ಇಲ್ಲ.

ಆರ್ಥಿಕ ದೃಷ್ಟಿಕೋನ

ಪ್ರಾಣಿಹತ್ಯೆಯ ನಿಷೇಧದ ಮೂಲಕ ಮಾನವನ ಭೋಜನ ಸಾಮಗ್ರಿಗಳಿಂದ ಮಾಂಸವನ್ನು ದೂರವಿರಿಸಿದರೆ ಆಹಾರದ ಸಮಸ್ಯೆ ಗಂಭೀರ ರೂಪ ತಾಳಬಹುದು. ಒಂದೆಡೆ ದೇಶದ ಆಹಾರ ಭಂಡಾರಗಳು ತುಂಬಿದ್ದರೂ, ಲಕ್ಷಾವಧಿ ಟನ್ ಆಹಾರ ಸರಿಯಾದ ಮೇಲ್ವಿಚಾರಣೆ ಇಲ್ಲದೆ ಗೋದಾಮುಗಳಲ್ಲೇ ನಾಶವಾಗುತ್ತಿದೆ. ಇಲಿ, ಹೆಗ್ಗಣಗಳ ಪಾಲಾಗುತ್ತಿದೆ. ಇನ್ನೊಂದು ಕಡೆ, ಅದೆಷ್ಟೋ ಜನ ಹಸಿವೆಯಿಂದ ಸಾಯುವ ಸುದ್ದಿ ಪತ್ರಿಕೆಗಳ ಶೀರ್ಷಿಕೆ ಪಡೆಯುತ್ತಿವೆ. ಪಾರ್ಲಿಮೆಂಟಿನಲ್ಲಿ ಧ್ವನಿ ಮೊಳಗುತ್ತಿದೆ. ದೇಶದಲ್ಲಿ 300 ಮಿಲಿಯ ಜನ ಬಡತನ ರೇಖೆಯ ಕೆಳಗೆ ಜೀವನ ಸಾಗಿಸುತ್ತಿದ್ದು ಅವರಿಗೆ ಒಂದು ಹೊತ್ತಿನ ಊಟವೂ ಸಿಗುತ್ತಿಲ್ಲ. ಈ ಜನರ ಪೌಷ್ಟಿಕ ಆಹಾರದ ಮಾತಂತೂ ದೂರದ ವಿಷಯ. ಅವರ ಕೈಯಿಂದ ಕಡಿಮೆ ದರದಲ್ಲಿ ಸಿಗುವ ಮಾಂಸವನ್ನೂ ಕಸಿದುಕೊಂಡರೆ ಅವರ ಬದುಕು ಮತ್ತು ಆರೋಗ್ಯದ ಸಮಸ್ಯೆ ಮತ್ತಷ್ಟು ಜಟಿಲವಾಗದಿರಲಾರದು. ಇವರೆಲ್ಲರಿಗೂ ಸಸ್ಯಮೂಲದ ಪೌಷ್ಟಿಕ ಆಹಾರ ಎಲ್ಲಿಂದ ದೊರಕಿಸುವುದು? ಅಮೇರಿಕಾ ಹಾಗೂ ಯೂರೋಪಿಯನ್ ದೇಶಗಳಲ್ಲಿ ಪ್ರಾಣಿ ಸಾಕಣೆಕೆ ಒಂದು ಬಹುದೊಡ್ಡ ಉದ್ದಿಮೆಯಾಗಿದ್ದು, ಲಕ್ಷಾವಧಿ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಆ ದೇಶಗಳಲ್ಲಿ ಹಾಲು-ಹೈನಿನ ಕೊರತೆಯಿಲ್ಲ, ನಿರುಪಯುಕ್ತ ಪ್ರಾಣಿಯನ್ನು ಸಾಕುವ ಸಮಸ್ಯೆ ಇಲ್ಲ. ಅಲ್ಲಿ ಮಾಂಸದ ಆಂತರಿಕ ಬಳಕೆಯೂ ಹೆಚ್ಚಿಗಿದ್ದು, ಹೊರದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ಮಾಂಸ, ತಾಜಾ ಮಾಂಸಕ್ಕಾಗಿ ಪ್ರಾಣಿ ಮತ್ತು ಹಾಲು-ಹೈನಿನ ಖಾದ್ಯ ಪದಾರ್ಥಗಳನ್ನು ರಫ್ತು ಮಾಡುತ್ತಾ ತಮ್ಮ ದೇಶದ ಬೊಕ್ಕಸ ತುಂಬಿಸುತ್ತಾರೆ. ಪ್ರಾಣಿಗಳ ಉಣ್ಣೆ, ಚರ್ಮ, ಎಲುಬು, ಕರುಳು ಮತ್ತಿತರ ಅಂಗಾಂಗಗಳಿಂದ ಹೊದಿಕೆ, ಚೀಲ, ಸೂಟ್‌ಕೇಸ್, ಪಾದರಕ್ಷೆ, ಕರಕುಶಲ ವಸ್ತು, ಗೊಬ್ಬರ, ಔಷಧ ಇತ್ಯಾದಿಗಳನ್ನು ತಯಾರಿಸುತ್ತಾರೆ. ಅನೇಕ ದೇಶಗಳಲ್ಲಿ ಈ ಉದ್ದಿಮೆ ಆರ್ಥಿಕ ಅಭಿವೃದ್ಧಿಯ ಬೆನ್ನೆಲುಬಾಗಿದೆ.

ಹಿಮಾಚ್ಛಾದಿತ ಶೀತವಲಯ (ಗ್ರೀನ್‌ಲ್ಯಾಂಡ್, ಸೈಬೀರಿಯಾ ಇತ್ಯಾದಿ) ಮತ್ತು ಸಮುದ್ರದ ದಡದಲ್ಲಿ ವಾಸಿಸುವ ನಿವಾಸಿಗಳಿಗೆ ಮೀನು ಬದುಕಿನ ಆಧಾರ. ಅಲ್ಲಿ ಬೇರೆ ವ್ಯವಸಾಯ ನಡೆಯಲಾರದು. ವೇಲ್, ಸೀಲ್ ಮತ್ತು ದಾಲರಾಸ ಮೀನುಗಳಿಂದ ಆಹಾರ, ಬಟ್ಟೆ, ಟೋಪ್ಪಿ, ಟೆಂಟ್ ಇತ್ಯಾದಿಗಳನ್ನು ತಯಾರಿಸುತ್ತಾರೆ. ಸೀಲ್ ಮೀನಿನ ಕೊಬ್ಬನ್ನು

ದೀಪ ಉರಿಸಲು, ಅಡುಗೆ ಉರವಲಾಗಿ ಬಳಸುತ್ತಾರೆ. ಒಣ ಮೀನಿನ ವ್ಯಾಪಾರ ಮಾಡುತ್ತಾರೆ. ಮೀನನ್ನು ಅವರ ಬದುಕಿನಿಂದ ಸರಿಸಿದರೆ ಅವರ ಬದುಕೇ ದುಸ್ತರವಾದೀತು.

ಚೀನಾ, ಇರಾನ್, ಅರಬಸ್ತಾನ ಮತ್ತು ರಾಜಸ್ತಾನಗಳಲ್ಲಿಯ ವಿಶಾಲ ಮರುಭೂಮಿಗಳಲ್ಲಿ ಬೇಸಾಯ ಮಾಡಲಾಗುವುದಿಲ್ಲ. ಮಾಂಸಾಹಾರ ವರ್ಜಿಸಿದರೆ ಅಲ್ಲಿಯ ನಿವಾಸಿಗಳು ಜೀವಂತವಾಗಿರುವುದು ಕಠಿಣವಾಗುತ್ತದೆ.

ಮಾಂಸಾಹಾರವನ್ನು ನಿಷೇಧಿಸಿದರೆ ಖಾದ್ಯ ಪದಾರ್ಥಗಳ ಕೊರತೆಯಿಂದ ಆಹಾರದ ಸಮಸ್ಯೆ ಗಂಭೀರವಾಗುವುದಲ್ಲದೆ ಕೋಟಿಗಟ್ಟಲೆ ನಿರುಪಯುಕ್ತ ಜಾನುವಾರುಗಳ ಆಹಾರ, ವಸತಿ, ಪಾಲನೆ ಪೋಷಣೆಯ ಭಯಂಕರ ಸಮಸ್ಯೆ ಉದ್ಭವಿಸುತ್ತದೆ. ಈ ನಿರುಪಯುಕ್ತ ಪ್ರಾಣಿಗಳನ್ನು ವರ್ಷಾನುಗಟ್ಟಲೆ ಸಾಕುವ ಹೊಣೆಯನ್ನು ಯಾರು ಹೊರಬೇಕು? ಜನರು ಇದನ್ನು ಪುಡಿಕಾಸಿಗೆ ಮಾರುತ್ತಾರೆ, ಇಲ್ಲವೆ ಬೀದಿಗಟ್ಟಿ ಬಿಡುತ್ತಾರೆ. ಹಸಿದ ಪ್ರಾಣಿಗಳು ಯಾರದಾದರೂ ಹೊಲಕ್ಕೆ ಹೊಕ್ಕು ಬೆಳೆ ನಾಶಮಾಡುತ್ತವೆ, ಶಿಕ್ಷೆಗೊಳಗಾಗುತ್ತವೆ, ಬೀದಿಯಲ್ಲಿ ಬಿದ್ದು, ತಿಪ್ಪೆಕಸ ತಿಂದು, ರಸ್ತೆಗೆ ಅಡತಡೆಯಾಗಿ, ಪೆಟ್ಟು ತಿಂದು, ಸೊರಗಿ, ಸಣಕಲಾಗಿ ಅಲ್ಲಿಯೇ ಪ್ರಾಣ ಬಿಡುವುದೂ ಉಂಟು.

ಪ್ರಾಣಿದಯೆಯ ಬಗ್ಗೆ ಮಾತನಾಡುವವರು, ಪೂಜ್ಯವೆಂದು ಪೂಜಿಸುವವರು ಈ ನಿರುಪಯುಕ್ತ ಪ್ರಾಣಿಗಳ ಹೊಣೆ, ತಾವೇ ಹೊರುವುದನ್ನು ಬಿಟ್ಟು ಸರಕಾರದ ಮೇಲೆ ಈ ಭಾರ ಹೇರುತ್ತಾರೆ. ನಮ್ಮ ದೇಶದಲ್ಲಿ ಕೋಟ್ಯಂತರ ಜನ ನಿರುದ್ಯೋಗಿಗಳು, ನಿರಾಶ್ರಿತರು, ಭಿಕ್ಷುಕರು, ಹೊಟ್ಟೆಗೆ ಹಿಟ್ಟಿಲ್ಲದೆ, ಮೈಗೆ ಬಟ್ಟೆಯಿಲ್ಲದೆ, ಮಲಗಲು ಮನೆಯಿಲ್ಲದೆ, ಮನಕ್ಕೆ ಶಾಂತಿ ಇಲ್ಲದೆ, ಮುಖಕ್ಕೆ ಕಾಂತಿ ಇಲ್ಲದೆ ಬಳಲುತ್ತಿರುವ, ಅಲೆಯುತ್ತಿರುವ ಮನುಷ್ಯರ ಹೊಣೆಯನ್ನೇ ಹೊರದ ಸರಕಾರ ನಿರುಪಯುಕ್ತ ಪ್ರಾಣಿಗಳ ಹೊರೆ ಹೊತ್ತೀತೆ? ಸ್ವಾತಂತ್ರ್ಯ ದೊರೆತು 56 ವರ್ಷಗಳು ಸಂದರೂ 3ಕೋಟಿ ಜನರಿಗೆ ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲ. 40ಕೋಟಿ ಜನರು ನಿರಕ್ಷರಿಗಳು. ಶಾಲೆಯ ಮೆಟ್ಟಲು ಹತ್ತದವರು. ನಮ್ಮ ದೇಶದಲ್ಲಿ, ಜಗತ್ತಿನಲ್ಲೇ ಅತಿಹೆಚ್ಚು ಜನ- ದೂರೀಕರಿಸಬಹುದಾದ ಅಂಧತ್ವ(ಪೊರೆರೋಗ)ದಿಂದ ಬಳಲುತ್ತಿರುವಾಗ ಆದ್ಯತೆ ನೀಡಬೇಕಾದದ್ದು, ಜನರ ಬೆವರಿನ ತೆರಿಗೆ ಹಣ ಸರಕಾರ ಬಳಸಬೇಕಾದದ್ದು ಮನುಷ್ಯರ ಮೂಲಭೂತ ಆವಶ್ಯಕತೆಗಳಿಗೋ, ಅಥವಾ ನಿರುಪಯುಕ್ತ ಪ್ರಾಣಿಗಳ ಊಟ, ವಸತಿ, ಉಪಚಾರ ಅಂತ್ಯಕ್ರಿಯೆ ಇತ್ಯಾದಿಗಳಿಗಾಗಿಯೋ? ದೇಶದ ಹಿತಚಿಂತಕರು ಗಹನವಾಗಿ ಚಿಂತಿಸಬೇಕಾಗಿದೆ. ಚರ್ಮನಿರ್ಯಾತ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್.ಎಸ್. ಕುಮಾರ್‌ರವರು ಇತ್ತೀಚೆಗೆ (Vijaya Times - 21.08.03) ಸರಕಾರದ ಗೋಹತ್ಯೆ ನಿಷೇಧ ಪ್ರಯತ್ನಕ್ಕೆ ಪ್ರತಿಕ್ರಿಯಿಸುತ್ತಾ ಹೀಗೆ ಹೇಳಿದ್ದಾರೆ: "ಇದರಿಂದ 700 ಮಿಲಿಯನ್ ಡಾಲರ್ ಚರ್ಮದ ಸರಕುಗಳ ನಿರ್ಯಾತದಲ್ಲಿ ನಷ್ಟ ಆಗಲಿದ್ದು, ಚರ್ಮದ ಉದ್ದಿಮೆಗೆ ಸಂಬಂಧಿತ 15ಲಕ್ಷ ಜನರ ಜೀವನ ಇದರಿಂದ ಪ್ರಭಾವಿತವಾಗಲಿದೆ. ಈಗ ಈ ಉದ್ದಿಮೆಗೆ ಬೇಕಾದ 60% ದೇಶದಲ್ಲೇ ಲಭ್ಯ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಿ

ಈ ಚರ್ಮ ಆಮದು ಮಾಡುವುದು ಅಸಾಧ್ಯ." ಜಗತ್ತಿನ 60% ಆಕಳುಗಳು ನಮ್ಮ ದೇಶದಲ್ಲಿವೆ. ನಮ್ಮ ಉದ್ದಿಮೆಗೆ ಬೇಕಾದ ಅತ್ಯುತ್ತಮ ಚರ್ಮ ನಮ್ಮ ದೇಶದಲ್ಲೇ ಲಭ್ಯವೆಂದು ಭಾರತೀಯ ಚರ್ಮ ಸರಕು ಸಂಸ್ಥೆಯ ಅಧ್ಯಕ್ಷ ಎಂ.ವಿ. ಕುಲಕರ್ಣಿಯವರು ತಿಳಿಸಿದ್ದಾರೆ.

ಸ್ವಾತಂತ್ರ್ಯದ ನಂತರ ದೇಶದಲ್ಲಿ ಕಾಡು ಆಕಳ(ನೀಲದನ) ಹತ್ಯೆಯನ್ನು ಗೋಹತ್ಯೆ ಎಂದು ಸಾರಿ ಕಾಡು ಆಕಳನ್ನು ಬೇಟೆಯಾಡುವವರನ್ನು ಬೇಟೆಯಾಡಲಾಯಿತು. ಇದರಿಂದ ಕಾಡು ಆಕಳ ಸಂಖ್ಯೆ ವಿಪರೀತ ಬೆಳೆದು ಅವು ನಾಡಿನ ಗದ್ದೆಗಳನ್ನೇ ಧ್ವಂಸಗೊಳಿಸ ತೊಡಗಿದವು. ರೈತರ ಚೀತ್ಕಾರ ಮುಗಿಲು ಮುಟ್ಟಿದಾಗ ಕಾಡು ಆಕಳನ್ನು ನೀಲ ಕುದುರೆ ಎಂದು ಸಾರಿ ಬೇಟೆಯಾಡಲು ಅನುಮತಿಸಲಾಯಿತು. ಕೇವಲ ಒಂದು ಕಾಡುಪ್ರಾಣಿಯ ಬೇಟೆಯ ನಿಷೇಧದಿಂದ ನಮ್ಮ ಅವಸ್ಥೆ ಹೀಗಾದರೆ, ಉಳಿದೆಲ್ಲ ಪ್ರಾಣಿಗಳ ಬೇಟೆ ಹಾಗೂ ಉಪಯೋಗ ನಿಷೇಧಿಸಿದರೆ ಆಗುವ ಅನಾಹುತದ ಬಗ್ಗೆ ಊಹಿಸುವುದೂ ಕಷ್ಟ. ನಮ್ಮ ದೇಶದಲ್ಲಿ ಹಾವು, ಇಲಿ, ಹಂದಿ ಮತ್ತಿತರ ಅನೇಕ ಜೀವಿಗಳೂ ಪ್ರಾಣಿಗಳೂ ವಿವಿಧ ಕಾರಣಕ್ಕಾಗಿ ಪಾವಿತ್ರ್ಯತೆಯನ್ನು ಪಡೆದಿವೆ. ಆಸ್ತಿಕ್ಯ ಹಾಗೂ ಧಾರ್ಮಿಕ ಭಾವನೆಯ ವಿಷಯವೆಂದು ಸಾರಿ ಬಂದ್‌ಗೆ ಕರೆ ನೀಡುವ, ಬೀದಿಗಿಳಿಯುವ, ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ಧ್ವಂಸಗೊಳಿಸುವ, ದಲಿತರು ಹಾಗೂ ಅಲ್ಪ ಸಂಖ್ಯಾತರನ್ನು ಹಿಂಸಿಸುವ ಸಂಸ್ಕೃತಿ ಇದೇ ರೀತಿ ಮುಂದುವರಿದರೆ ದೇಶದಲ್ಲಿ ಶಾಂತಿ-ಪ್ರಗತಿ ಮರೀಚಿಕೆಯಾಗಿಯೇ ಉಳಿದೀತು. ಮನುಷ್ಯರ ಮೂಲಭೂತ ಸಮಸ್ಯೆಗಳ ಪರಿಹಾರ ಕನಸಾಗಿಯೇ ಉಳಿದೀತು. ನಿರುಪಯುಕ್ತ ಪ್ರಾಣಿಗಳ ಸಮಸ್ಯೆಯ ಸೂಕ್ತ ಪರಿಹಾರ, ಯಾರು ಶ್ರದ್ಧಾಳುಗಳಾಗಿದ್ದಾರೋ ಅವರು ತಮ್ಮ ಶ್ರದ್ಧೆಗಾಗಿ ಒಂದಿಷ್ಟು ಹೊಣೆಯನ್ನು ತಾವೇ ಹೊರಬೇಕು, ಇಲ್ಲವೆ ಶ್ರದ್ಧೆ ಇಲ್ಲದ ಜನರಿಗೆ ಅವರವರ ಶ್ರದ್ಧೆಯಂತೆ ಪ್ರಾಣಿಗಳೊಂದಿಗೆ ವ್ಯವಹರಿಸುವ ಮುಕ್ತ ಅವಕಾಶ ಕೊಡಬೇಕು. ಯಾರೂ ತನ್ನ ಶ್ರದ್ಧೆಯನ್ನು ಇತರರ ಮೇಲೆ ಒತ್ತಾಯ ಪೂರ್ವಕ ಹೇರಬಾರದು.

❖❖❖

ಪ್ರಾಣಿ ಹತ್ಯೆ- ಒಂದು ಚಿಂತನೆ

ಪ್ರಾಣಿಹತ್ಯೆಯನ್ನು ಕ್ರೂರತೆ ಎಂದು ವಾದಿಸುವವರು ಮಾಡುವ ತಪ್ಪೆಂದರೆ ಮನುಷ್ಯ ಹಾಗೂ ಪ್ರಾಣಿಗಳನ್ನು ಸಮಾನ ಜೀವಿಗಳೆಂದು ಪರಿಗಣಿಸಿ ವ್ಯವಹರಿಸುವುದು. ಇದೇ ಕಾರಣಕ್ಕಾಗಿ ಅವರು ಪ್ರಾಣಿವಧೆ ಮತ್ತು ಮಾಂಸಾಹಾರವನ್ನು ವಿರೋಧಿಸುತ್ತಾರೆ. ಈ ಜಗತ್ತಿನ ಸೃಷ್ಟಿ ಹಾಗೂ ಇದರಲ್ಲಿ ಮನುಷ್ಯನ ನೈಜ ಸ್ಥಾನದ ಬಗ್ಗೆ ಇರುವ ಅವರ ಅಜ್ಞಾನವೇ ಇದಕ್ಕೆ ಕಾರಣ. ಈ ಜಗತ್ತಿನ ಸೃಷ್ಟಿಯ ಉದ್ದೇಶವು ಪ್ರಾಣಿಗಳನ್ನು ಹುಟ್ಟಿಸುವುದಾಗಿರದೆ ಮನುಷ್ಯನೇ ಈ ಸೃಷ್ಟಿಯ ಕೇಂದ್ರ ಬಿಂದುವಾಗಿದ್ದು ಸೃಷ್ಟಿಯಲ್ಲೇ ಶ್ರೇಷ್ಠ ಜೀವಿಯಾಗಿದ್ದಾನೆ. ಮನುಷ್ಯನನ್ನು ಈ ಭೂಮಂಡಲದಿಂದ ಬೇರ್ಪಡಿಸಿ ಊಹಿಸಿದರೆ ಈ ಜಗತ್ತು ಶೂನ್ಯ, ಅರ್ಥಹೀನ ಹಾಗೂ ನಿಸ್ತೇಜವಾಗುತ್ತದೆ. ಈ ಜಗತ್ತಿನ ಯುಕ್ತಿಪೂರ್ಣ ಸುವ್ಯವಸ್ಥೆ, ಹಗಲು-ರಾತ್ರಿಗಳ ಬದಲಾವಣೆ, ಋತುಗಳ ಪುನರಾವರ್ತನೆ, ಸಾಗರ, ಸರೋವರ, ನದಿ-ನಾಲೆ, ಗಿಡ-ಗಂಟಿ, ಹೂವು-ಹಣ್ಣು, ಪ್ರಾಣಿ-ಪಕ್ಷಿಗಳೆಲ್ಲದರ ಅದ್ಭುತ ರಚನೆ ಹಾಗೂ ಸೌಂದರ್ಯ ಅರ್ಥಹೀನವಾಗುತ್ತದೆ. ಈ ಎಲ್ಲ ಅದ್ಭುತಗಳನ್ನು ಕಂಡು ಕೊಂಡಾಡುವ, ಈ ಅದ್ಭುತಗಳ ಹಿಂದಿರುವ ಸೃಷ್ಟಿಕರ್ತನನ್ನೂ ಅವನ ಈ ಎಲ್ಲ ದೃಷ್ಟಾಂತಗಳನ್ನೂ ಕಂಡು ಗುರುತಿಸುವ ವಿವೇಕಪೂರ್ಣ ಜೀವಿ ಮನುಷ್ಯನನ್ನು ಬಿಟ್ಟು ಬೇರಾವುದಾದರೂ ಸೃಷ್ಟಿಗಳಲ್ಲಿದೆಯೆ? ಭೂಮಿ ಆಕಾಶದಲ್ಲಿರುವುದೆಲ್ಲ ಮನುಷ್ಯನಿಗಾಗಿ ನೀಡಿದ ಅಗಣಿತ ಅನುಗ್ರಹಗಳು. ಈ ಅನುಗ್ರಹಗಳನ್ನು ಪಡೆದು, ಅನುಗ್ರಹಿಸಿದವನ ಆಜ್ಞಾನುಸಾರ ವಿಧೇಯ, ಕೃತಜ್ಞತೆಯ ಜೀವನ ಸಾಗಿಸುವುದೇ ಮನುಷ್ಯ ಜೀವನದ ಉದ್ದೇಶ. ಇದುವೇ ಸಮಸ್ತ ಮಾನವ ಸಮಸ್ಯೆಗಳಿಗೆ ಪರಿಹಾರ. ಇದರಲ್ಲೇ ಮಾನವ ಕಲ್ಯಾಣ ಅಡಕವಾಗಿದೆ.

ಎಲ್ಲ ಧರ್ಮಗಳಲ್ಲಿಯೂ ಸೃಷ್ಟಿಕರ್ತನನ್ನು ದಯಾಮಯ ಹಾಗೂ ಕರುಣಾಳುವೆಂದು ಸಾರಿ ಹೇಳಲಾಗಿದೆ. ಒಂದು ವೇಳೆ ಪ್ರಾಣಿವಧೆ ಹಿಂಸೆಯಾಗಿದ್ದರೆ ಇಂತಹ ಆದೇಶವನ್ನು ದಯೆಯ ನಿಧಿಯಾಗಿರುವ ಆ ದೇವನು ನೀಡುವುದಾದರೂ ಹೇಗೆ? ನಮ್ಮ ಹಿಂಸೆಯ ಕಲ್ಪನೆಯೇ ವಾಸ್ತವದಲ್ಲಿ ಸರಿಯಲ್ಲ. ಸತ್ಯ ಮತ್ತು ವಾಸ್ತವಿಕತೆಯೊಂದಿಗೆ ಅದಕ್ಕೆ ಯಾವ ಸಂಬಂಧವೂ ಇಲ್ಲ. ಯಾವ ನೋವಿನ ಹಿಂದೆ ದೊಡ್ಡ ಯುಕ್ತಿ ಹಾಗೂ ಮಹದುದ್ದೇಶ ಅಡಕವಾಗಿದೆಯೋ ಅದನ್ನೂ ಹಿಂಸೆಯೆನ್ನಲಾಗದು. ರೋಗಗ್ರಸ್ತ ಮಗುವಿಗೆ ಹಡೆದ ತಾಯಿಯಿಂದ ಚುಚ್ಚುಮದ್ದಿನ ಉಪಚಾರ ಹಿಂಸೆಯೆ? ಕೊಳೆತ ಕಾಲು, ಬೆರಳು ಇತ್ಯಾದಿಗಳ ಶಸ್ತ್ರಚಿಕಿತ್ಸೆ ಹಿಂಸೆಯೆ? ತೋಟಗಾರ ತನ್ನ ತೋಟದ ಬೆಳೆ ಹಾಗೂ ಹೂಬಳ್ಳಿಗಳ ಮಧ್ಯೆ

ಬೆಳೆದ ಹುಲ್ಲು, ಮುಳ್ಳು, ಮುಂತಾದ ಕಳೆಗಳನ್ನು ಕಿತ್ತೊಗೆದರೆ ಅದು ಹಿಂಸೆಯೆ? ಕ್ರೂರತೆಯೆ? ಈ ಕೃತ್ಯಗಳು ಬಾಹ್ಯ ರೂಪದಲ್ಲಿ ಹಿಂಸೆ ಎನಿಸಿದರೂ ಇವುಗಳ ಹಿಂದೆ ದಯೆ, ಕರುಣೆ, ನ್ಯಾಯ ಮತ್ತು ಕ್ಷೇಮಾಭಿಲಾಷೆ ಅಡಕವಾಗಿರುವುದನ್ನು ಯಾರೂ ಅಲ್ಲಗಳೆಯಲಾರರು. ಪ್ರಾಣಿವಧೆಯ ಹಿಂದೆ ಸೃಷ್ಟಿಕರ್ತನ ದಯೆ ಮತ್ತು ಸಾರ್ವತ್ರಿಕ ಮಾನವ ಕಲ್ಯಾಣ ಅಡಕವಾಗಿದೆಯೇ ಹೊರತು ಹಿಂಸೆ ಅಲ್ಲವೆನ್ನುವುದು ಸ್ಪಷ್ಟ.

ಬಕ್ರೀದ್(ಬಲಿದಾನದ ಹಬ್ಬ)

ನಮ್ಮ ದೇಶಬಾಂಧವರಲ್ಲಿ ಬಹಳಷ್ಟು ಜನ ಇಸ್ಲಾಮ್ ಧರ್ಮದ ಇತರೆಲ್ಲ ತತ್ವಾದರ್ಶಗಳನ್ನು ಅತ್ಯಂತ ಸಮಂಜಸವೆಂದು ಸಾರಿ ಗೌರವಾದರ ಭಾವನೆಯಿಂದ ಕಾಣುತ್ತಾರೆ. ಆದರೆ ಬಕ್ರೀದ್ ಹಬ್ಬದ ಪ್ರಾಣಿ ಬಲಿದಾನದ ಬಗ್ಗೆ ಅವರಿಗೆ ಆಕ್ಷೇಪವಿದೆ. ಈ ಹಬ್ಬದ ಸರಿಯಾದ ಹಿನ್ನೆಲೆ ಅರಿಯದಿರುವುದೇ ಇದಕ್ಕೆ ಕಾರಣವಾಗಿದೆ. ಬಲಿದಾನದ ಇತಿಹಾಸ ಅತ್ಯಂತ ಹಳೆಯದು. ವೇದ ಕಾಲದಲ್ಲಿ ಯಜ್ಞಯಾಗಾದಿಗಳಲ್ಲಿ ವಿವಿಧ ಪ್ರಾಣಿ-ಪಶುಗಳ ಬಲಿ ಪುಣ್ಯದ ಕಾರ್ಯವಾಗಿತ್ತು. ಈಗಲೂ ವಿವಿಧ ಮಠ-ಮಂದಿರಗಳಲ್ಲಿ ಸಾವಿರಾರು ಪ್ರಾಣಿಗಳ ಬಲಿ ನಮ್ಮ ದೇಶದಲ್ಲಿ ನಡೆಯುತ್ತಿದೆ.

ಏಕೈಕ ಹಿಂದೂ ರಾಷ್ಟ್ರವಾಗಿರುವ ನೇಪಾಳದ ರಾಜಧಾನಿಯಲ್ಲಿರುವ ಸುಪ್ರಸಿದ್ಧ ಕಾಳಿ ಮಂದಿರದಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಪ್ರಾಣಿಬಲಿಯ ಅರ್ಪಣೆಯನ್ನು ಅಲ್ಲಿಯ ಅರ್ಚಕರೇ ನಿರ್ವಹಿಸುತ್ತಾರೆ. ವಿವಿಧ ಜನಾಂಗಗಳು ತಮ್ಮ ಆರಾಧ್ಯ ದೇವಿ-ದೇವತೆಯರ ಸಂತೃಪ್ತಿಗಾಗಿ ಬಲಿ ನೀಡಿದರೆ ಕೆಲವರು ತಮ್ಮ ಪೂರ್ವಜರ ಆತ್ಮಸಂತೃಪ್ತಿಗಾಗಿ ಬಲಿ ನೀಡುತ್ತಾರೆ. ಕೆಲವರು ತಮ್ಮ ಇಷ್ಟಾರ್ಥ ಪೂರ್ತಿಗಾಗಿ ಬಲಿ ನೀಡಿದರೆ, ಮತ್ತೆ ಕೆಲವರು ಇಷ್ಟಾರ್ಥ ಪೂರ್ತಿಯಾದುದಕ್ಕೆ ಕೃತಜ್ಞತೆಯ ರೂಪದಲ್ಲಿ ಬಲಿ ನೀಡುತ್ತಾರೆ. ಕೆಲವರು ಬಲಿದಾನ ತಮ್ಮ ವಿಶ್ವಾಸದ ಅವಿಭಾಜ್ಯ ಅಂಗವೆನ್ನುತ್ತಾರೆ. ನಮ್ಮ ದೇಶದಲ್ಲಿ ಪ್ರಾಣಿಬಲಿಗೆ ಕಾರಣಗಳ ಕೊರತೆ ಇಲ್ಲ. ಗುಪ್ತನಿಧಿಯ ಪ್ರಾಪ್ತಿಗಾಗಿ, ಬಾವಿಯ ನೀರಿಗಾಗಿ, ರೋಗ ಶಮನಕ್ಕಾಗಿ, ಸಂಕಷ್ಟಗಳ ದೂರೀಕರಣಕ್ಕಾಗಿ, ಬೇಟೆಯಾಡುವ ಹವ್ಯಾಸಕ್ಕಾಗಿ, ಕುಲ-ಗೋತ್ರಗಳ ಸನ್ಮಾನಕ್ಕಾಗಿ, ಭರ್ಜರಿ ಪಾರ್ಟಿಗಳಿಗಾಗಿ- ಹೀಗೆ ಇನ್ನೂ ಹಲವು ಕಾರಣಕ್ಕಾಗಿ ಪ್ರಾಣಿಗಳ ಬಲಿ ನಿರಂತರ ನಡೆಯುತ್ತಲೇ ಇದೆ. ನಮ್ಮ ದೇಶದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಮನುಷ್ಯ ಬಲಿಯೇ ಸಾಮಾನ್ಯವಾಗಿರುವಾಗ ಪ್ರಾಣಿಬಲಿಯ ಮಾತು ಅರ್ಥಹೀನವಾಗುತ್ತದೆ. ವರದಕ್ಷಿಣೆ, ಸೋಲು, ಅಗೌರವ, ಪ್ರತಿಭಟನೆಗಳಂತಹ ಕಾರಣಕ್ಕಾಗಿಯೂ ಮಾನವ ಬಲಿ ನಡೆಯುತ್ತಿರುವುದು ಒಂದು ಕಹಿ ಸತ್ಯ. ಕೆಲವರು ಮಾನವ ರಕ್ತ ಬಲಿ ನೀಡಿದರೆ ಮತ್ತೆ ಕೆಲವರು ಶರೀರದ ಅಂಗಾಂಗಗಳನ್ನು ಬಲಿ ನೀಡುತ್ತಾರೆ. ತಲೆಯ ಕೂದಲ ಅರ್ಪಣೆ ತಿರುಪತಿ ದೇವಾಲಯದಲ್ಲಿ ಶತಮಾನಗಳಿಂದ ನಡೆದು ಬಂದಿದೆ. ಬೇಡರ ಕಣ್ಣಪ್ಪನ ಕಣ್ಣಿನ ಅರ್ಪಣೆಯ ಕಥೆ ಯಾರಿಗೆ ತಾನೆ ಗೊತ್ತಿಲ್ಲ.

ಬಕ್ರೀದ್ ಹಬ್ಬ, ಪ್ರವಾದಿ ಇಬ್‌ರಾಹೀಮ್(ಅ) ಹಾಗೂ ಅವರ ಪುತ್ರ ಪ್ರವಾದಿ ಇಸ್ಮಾಈಲ್‌ರ(ಅ), ಏಕದೇವಾರಾಧನೆಯ ಮಾರ್ಗದಲ್ಲಿ ಅನೇಕ ಕಠಿಣ ಪರೀಕ್ಷೆಗೊಳಗಾಗಿ

ತಮ್ಮ ವಿಶ್ವಾಸದಲ್ಲಿ ಅಚಲವಾಗಿ ನಿಂತು ನೀಡಿದ ಅಮೋಘ ತ್ಯಾಗ-ಬಲಿದಾನದ ಅಪೂರ್ವ ಮಾದರಿಯ ಪುಣ್ಯ ಹಾಗೂ ಉಜ್ವಲ ಸ್ಮರಣೆಯಾಗಿದೆ.

ಹಝ್ರತ್ ಇಬ್‌ರಾಹೀಮ್(ಅ) ಯಹೂದಿ, ಕ್ರೈಸ್ತ ಹಾಗೂ ಮುಸ್ಲಿಮರೆಲ್ಲರಿಗೂ ಅತ್ಯಂತ ಗೌರವಾರ್ಹ ಪ್ರವಾದಿ ಪಿತಾಮಹರಾಗಿದ್ದಾರೆ. ಅವರು ಸುಮಾರು ನಾಲ್ಕೂವರೆ ಸಾವಿರ ವರ್ಷಗಳ ಹಿಂದೆ ಇರಾಕಿನಲ್ಲಿ ನಮ್ರೂದನೆಂಬ ರಾಜನ ಆಸ್ಥಾನದ ಪುರೋಹಿತರಾದ ಆಝರ್‌ನ ಪುತ್ರರಾಗಿ ಜನ್ಮ ತಾಳಿದರು. ಬಾಲ್ಯದಲ್ಲಿ ತನ್ನ ತಂದೆಯವರು ತಯಾರಿಸಿದ ಮಣ್ಣಿನ ಪ್ರತಿಮೆಗಳನ್ನು ಮಾರುತ್ತಿದ್ದರು. ಒಂದು ಸಲ ಈ ಪ್ರತಿಮೆಗಳನ್ನು ಒಂದು ಬುಟ್ಟಿಯಲ್ಲಿ ಹೊತ್ತು ಮಾರಲು ಹೋದಾಗ ಮಳೆಯಿಂದ ಪ್ರತಿಮೆಗಳೆಲ್ಲ ನೆನೆದು ಮಣ್ಣಿನ ಮುದ್ದೆಗಳಾದದ್ದನ್ನು ಕಂಡು ಅವರ ಮನಸ್ಸಿನಲ್ಲೊಂದು ಪ್ರಶ್ನೆ ಮೂಡಿತು, "ಈ ಅಸಹಾಯಕ ಪ್ರತಿಮೆಗಳು ಸ್ವಯಂ ತಮ್ಮನ್ನೇ ರಕ್ಷಿಸಲಾರವೆಂದಾದರೆ ನಮ್ಮನ್ನು ಹೇಗೆ ರಕ್ಷಿಸಬಲ್ಲವು?" ತಂದೆಯವರಿಂದಲೂ ಗುರು ಹಿರಿಯರಿಂದಲೂ ಇವರ ಈ ಪ್ರಶ್ನೆಗೆ ಸೂಕ್ತ ಉತ್ತರ ದೊರೆಯಲಿಲ್ಲ. ಉತ್ತರಕ್ಕಾಗಿ ಗಹನವಾದ ಚಿಂತನೆ ನಡೆಸಿದರು. ನಿಸರ್ಗದ ಕಡೆಗೆ ಗಮನಹರಿಸಿದರು. ಸೂರ್ಯ, ಚಂದ್ರ, ನಕ್ಷತ್ರಗಳನ್ನು ಕಂಡು ಇವೆಲ್ಲ ಒಂದು ನಿಯಮಕ್ಕೆ ಬದ್ಧರಾದ ದಾಸರಂತಿವೆ, ಇವಾವುದೂ ಆರಾಧ್ಯರಾಗಲಾರವು. ಇವೆಲ್ಲವುಗಳನ್ನು ಸೃಷ್ಟಿಸಿ ಒಂದು ನಿಯಮದಲ್ಲಿ ಬಂಧಿಸಿ ನಿಯಂತ್ರಿಸುವ ಸರ್ವಶಕ್ತ, ಸರ್ವಜ್ಞ, ಸಾರ್ವಭೌಮ, ಏಕೈಕನೂ ಆದವನೇ ನನ್ನ ಆರಾಧ್ಯ ಪ್ರಭುವೂ, ಜಗದೊಡೆಯನೂ ಆಗಿರುವನೆಂದು ದೃಢವಾಗಿ ನಂಬಿದರು. ಆಗಿನ ಅರಬ್ ಸಮಾಜ ಇವರ ಈ ವಿಶ್ವಾಸವನ್ನು ಧರ್ಮಭ್ರಷ್ಟತೆ ಎಂದು ಸಾರಿ ಅನೇಕ ಕಠಿಣ ಪರೀಕ್ಷೆಗೊಳಪಡಿಸಿತು. ಆದರೆ ಏಕದೇವಾರಾಧನೆಯ ಅವರ ವಿಶ್ವಾಸ ಅಚಲವಾಗಿತ್ತು. ಅದಕ್ಕಾಗಿ ಅವರು ಯಾವ ತ್ಯಾಗ-ಬಲಿದಾನಕ್ಕೂ ಸಿದ್ಧರಾಗಿದ್ದರು. ತನ್ನ ಸಮಾಜವನ್ನೂ ಕಾಲ್ಪನಿಕ ದೇವಿ-ದೇವತೆಗಳ ಬಂಧನದಿಂದ ಮುಕ್ತಗೊಳಿಸ ಬಯಸಿದ್ದರು. ತಾತ - ಮುತ್ತಾತರಿಂದ ಬಂದ ಮೂಢನಂಬಿಕೆ ಹಾಗೂ ಅನಿಷ್ಟಗಳಿಂದ ಹೊರತಂದು ಮನ-ಮಸ್ತಿಷ್ಕವನ್ನು ಮುಟ್ಟುವ ನೈಜ ವಿಶ್ವಾಸದಿಂದ ತನ್ನ ಜನರ ಹೃದಯಗಳನ್ನು ಬೆಳಗ ಬಯಸಿದ್ದರು. ಅಂದಿನ ಅರಬರು ಯಾವೆಲ್ಲ ವಸ್ತುಗಳನ್ನು ಆರಾಧ್ಯರನ್ನಾಗಿಸಿದ್ದರೋ ಅವುಗಳನ್ನು ಆರಾಧಿಸುವುದು ಅವರಿಗೆ ಅಸಾಧ್ಯವಾಗಿತ್ತು. ಮುರಿಯುವ, ಮಾರುವ, ಕೊಳ್ಳುವ, ಕಳವಾಗುವ, ಪ್ರತಿಷ್ಠಾಪನೆ-ವಿಸರ್ಜನೆಗೆ ಸಮ್ಮತಿ-ಅಸಮ್ಮತಿ ನೀಡದ, ಹರಕೆಗಳನ್ನು ಕೇಳದ, ಉತ್ತರ ನೀಡದ, ತನ್ನೆದುರಿಗಿಟ್ಟ ನೈವೇದ್ಯವನ್ನು ಇಲಿ, ಕ್ರಿಮಿ ಕೀಟಗಳಿಂದ ರಕ್ಷಿಸದ ಅಸಹಾಯಕ ಆರಾಧ್ಯರನ್ನು ನಂಬುವುದು ಅವರ ಆತ್ಮಸಾಕ್ಷಿಗೆ ಬಹುದೊಡ್ಡ ಪೆಟ್ಟಾಗಿತ್ತು. ತಾತ-ಮುತ್ತಾತರ ಹಾಗೂ ಸಮಾಜದ ಅಂದಿನ ರಾಷ್ಟ್ರೀಯ ಧಾರೆಯಲ್ಲಿ ವಿಲೀನವಾಗಲಾರೆನೆಂದು ನಿರ್ಧರಿಸಿ ಜನರನ್ನು ವಿಶ್ವದೊಡೆಯನ ವಿಶ್ವಧಾರೆಯಲ್ಲಿ ವಿಲೀನಗೊಳಿಸಲು, ವಿರೋಧದ ಮಹಾಪೂರದಲ್ಲಿಯೂ ಕರೆಕೊಡುವ ಎದೆಗಾರಿಕೆ ತೋರಿದರು.

ತನ್ನ ಈ ದೃಢವಿಶ್ವಾಸಕ್ಕಾಗಿ ತಂದೆ, ಮಗನನ್ನು ಆಸ್ಥಾನ ಪುರೋಹಿತ ಗದ್ದುಗೆಯಿಂದ ವಂಚಿತಗೊಳಿಸಿ ಧರ್ಮಭ್ರಷ್ಟನೆಂದು ಸಾರಿ ಮನೆಯಿಂದ ಹೊರದೂಡಿದರು. ಬೆಂಕಿಯ ಕುಂಡದಲ್ಲಿ ಎಸೆಯಲಾದಾಗ ದೇವನಿಂದ ರಕ್ಷಿಸಲ್ಪಟ್ಟರು. ತಾಯ್ನಾಡಿನಿಂದ ಗಡಿಪಾರು

ಮಾಡಲ್ಪಟ್ಟರು. ಮುಪ್ಪಿನ ವಯಸ್ಸಿನಲ್ಲಿ ಹುಟ್ಟಿದ ಮಗು ಮತ್ತು ಜೀವನ ಸಂಗಾತಿಯಾದ ಪತ್ನಿಯನ್ನು ಅಲ್ಲಾಹನ ಆಜ್ಞೆಯಂತೆ ನೀರು-ನೆರಳುಗಳೇನೂ ಇಲ್ಲದ ಮರುಭೂಮಿಯಲ್ಲಿ ಬಿಟ್ಟರು. ಕೊನೆಗೆ ಮುಪ್ಪಿನ ಆಸರೆ, ತನ್ನ ಸಂದೇಶ ಪ್ರಚಾರದ ಏಕೈಕ ಆಶಾಕಿರಣವಾಗಬಲ್ಲ ಮಗು ಇಸ್ಮಾಈಲರ ಬಲಿ ನೀಡಬೇಕೆಂಬ ಆಜ್ಞೆ ಅಲ್ಲಾಹನಿಂದ ಬಂದ ಕೂಡಲೇ ಅದಕ್ಕೂ ಸಿದ್ಧರಾದರು. ಆದರೆ ಇಷ್ಟೆಲ್ಲ ಸತ್ವ ಪರೀಕ್ಷೆಯಲ್ಲಿ ಸಂಪೂರ್ಣ ಉತ್ತೀರ್ಣರಾದ ಇಬ್‌ರಾಹೀಮ್‌ರಿಂದ(ಅ) ಅಲ್ಲಾಹನಿಗೆ ಮಗನ ಬಲಿ ಬೇಕಾಗಿರಲಿಲ್ಲ. ಕೇವಲ ಪರೀಕ್ಷೆಯೇ ಅದರ ಉದ್ದೇಶವಾಗಿತ್ತು. ಮಗನ ಬದಲಿಗೆ ಒಂದು ಆಡು ಬಲಿ ನೀಡಲ್ಪಟ್ಟಿತ್ತು. ಇಬ್‌ರಾಹೀಮ್(ಅ) ಈ ತ್ಯಾಗ-ಬಲಿದಾನದ ಅಮೋಘ ಘಟನೆಯ ಪುಣ್ಯಸ್ಮರಣೆ ಹಾಗೂ ಏಕದೇವಾರಾಧನೆಯ ಮಾರ್ಗದಲ್ಲಿ ನಾವೂ ಕೂಡಾ ಯಾವುದೇ ತರಹದ ತ್ಯಾಗ-ಬಲಿದಾನಕ್ಕೆ ಸಿದ್ಧರಿದ್ದೇವೆಂದು ಸತ್ಯವಿಶ್ವಾಸಿಗಳು ಸಾಂಕೇತಿಕ ರೂಪದಲ್ಲಿ ಆಚರಿಸುವ ಹಬ್ಬವೇ- ಬಲಿದಾನದ ಹಬ್ಬವಾಗಿದೆ.

ಜಗತ್ತಿನಾದ್ಯಂತ ಈ ಹಬ್ಬವನ್ನು ಆಚರಿಸಲಾಗುತ್ತದೆ. ಹಜ್ಜ್ ಯಾತ್ರೆಗೆ ಹೋದವರೆಲ್ಲ ಇಬ್‌ರಾಹೀಮ್, ಇಸ್ಮಾಈಲ್, ಹಾಜರಾರು(ಅ) ಮಾಡಿದ ಕರ್ಮಗಳನ್ನು ಹಜ್ಜ್‌ಯಾತ್ರೆಯ ಪವಿತ್ರ ಆರಾಧನೆಯ ಭಾಗವಾಗಿಸಿ ಅದರಂತೆ ಆಚರಣೆ ಮಾಡುತ್ತಾರೆ. ಮಾನವ ಸಮಾನತೆ, ಸಹೋದರತೆಯ ಅತ್ಯುನ್ನತ ಜಾಗತಿಕ ಪ್ರದರ್ಶನ ಹಜ್ಜ್ ಯಾತ್ರೆಯಲ್ಲಿ ಆಗುತ್ತದೆ. ಅಲ್ಲಿ ನೆರೆದ ಲಕ್ಷಾವಧಿ ಜನರ ಉಡುಪು ಹೊಲಿಗೆ ಇಲ್ಲದ ಎರಡು ಬಿಳಿ ಬಟ್ಟೆ ಮಾತ್ರ. ಕರಿಯ-ಬಿಳಿಯ, ಅರಬ-ಅರಬೇತರರೆಂಬ ಭೇದಭಾವವಿಲ್ಲ. ಭಾಷೆ, ಹುಟ್ಟು, ಅಧಿಕಾರ, ಹಣ, ಭೂಭಾಗದ ಆಧಾರದಲ್ಲಿಯೂ ಯಾವುದೇ ತಾರತಮ್ಯವಿಲ್ಲ. ಎಲ್ಲರೂ ಹೆಗಲಿಗೆ ಹೆಗಲು ಹಚ್ಚಿ ಸಮಾನರಾಗಿ ಅಲ್ಲಾಹನ ಪ್ರಾರ್ಥನೆಗೆಂದು ನಿಲ್ಲುತ್ತಾರೆ. ಸಮಾನರಾಗಿ ಇತರ ಧಾರ್ಮಿಕ ವಿಧಿಗಳನ್ನೂ ಆಚರಿಸುತ್ತಾರೆ. ಅಲ್ಲಾಹನ ಘನತೆಯ ಘೋಷಣೆಗೈಯುತ್ತಾರೆ. ತನ್ನ ಸಂತೋಷದಲ್ಲಿ ಇತರರನ್ನೂ ಸಹಭಾಗಿಯಾಗಿಸುತ್ತಾರೆ. ಬಲಿ ಪ್ರಾಣಿಯ ಮಾಂಸದ ಮೂರು ಭಾಗ ಮಾಡಿ ಒಂದನ್ನು ಬಡವರಿಗೆ, ಇನ್ನೊಂದನ್ನು ಆಪ್ತರಿಗೆ ನೀಡಿ, ಒಂದು ಭಾಗ ಮಾತ್ರ ತನಗಾಗಿ ಇಟ್ಟುಕೊಳ್ಳುತ್ತಾರೆ. ಹೆಚ್ಚಿನ ಜನರು ಎಲ್ಲವನ್ನೂ ದೂರದ ಬಡ ನಿರಾಶ್ರಿತರಿಗೆ ಮುಟ್ಟಿಸುತ್ತಾರೆ.

ಬಲಿದಾನದ ಹಬ್ಬದ ಬಗ್ಗೆ ಆಕ್ಷೇಪವೆತ್ತುವ ಹಿಂದೂ ಸೋದರರು ವಸ್ತುತಃ ಭಕ್ತ ಪ್ರಹ್ಲಾದನ ಕಥೆಯ ಬಗ್ಗೆ ಚಿಂತನೆ ನಡೆಸಿದರೆ ಸತ್ಯವು ಇನ್ನಷ್ಟು ಸ್ಪಷ್ಟವಾಗುವುದು. ಪ್ರಹ್ಲಾದನ ತಂದೆ ಹಿರಣ್ಯಕಶ್ಯಪನು ತನ್ನನ್ನು ಸ್ವಯಂ ದೇವನೆಂದು ಕರೆಸಿಕೊಳ್ಳುತ್ತಿದ್ದನು. ಪ್ರಜೆಗಳೆಲ್ಲ ಅವನನ್ನು ದೇವರೆಂದು ಅಂಗೀಕರಿಸಿದ್ದರು. ಪ್ರಹ್ಲಾದ ಇದನ್ನು ಅಂಗೀಕರಿಸದ ಕಾರಣ ಆತನನ್ನು ತರತರದ ಪೀಡನೆ, ಯಾತನೆಗೊಳಪಡಿಸಲಾಯಿತು. ಆದಾಗ್ಯೂ ಪ್ರಹ್ಲಾದ ಪಿತನನ್ನು ದೇವನೆಂದು ಒಪ್ಪಲಿಲ್ಲ. ತನ್ನ ಏಕದೇವ ವಿಶ್ವಾಸಕ್ಕಾಗಿ ಬೆಂಕಿಯಲ್ಲಿ ಅರ್ಪಿತನಾಗಲು ಸಿದ್ಧನಾದ. ತನ್ನ ದೃಢನಂಬಿಕೆಗಾಗಿ ಪ್ರಾಣತ್ಯಾಗ ಮಾಡಿದ. ಈ ಘಟನೆಯ ಸ್ಮರಣಾರ್ಥ ಹಿಂದೂ ಬಾಂಧವರು ಪ್ರತಿವರ್ಷ ಹೋಳಿಹಬ್ಬ ಆಚರಿಸುತ್ತಾರೆ.

❖❖❖

ಗೋರಕ್ಷಣೆ

ಹಾಲು-ಹೈನಿನ ಕೊರತೆ ಇರುವ ಕೃಷಿಪ್ರಧಾನ ಭಾರತ ದೇಶದಲ್ಲಿ ಉಪಯುಕ್ತ ಆಕಳನ್ನು ಮಾರುವ ಹಾಗೂ ವಧೆಗಾಗಿ ಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಆರ್ಥಿಕ ದೃಷ್ಟಿಯಿಂದ ಇವೆರಡೂ ಅವ್ಯಾವಹಾರಿಕ. ನೈಜ ಸಮಸ್ಯೆ ಇರುವುದು ನಿರುಪಯುಕ್ತ ಆಕಳುಗಳದ್ದು. ನಮ್ಮ ದೇಶದಲ್ಲಿ ಆಕಳು ಕೆಲವರಿಗೆ ಇತರ ಪ್ರಾಣಿಗಳಂತೆ ಒಂದು ಪ್ರಾಣಿಯಾಗಿದ್ದರೆ ಕೆಲವರಿಗೆ ಅದು ಪವಿತ್ರ ಹಾಗೂ ಪೂಜ್ಯವಾಗಿದೆ. ಹಲವಾರು ಪ್ರಾಣಿಗಳು ಅನೇಕ ಕಾರಣಗಳಿಗಾಗಿ ನಮ್ಮ ದೇಶದಲ್ಲಿ ಪಾವಿತ್ರ್ಯತೆಯನ್ನು ಪಡೆದಿವೆ. ಶ್ರದ್ಧೆ ಮತ್ತು ವಿಶ್ವಾಸದ ವಿಷಯದಲ್ಲಿ ಭಾರತೀಯ ಸಂವಿಧಾನ ಎಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯ ನೀಡಿದೆ. ಆದಾಗ್ಯೂ ಗೋರಕ್ಷಣೆಯ ವಿಷಯ ಆಗಾಗ ಭಯಂಕರ ಭಾವನಾತ್ಮಕ ಸಮಸ್ಯೆ ಆಗುತ್ತಿರುವುದನ್ನು ನಾವು ಕಾಣುತ್ತೇವೆ. ಈ ವಿಷಯಕ್ಕೆ ಸಂಬಂಧಿಸಿ ಎಲ್ಲರೂ ಸೇರಿ ಶಾಂತಿಯುತ ನ್ಯಾಯಸಮ್ಮತ ಪರಿಹಾರ ಪರಸ್ಪರ ಸಮಾಲೋಚನೆಯಿಂದ ಕಂಡುಕೊಳ್ಳುವುದು ಕಠಿಣ ಅಥವಾ ಅಸಾಧ್ಯವಾದ ಕೆಲಸವೇನಲ್ಲ. ಗೋವಿನ ಬಗ್ಗೆ ಶ್ರದ್ಧೆಯುಳ್ಳ ಬಾಂಧವರು ತಮ್ಮ ಪಾಲಿನ ಹೊಣೆಯನ್ನು ನಿಷ್ಠೆಯಿಂದ ನಿರ್ವಹಿಸಿದಲ್ಲಿ ಇತರ ಸಂಬಂಧಿತ ಬಾಂಧವರಿಂದಲೂ ಸಹಕಾರ ಹಸ್ತವನ್ನು ನಿರೀಕ್ಷಿಸಬಹುದು. ಮುಸ್ಲಿಮ್ ಬಾಂಧವರ ಬಗ್ಗೆ ಹೇಳುವುದಾದರೆ ಬಿಚ್ಚು ಮನಸ್ಸಿನ ಸಕಲ ರೀತಿಯ ಸಹಕಾರ ನಿರೀಕ್ಷಿಸಬಹುದು. ಈ ನಿರೀಕ್ಷೆ ಒಬ್ಬ ವ್ಯಕ್ತಿಯ ವೈಯಕ್ತಿಕ ಹೆಬ್ಬಯಕೆಯಾಗಿರದೆ ಇದರ ಹಿಂದೆ ದೃಢವಾದ ಇಸ್ಲಾಮ್ ಧರ್ಮದ ಧಾರ್ಮಿಕ ಬೋಧನೆ ಇರುವುದು ಗಮನಾರ್ಹ ವಿಷಯ.

ಪವಿತ್ರ ಕುರ್‌ಆನಿನ ಕೆಲವು ವಚನಗಳು ಈ ರೀತಿ ಇವೆ:

"ಭೂಮಿಯಲ್ಲಿ ಕ್ಷೋಭೆಯು ರಕ್ತಪಾತಕ್ಕಿಂತಲೂ ಗುರುತರ ಅಪರಾಧವಾಗಿದೆ." (2:217)

"ಪುಣ್ಯ ಹಾಗೂ ದೇವಭಯದ ಕಾರ್ಯಗಳಲ್ಲಿ ಪರಸ್ಪರ ಸಹಕರಿಸಿರಿ, ಪಾಪ ಹಾಗೂ ಅತಿರೇಕದ ಕಾರ್ಯಗಳಲ್ಲಿ ಯಾರೊಂದಿಗೂ ಸಹಕರಿಸದಿರಿ." (5:2)

"ಅವರು (ಮುಸ್ಲಿಮೇತರರು) ಧರ್ಮ ಕಾರ್ಯದಲ್ಲಿ ನಿಮ್ಮಿಂದ ಸಹಾಯ ಕೋರಿದರೆ ಸಹಾಯ ಮಾಡಬೇಕಾದುದು ನಿಮ್ಮ ಮೇಲೆ ಕಡ್ಡಾಯವಾಗಿರುತ್ತದೆ." (8:72)

"(ಓ ಮುಸ್ಲಿಮರೇ) ಅಲ್ಲಾಹನ ಹೊರತು ಅವರು ಯಾರನ್ನು ಪ್ರಾರ್ಥಿಸುತ್ತಾರೋ (ಆರಾಧಿಸುತ್ತಾರೋ) ಅವರನ್ನು ತೆಗಳಬೇಡಿರಿ." (6:108)

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ-ಬಲಾತ್ಕಾರಗಳಿಲ್ಲ." (2:256)

ಎಲ್ಲ ಮನುಷ್ಯರೂ ಪರಸ್ಪರ ಸಹೋದರರು, ಅಲ್ಲಾಹನ ಕುಟುಂಬದ ಸದಸ್ಯರು, ಅಲ್ಲಾಹನ ಸಂಪ್ರೀತಿ ಪ್ರಾಪ್ತಿಗಾಗಿ ಈ ಕುಟುಂಬದೊಂದಿಗೆ ಸದ್ವರ್ತನೆ ಅವಶ್ಯ.

"ಜನರೇ! ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಸ್ತ್ರೀಯಿಂದ ಉಂಟುಮಾಡಿದೆವು, ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಒಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು." (49:13)

ದವಸ-ಧಾನ್ಯ, ಹಣ್ಣು-ಹಂಪಲು, ತರಕಾರಿ ಅಲ್ಲಾಹನ ಕಡೆಯಿಂದ ಮನುಷ್ಯರಿಗೆ ಅನುಗ್ರಹ ಮತ್ತು ಆಹಾರವಾಗಿರುವಂತೆ, ಶುದ್ಧ ಹಾಗೂ ಧರ್ಮಬದ್ಧ ಮಾಂಸ ಕೂಡಾ ಅನುಗ್ರಹ ಮತ್ತು ಆಹಾರವಾಗಿದೆ. ಮಾಂಸಕ್ಕಾಗಿ ಅನುಮತಿಸಿದ ಅನೇಕ ಪ್ರಾಣಿಗಳಲ್ಲಿ ಆಕಳೂ ಒಂದು. ಹಾಗೆಯೇ ತಿನ್ನಲೇಬೇಕೆಂಬ ಕಟ್ಟಾಜ್ಞೆ ಕುರ್‌ಆನ್ ನೀಡಿಲ್ಲವೆಂಬುದೂ ಗಮನಾರ್ಹ. ಅನುಮತಿಯನ್ನು ಆಜ್ಞೆ ಎನ್ನಲಾಗದು.

ಭೂಮಿಯನ್ನು ಕ್ಷೋಭೆಯಿಂದ ರಕ್ಷಿಸಿ, ನ್ಯಾಯ ಸಮಾನತೆ- ಶಾಂತಿಯನ್ನು ಸ್ಥಾಪಿಸಲು, ಒಳಿತಿನ ಆದೇಶ ನೀಡಿ-ಕೆಡುಕುಗಳಿಂದ ರಕ್ಷಿಸಲು ಧಾರ್ಮಿಕ ಆದೇಶ ಪಡೆದ ಮುಸ್ಲಿಮ್ ಸಮುದಾಯದಿಂದ ಒಳಿತಿನ ಕಾರ್ಯಗಳಲ್ಲಿ ಸಹಕಾರದ ನಿರೀಕ್ಷೆ, ಅಪೇಕ್ಷೆ ನಿರಾಧಾರವಾದದ್ದಲ್ಲ ವೆನ್ನುವುದು ಸ್ಪಷ್ಟ.

ಗೋರಕ್ಷಣೆಯ ವಿಷಯದಲ್ಲಿ ಗಮನಾರ್ಹ ಸಂಶೋಧನಾತ್ಮಕ ಲೇಖನ ಹಾಗೂ ಪುಸ್ತಕಗಳನ್ನು ಬರೆದ ಇಸ್ಲಾಮಿ ಧಾರ್ಮಿಕ ವಿದ್ವಾಂಸ, ಮೌ| ಅಬ್ದುಲ್ ಕರೀಮ್ ಪಾರಿಖ್‌ರ ಪುಸ್ತಕ "ಗೋ ಹಂತಕರಾರು? ಅಪರಾಧ ಯಾರ ಮೇಲೆ? Cow slaughter the Culprit behind" (Farid Book Depot Pvt, Ltd. N.Delhi)ದಿಂದ ಕೆಲವು ಸಂಕ್ಷಿಪ್ತ ಸಚಿತ್ರ ಉಪಯುಕ್ತ ಉದಾಹರಣೆಗಳನ್ನು ಇಲ್ಲಿ ವಾಚಕರ ಮುಂದಿರಿಸುತ್ತಿದ್ದೇವೆ.

ನೇಪಾಳ ರಾಜರಾದ ಶ್ರೀ ಗೋಪಾಲ ನರೇಶ ಗ್ಯಾನೇಂದ್ರ ವೀರ ವಿಕ್ರಮ್‌ಶಾ ಮತ್ತು ಅವರ ಧರ್ಮಪತ್ನಿಯವರು ಶ್ರೀ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರಕಾರದ ಸರಕಾರಿ ಅತಿಥಿಗಳಾಗಿ ಭಾರತಕ್ಕೆ ಬಂದಾಗ ಅಸ್ಸಾಮ್ ರಾಜ್ಯದ ಕಾಮಖಿಯಾ ಮಂದಿರದಲ್ಲಿ ಮೊದಲನೆಯ ದಿನ ಐದು ಪ್ರಾಣಿಗಳ ಬಲಿ ನೀಡಿದ್ದು ಮತ್ತು ಮಾರನೆಯ ದಿನ ಕೂಡಾ ಪ್ರಾಣಿಬಲಿ ನೀಡಿದ್ದು ಸಚಿತ್ರ ಪ್ರಕಟವಾಗಿದೆ. (ಲೋಕಮತ ಸಮಾಚಾರ ನಾಗಪುರ, 28 ಜೂನ್ 2002).

ಭಾರತ ಸರಕಾರಕ್ಕೆ ಬೇಕಾದ 12,13,500 ಸಾವಿರ ಡೆಸಿ ಮೀಟರ್ ಕಾಫ್ ಲೆದರಿಗಾಗಿ(ಆಕಳ ಗರ್ಭದಲ್ಲಿರುವ ಕರುವಿನ ಚರ್ಮ) ರಾಷ್ಟ್ರಪತಿಯವರ ಹೆಸರಲ್ಲಿ ಟೆಂಡರು ಕರೆಯಲಾದದ್ದು ಪಾಂಚಜನ್ಯ ಪತ್ರಿಕೆ, 14 Nov. 1999ರಲ್ಲಿ ಪ್ರಕಟವಾಗಿದೆ. ಈ ಚರ್ಮ ಪಡೆಯಲು ಕನಿಷ್ಠ 47,540 ಗೋಹತ್ಯೆ ಮಾಡಬೇಕು. ಇದು ಭಾರತ

ಸರಕಾರದ ಕೇವಲ ರಕ್ಷಣಾ ಇಲಾಖೆಯ ಆವಶ್ಯಕತೆಯಾದರೆ ಇತರ ಸರಕಾರಿ ಮತ್ತು ಸರಕಾರೇತರ ಚರ್ಮದ ಆವಶ್ಯಕತೆಗಳಿಗಾಗಿ ಅದೆಷ್ಟು ಗೋಹತ್ಯೆ ಆಗುತ್ತಿರಬಹುದೆಂಬುದನ್ನು ಊಹಿಸಬಹುದು.

ಜನಸಾಮಾನ್ಯರೆಲ್ಲ ಉಪಯೋಗಿಸುವ ವನಸ್ಪತಿ ತುಪ್ಪ(ಡಾಲ್ಡ)ದಲ್ಲಿ ಕಲಬೆರಕೆಗಾಗಿ ಲಕ್ಷಾವಧಿ ಟನ್ ಆಕಳ ಕೊಬ್ಬನ್ನು ಆಮದು ಮಾಡಿದ ಹೈನುಗಾರಿಕೆಯ ಕೆಲಸವನ್ನು ಒಬ್ಬ ಜೈನ ಧರ್ಮದ ಅನುಯಾಯಿ "ಜೈನ ಶುದ್ಧ ವನಸ್ಪತಿ ಲಿಮಿಟೆಡ್, ದೆಹಲಿ" ಎಂಬ ಹೆಸರಲ್ಲಿ ಮಾಡಿದ್ದನ್ನು ಹಿತ್‌ವದಾ ಪತ್ರಿಕೆ, 26 ಆಗಸ್ಟ್ 1983 ನಾಗ್ಪುರದಿಂದ ಪ್ರಕಟಿಸಿದೆ. "ಅಹಿಂಸಾ ಮನು ಪರಮೋ ಧರ್ಮ" ಅನ್ನುವವರೇ ಈ ಕೆಲಸ ಮಾಡಿದ್ದು ಇದನ್ನು ಸಿ.ಬಿ.ಐ. ವಿಚಾರಣೆಗೆ ಒಳಪಡಿಸಲಾಯಿತು.

ಮಧ್ಯಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಾಧಾಕೃಷ್ಣ ಮಾಲವೀಯರು ವಾಜಪೇಯಿ ಸರಕಾರದ ಅಧಿಕಾರಾವಧಿಯಲ್ಲಿ ಅತಿಹೆಚ್ಚು, ಅಂದರೆ 13 ಲಕ್ಷ 5 ಸಾವಿರ ಟನ್ ಗೋಮಾಂಸ ರಫ್ತು ಆಗಿರುವುದನ್ನು ಅಂಕೆ-ಸಂಖ್ಯೆಯ ಆಧಾರದಲ್ಲಿ ಹೇಳಿಕೆ ನೀಡಿದ್ದನ್ನು "ನವ ಭಾರತ" ಭೋಪಾಲ ಪತ್ರಿಕೆ, 28 ಜನವರಿ 2003ರಂದು ಪ್ರಕಟಿಸಿದೆ.

ಮೌ| ಪಾರಿಖ್‌ರವರು ಸನ್ಮಾನ್ಯ ವಿನೋಬಾ ಭಾವೆಯವರೊಂದಿಗಿನ ತಮ್ಮ ಮುಕ್ತ ಚರ್ಚೆಯ ನಂತರ, ಗೋರಕ್ಷಣೆಯ ತನ್ನ ಸಂಘರ್ಷ ಮುಸ್ಲಿಮರೊಂದಿಗಿರದೇ ಸರಕಾರದೊಂದಿಗೆ ಇದೆ ಎಂದು ಹೇಳಿರುವ ಅವರ ಪ್ರಸ್ತಾಪವನ್ನು ತನ್ನ ಪುಸ್ತಕದಲ್ಲಿ ಬರೆದಿದ್ದಾರೆ. ಸ್ವಾಮಿ ವಿವೇಕಾನಂದರೊಂದಿಗೆ ಗೋರಕ್ಷಾ ಸಭಾದ ಒಬ್ಬ ಸದಸ್ಯರು ಭೇಟಿಯಾದಾಗ ಸ್ವಾಮಿಜಿಯವರು, ದೇಶದಲ್ಲಿ ಬರಗಾಲದಿಂದ ಒಂದು ಲಕ್ಷಜನ ಸತ್ತಿದ್ದಾರೆ ಅವರಿಗಾಗಿ ಏನಾದರೂ ಮಾಡಲು ನಿಮ್ಮ ಹತ್ತಿರ ಏನೂ ಕಾರ್ಯಕ್ರಮವಿಲ್ಲವಾದರೆ ನಿಮ್ಮೊಂದಿಗೆ ನಾನು ಯಾವ ತರದ ಸಂಬಂಧವನ್ನೂ ಇಡಬಯಸುವುದಿಲ್ಲವೆಂದು ತಿಳಿಸಿದ್ದನ್ನು ಪುಟ 72ರಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. (ಶ್ರೀ. ಶರದ್ ಚಂದ್ರ ಚಕ್ರೊಬೋರ್ತಿಯವರ ಪುಸ್ತಕ "ಸ್ವಾಮಿ ವಿವೇಕಾನಂದರ ಸಹವಾಸದಲ್ಲಿ" ಪುಟ: 4-7, ನಾಗಪುರ 17)

ಇನ್ನು ಗೋವಿನ ಬಗ್ಗೆ ಪೂಜ್ಯಭಾವನೆ ಹೊಂದಿರುವ ಬಾಂಧವರು ನಿರ್ವಹಿಸಬೇಕಾದ ಅವರ ಪಾಲಿನ ಹೊಣೆಯ ಬಗ್ಗೆ ಇಡಬಯಸುವ ವಿನಯ ಹಾಗೂ ಸ್ನೇಹಪೂರ್ವಕ ಸಲಹೆಗಳೆಂದರೆ;

1. ಪ್ರಾಣಿಬಲಿ ಮತ್ತು ಗೋವಿನ ಬಲಿಯನ್ನು ಯಜ್ಞಯಾಗಾದಿಗಳಲ್ಲಿ ನೀಡಲಾಗುತ್ತಿತ್ತೆಂಬ ಮಾನ್ಯತೆ ಪಡೆದ ಧಾರ್ಮಿಕ ಗ್ರಂಥಗಳಲ್ಲಿ ಬಂದ ಉಲ್ಲೇಖಗಳ ಬಗ್ಗೆ ಸರಿಯಾದ ಸ್ಪಷ್ಟೀಕರಣ, ಧಾರ್ಮಿಕ ಗ್ರಂಥಗಳಲ್ಲಿ ಗೋವಿನ ನೈಜ ಸ್ಥಾನಮಾನದ ಬಗ್ಗೆ ಇರುವ ಆಧಾರ, ಸ್ಪಷ್ಟ ನಿಲುವಿನ ತಿಳುವಳಿಕೆ ಜನರ ಮುಂದೆ ಇಡಬೇಕು.

2. ಗೋರಕ್ಷಣೆಯ ಗಂಭೀರ ವಿಷಯ ರಾಜಕೀಯ ಬಂಡವಾಳ ಮತ್ತು ಮಾತುಮಾತಿಗೆ ಬೀದಿ ಹಾಗೂ ಹಿಂಸೆಗಿಳಿದ ಜನರ ಒತ್ತೆಯಾಳಾಗದಂತೆ ಎಚ್ಚರವಹಿಸುವುದು.

3. ನಿರುಪಯುಕ್ತ ಆಕಳ ಆರ್ಥಿಕ ಹೊಣೆ ಶ್ರದ್ಧಾಳುಗಳ ಅಭಿಮಾನದ ಕರ್ಮವಾಗಬೇಕು.

4. ಹಿಂದೂ ಬಾಂಧವರಲ್ಲಿ ಯಾರು ಗೋಮಾಂಸ ಸೇವಿಸುವರೋ, ಯಾರು ಸಂಬಂಧಿತ ಉದ್ದಿಮೆಗಳ ಒಡೆಯರು ಅಥವಾ ಕಾರ್ಮಿಕರಾಗಿದ್ದಾರೋ, ಅವರು ತಮ್ಮ ಶ್ರದ್ಧೆಯ ವ್ಯಾವಹಾರಿಕ ಮಾದರಿಯನ್ನು ಜನರ ಮುಂದಿಡಬೇಕು.

5. ಗೋಪಾಲಕ ಒಡೆಯರು ಗೋವಿಗೆ ಕಳಂಕ ಬಾರದಂತೆ, ಸಾರ್ವಜನಿಕರಿಗೆ ತೊಂದರೆಯಾಗದಂತೆ ತಮ್ಮ ಕರ್ತವ್ಯ ನಿರ್ವಹಿಸುವಂತೆ ಮಾಡಲು ಸೂಕ್ತ ಹಾಗೂ ಕಠಿಣ ಕಾನೂನಿನ ರಚನೆಯಾಗಬೇಕು. ನಿರುಪಯುಕ್ತ ಆಕಳುಗಳನ್ನು ಬೀದಿಪಾಲು ಮಾಡುವುದು, ತಿಪ್ಪೆಕಸ, ಪ್ಲಾಸ್ಟಿಕ್ ಇತ್ಯಾದಿ ತಿಂದು ರೋಗಗ್ರಸ್ಥವಾಗಿ ಬಳಲುವುದು, ಸಾಯುವುದು, ಹಸಿದು ಹಸಿರು ಗದ್ದೆಗಳಲ್ಲಿ ಹೊಕ್ಕು ಬೆಳೆ ನಾಶ ಮಾಡುವುದು, ರೈತರಿಂದ ಏಟು ತಿನ್ನುವುದು, ರಸ್ತೆಗಳಲ್ಲಿ ನಿಂತು, ಮಲಗಿ, ಪರಸ್ಪರ ಕಾದಾಡಿ ರಸ್ತೆತಡೆ ಹಾಗೂ ಅಪಘಾತ ಗಳಿಗೆ ಕಾರಣವಾಗುವುದನ್ನು ತಡೆಯಲು ಈ ಕಾನೂನಿನಿಂದ ಸಹಾಯಕವಾಗಬಹುದು.

6. ಪಾನ ನಿಷೇಧವಿದ್ದಲ್ಲಿ ಸಾರಾಯಿ ಮಾರುವುದು ಹೇಗೆ ಶಿಕ್ಷಾರ್ಹ ಅಪರಾಧ ವಾಗಿರುವುದೋ ಗೋಹತ್ಯೆ ನಿಷೇಧವಿರುವಲ್ಲಿ ಗೋವುಗಳ ಮಾರಾಟವೂ ಶಿಕ್ಷಾರ್ಹ ಅಪರಾಧವಾದರೆ ಗೋರಕ್ಷಣೆಯ ಅಭಿಯಾನದಲ್ಲಿ ಇದು ಮಹತ್ವದ ಹೆಜ್ಜೆಯಾದೀತು.

7. ಗೋಮಾಂಸ ಸೇವಿಸುವವರಲ್ಲಿ ಮುಸ್ಲಿಮರ ಸಂಖ್ಯೆ ಪ್ರತಿಶತ ಒಂದಕ್ಕಿಂತ ಕಡಿಮೆ ಇರುವಾಗ ಅವರನ್ನೇ ಅಪರಾಧಿ ಎಂದು ಪರಿಗಣಿಸಿ ಅವರ ವಿರುದ್ಧ ಹಿಂಸೆಗಿಳಿಯುವುದನ್ನು ನಿಲ್ಲಿಸಬೇಕು. ಸಂಬಂಧಿತ ಉಳಿದೆಲ್ಲ ಜಾತಿ, ಜನಾಂಗದ ಜನರೊಂದಿಗೆ ಸಮಾಲೋಚನೆ ನಡೆಸಬೇಕು.

8. ಗೋಹತ್ಯೆ ನಿಷೇಧದಿಂದ ಮುಚ್ಚಲ್ಪಡುವ ಅನೇಕ ಬೃಹತ್ ಉದ್ದಿಮೆಗಳ ಬಗ್ಗೆ ಹಾಗೂ ಲಕ್ಷಾಂತರ ನಿರುದ್ಯೋಗಿಗಳಾಗುವ ಕಾರ್ಮಿಕರ ಪರ್ಯಾಯ ವ್ಯವಸ್ಥೆಯ ಬಗ್ಗೆ ಗಮನ ಹರಿಸಬೇಕು. ಕೋಟ್ಯಾವಧಿ ಬಡ ಜನರು ಅಗ್ಗ ದರದ ಪೌಷ್ಟಿಕ ಆಹಾರದಿಂದ ವಂಚಿತರಾಗುವುದರಿಂದ ಅವರಿಗೂ ಅಗ್ಗ ದರದ ಪೌಷ್ಟಿಕ ಆಹಾರದ ಪರ್ಯಾಯ ವ್ಯವಸ್ಥೆಯ ಬಗ್ಗೆ ಗಮನ ಹರಿಸಬೇಕು.

ದೇಶದ ಹಿತಚಿಂತಕರು, ವಿಶೇಷವಾಗಿ ಧಾರ್ಮಿಕ ಮುಖಂಡರು ಗೋರಕ್ಷಣೆಯ ವಿಷಯವನ್ನು ರಾಜಕೀಯ ದುರ್ಬಳಕೆಗೆ ಬಿಟ್ಟುಕೊಡದೆ ಪರಸ್ಪರ ಧಾರ್ಮಿಕ ಭಾವನೆಗಳನ್ನು ಅರಿತು ಸಮಾಲೋಚನೆಯ ಮೂಲಕ ಪರಿಹಾರ ಕಂಡುಕೊಳ್ಳಲು ನಿಷ್ಠಾಪೂರ್ವಕ ಪ್ರಯತ್ನ ಮಾಡಬೇಕು. ಸರಕಾರ ಸಹಿತ ಸಂಬಂಧಿತ ಎಲ್ಲ ಜನರನ್ನೂ ಒಟ್ಟು ಸೇರಿಸಿ, ಸಮಸ್ಯೆಯ ಎಲ್ಲ ಮಗ್ಗುಲುಗಳ ಬಗ್ಗೆ ಕೂಲಂಕಷ, ಮುಕ್ತ ಹಾಗೂ ಸೌಹಾರ್ದಪೂರ್ಣ ಚರ್ಚೆಗೆ ಅವಕಾಶ ಕಲ್ಪಿಸಬೇಕು. ವಿವಿಧತೆಯಲ್ಲಿ ಏಕತೆ ನಮ್ಮ ದೇಶದ ವೈಶಿಷ್ಟ್ಯ. ನಮ್ಮದು ಬಹುಧರ್ಮೀಯ ದೇಶ. ಎಲ್ಲ ಧರ್ಮಗಳನ್ನೂ ಸಮಾನ ಗೌರವದಿಂದ ಕಾಣುವ ಜಾತ್ಯತೀತ ಧೋರಣೆಯೇ ಸರಕಾರದ ಧರ್ಮವಾಗಬೇಕು. ಶತಮಾನಗಳಿಂದ ವಿವಿಧ

ಧಾರ್ಮಿಕ ವಿಶ್ವಾಸ ಹಾಗೂ ಶ್ರದ್ಧೆಯ ಜನರು ತಮ್ಮ ಧಾರ್ಮಿಕ ವಿಶ್ವಾಸ ಮತ್ತು ಶ್ರದ್ಧೆಯ ಬಗ್ಗೆ ಪ್ರೇಮ ಹಾಗೂ ಅಭಿಮಾನ ಹೊಂದಿರುವುದರೊಂದಿಗೆ ಇತರ ಜನಾಂಗಗಳ ಧಾರ್ಮಿಕ ವಿಶ್ವಾಸ ಹಾಗೂ ಶ್ರದ್ಧೆಗಳ ಬಗ್ಗೆ ಗೌರವ ಮತ್ತು ಸಹನೆ ಹೊಂದಿರುವುದು ಸಹೋದರ ಸಹಬಾಳುವೆಗೆ ಕಾರಣವಾಗಿದೆ. ಇಂತಹ ಬಾಳುವಿಕೆಯಿಂದ ಪರಸ್ಪರ ವಿಶ್ವಾಸ ಬೆಳೆಯುವುದು, ದೇಶದಲ್ಲಿ ಶಾಂತಿ ನೆಲೆಸುವುದು. ಮಾನ್ಯ ರಾಷ್ಟ್ರಪತಿಗಳಾದ ಎ. ಪಿ. ಜೆ. ಕಲಾಮರ ಅಭಿಲಾಷೆಯಂತೆ 2020ರೊಳಗೆ ನಮ್ಮ ದೇಶ ಅಭಿವೃದ್ಧಿ ಹೊಂದಿದ ದೇಶಗಳ ಶ್ರೇಣಿಯಲ್ಲಿ ಸೇರುವುದು ಖಚಿತವಾಗುವುದು. ಶಾಂತಿಯುತ ಸಹೋದರ ಸಹಬಾಳ್ವೆಗೆ ಭದ್ರ ಬುನಾದಿಯಾಗುವುದು ಹಾಗೂ ಶಾಶ್ವತ ಶಾಂತಿಗೆ ನಾಂದಿಯಾಗುವುದು. ಇಂತಹ ಸೌಹಾರ್ದಪೂರ್ಣ ವಾತಾವರಣದಲ್ಲಿ ವಿವಿಧ ಜನಾಂಗಗಳಿಗೆ ತಮ್ಮ ತಮ್ಮ ಧರ್ಮ, ಸಂಸ್ಕೃತಿ, ಭಾಷೆ ಇತ್ಯಾದಿಗಳ ರಕ್ಷಣೆಗಾಗಿ ತಮ್ಮದೇ ಆದ ಸಂಘ ಸಂಸ್ಥೆ ಅಥವಾ ಸೇನೆಗಳನ್ನು ಕಟ್ಟಬೇಕಾಗುವುದಿಲ್ಲ. ಎಲ್ಲ ಜನಾಂಗದ ಜನರು ತಮ್ಮೆಲ್ಲ ಶಕ್ತಿ, ಸಾಮರ್ಥ್ಯ, ಸಂಪತ್ತು, ನೈಪುಣ್ಯ, ಸಮಯ ಇತ್ಯಾದಿಗಳನ್ನು ಸೀಮಿತ ಉದ್ದೇಶಗಳಿಗಾಗಿ ವ್ಯಯ ಮಾಡಬೇಕಾಗುವುದಿಲ್ಲ. ಸರ್ವರೂ ತಮ್ಮ ಸರ್ವಸ್ವವನ್ನೂ ದೇಶದ ಸರ್ವತೋಮುಖ ಪ್ರಗತಿ ಹಾಗೂ ಜನಕಲ್ಯಾಣಕ್ಕಾಗಿ ಸಮರ್ಪಿತವಾಗುವಂತೆ ಮಾಡಬಹುದು. ಇದುವೇ ದೇಶಪ್ರೇಮದ ನಿಜವಾದ ಬೇಡಿಕೆ.

೩೦೦೫